Sri S. NIJALINGAPPA (Chief Minister).—Sir, as Chairman of the Museum, I would request every Hon'ble Member to visit the place. I do not suggest the exact hour. But as Leader of the House, I do make a request that they may be pleased to visit the Museum. We may meet at 12 noon tomorrow.

At the same time, I would like to suggest --we have got only three days more; including today, it will be four. We may dispense with the question hour and take up the financial business straightaway, because we have already finished a large number of questions. You were pleased to allow 12 questions per day.

Mr. SPEAKER.—Today we had 13 questions.

Sri S. NIJALINGAPPA.—It is very good of you, Sir, and very good of the Members to have co-operated with the Chair. I suggest that we may do away with the question-hour for the next three days. I suggest that we may rise at 6 p.m. today and meet tomorrow at 12 noon.

Sri S. SHIVAPPA.—Sir, it is very good that the Museum has come in our way. I suggest that we may start work tomorrow at 10 a.m. This demand is a very big demand and many Members are anxious to speak. It is better we start one hour earlier at 10 a.m. instead of 11 a.m. as suggested by the Chief Minister.

Mr. SPEAKER.—The Hon'ble Leader of the House suggested 12 noon and he says that we can dispense with the question-hour.

Sri B. HUTCHE GOWDA (Turuvekere).—No Sir, we must have the question hour.

Mr. SPEAKER.— There are other Members also. It is not one Member's opinion that prevails. I am just adjusting time.

For tomorrow, my suggestion is, if the House agrees we will dispense with the question-hour for only one day. May I suggest that from 10 a.m. to 12 noon we will sit and finish this Demand and then we will take up the next Demand as usual? Two hours, *viz.* 10 to 12 will be taken up by the Ministers for reply. No Member will participate. By six o'clock today, all the Members will finish their speeches.

Should I reduce the time in order to enable more Members to participate, *i.e.* from 15 to ten minutes ?

AN HON'BLE MEMBER.—No, Sir.

Mr. SPEAKER.—Very emphatic. Then we will keep fifteen minutes. I call upon Sri Gowdiah to speak.

BUDGET ESTIMATES FOR 1962-63--VOTING OF DEMANDS FOR GRANTS

DEMANDS Nos. 31, 48, 49, 29, 30, 45, 43, 47, 32 and 50.

(Debate continued)

ಡಾ॥ ಕೆ. ಎಸ್. ಗೌಡಯ್ಯ (ಕೃಷ್ಣರಾಜನಗರ).—ಅಧ್ಯಕ್ಷರೇ, ನಮ್ಮ ಮೈಸೂರು ದೇಶದ 74,861 ಚದುರ ಮೈಲಿ ವಿಸ್ತೀರ್ಣದಲ್ಲಿ ಸುಮಾರು 44,613 ಚದುರ ಮೈಲಿಗಳು ಕೃಷ್ಣಾನದಿಯ ಬಯಲಿನಲ್ಲಿದೆ. ಹಾಗೆಯೇ 12,805 ಚದುರ ಮೈಲಿಗಳು ಕಾವೇರಿ ನದಿಯ ಬಯಲಿನಲ್ಲಿದೆ. ನಮ್ಮ ದೇಶದಲ್ಲಿ ವ್ಯವಸಾಯಕ್ಕೆ ಯೋಗ್ಯವಾಗಿರುವ ಜಮೀನು 35 ದಶ ಲಕ್ಷ ಎಕರೆಗಳು ಎಂಬುದಾಗಿ ಲೆಕ್ಕಾಚಾರ ಮಾಡಿದ್ದಾರೆ, ನಮ್ಮ ಇಂಡಿಯಾ ಸರ್ಕಾರದವರು ಈ ವ್ಯವಸಾಯಕ್ಕೆ ಯೋಗ್ಯವಾದ ಜಮೀನಿನಲ್ಲಿ ಪ್ರತಿಯೊಂದು ಪ್ರಾಂತ್ಯದಲ್ಲೂ ನೀರಾವರಿ ಪ್ರದೇಶ ಗಳು ಇಷ್ಟೇ ಇರಬೇಕು ಎಂಬುದಾಗಿ ಒಂದು ನಿರ್ದಿಷ್ಟವಾದ ಸೂಚನೆಯನ್ನು ಕೊಟ್ಟಿದ್ದಾರೆ. ನೀರಾವರಿ ಪ್ರದೇಶ ಶೇ. 24 ಭಾಗ ಇರಬೇಕೆಂದು ಹೇಳಿದ್ದಾರೆ. ಆದರೆ ನಮ್ಮ ಮೈಸೂರು ಪ್ರಾಂತ್ಯ ಈ ದಿಶೆಯಲ್ಲಿ ಬಹಳ ಹಿಂದುಳಿದಿದೆ ಎಂಬುದಾಗಿ ನಾನು ಹೇಳಬೇಕು. ನಮ್ಮ ಮೈಸೂರಿನಲ್ಲಿ ಎಷ್ಟೋ ನದಿಗಳಿವೆ ಮತ್ತು ಕೆರೆಗಳಿವೆ. ಅವನ್ನೆಲ್ಲಾ ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಂಡು ಇರ್ರಿಗೇಷನ್ ಪೊಟೆನ್ಸಿಯಲ್ ಎಂದು ಏನು ಹೇಳುತ್ತಾರೋ ಅದನ್ನೆಲ್ಲಾ ಈಗ ಉಪಯೋಗಿಸಿಕೊಂಡರೆ 8.2 ದಶ ಲಕ್ಷ ಎಕರೆಗಳು ನೀರಾವರಿ ಪ್ರದೇಶ ಬರುತ್ತದೆಂದು ಗೊತ್ತಾಗುತ್ತದೆ. ಎಲ್ಲಾ ಇರಿಗೇಷನ್ ಪೊಟೆನ್ಸಿಯಲ್ ಉಪಯೋಗಿಸಿಕೊಂಡರೆ ಶೇ. ಇಪ್ಪತ್ತೊಂರು ವರೆಯಷ್ಟು ನೀರಾವರಿ ಪ್ರದೇಶವಾಗುವುದು ಎಂಬುದಾಗಿ ನನಗೆ ತಿಳಿದು ಬಂದಿದೆ. ಹೀಗಿರುವಾಗ ನಾವು ಹೆಚ್ಚು ಶ್ರದ್ಧೆ ವಹಿಸಿ ಈ ಕಾರ್ಯವನ್ನು ಕೈಗೊಳ್ಳದೇ ಹೋದರೆ ನಮ್ಮ ಜನರ ಆರ್ಥಿಕ ಪರಿಸ್ಥಿತಿ, ಜೀವನ ಮಟ್ಟ ಎಲ್ಲಾ ಬಹಳವಾಗಿ ಹಿಂದುಳಿಯುತ್ತದೆಂದು ನಾನು ಹೇಳಬೇಕಾಗಿದೆ. ನಮ್ಮ ದೇಶದ ಹವಾಗುಣ ಪ್ರಕಾರ ಮೈಸೂರು ದಕ್ಷಿಣ ಭಾಗದಲ್ಲಿ ಅಲ್ಪಸ್ವಲ್ಪ ಮಳೆ ಬೀಳುವುದರಿಂದ ಮಾಧ್ಯಮ ಮತ್ತು ಸಣ್ಣ ನೀರಾವರಿ ಯೋಜನೆಗಳನ್ನು ಕೈಗೊಳ್ಳುವುದಕ್ಕೆ ಅವಕಾಶವಿದೆ. ಆದರೆ ಮೈಸೂರು ದೇಶದ ಉತ್ತರ ಮತ್ತು ಪೂರ್ವ ಭಾಗದಲ್ಲಿ ಮಳೆ ಅಭಾವ ಹೆಚ್ಚು, ವರ್ಷಕ್ಕೆ 24"ಗಿಂತ ಕಡಮೆ ಮಳೆ ಬೀಳುತ್ತದೆ. ಕೆಲವು ಕಡೆಗಳಲ್ಲಿ ಕೇವಲ 12" ಅಥವಾ 13"ನಷ್ಟು ಮಳೆಯಾಗುವ ಪ್ರಸಂಗವು ಇದೆ. ಇಂಡಿಯಾ

ದೇಶದಲ್ಲಿ ಥಾರ್ ಮರುಭೂಮಿ ಒಂದನ್ನು ಬಿಟ್ಟರೆ ಮೈಸೂರು ದೇಶದ ಉತ್ತರ ಭಾಗ ನೀರಿನ ಅಭಾವಕ್ಕೆ ಮಿಾಸಲಾಗಿಡಲಾಗಿದೆ ಎಂಬುದಾಗಿ ನಾನು ಹೇಳಬಹುದು ಮತ್ತು ಆ ಭಾಗದಲ್ಲಿ ವ್ಯವಸಾಯಕ್ಕೆ ಯೋಗ್ಯವಾದ ಜಮಿಾನು ಬೇಕಾದಷ್ಟು ಇದೆ. ಅಂಥಾದ್ದರಲ್ಲಿ ಆ ಭಾಗದ ಕೃಷ್ಣಾನದಿಯ ನೀರನ್ನು ಸರಿಯಾಗಿ ಉಪಯೋಗಿಸಿಕೊಳ್ಳದೇ ಹೋದರೆ ನಾವು ಇಂಡಿಯಾ ದೇಶದ ಮಟ್ಟವೇನಿದೆ ಅದನ್ನು ತಲಪುವುದಕ್ಕೆ ಅವಕಾಶವಾಗುವುದಿಲ್ಲವೆಂದು ಖಂಡಿತವಾಗಿ ಹೇಳಬಹುದು.

ಈ ದೃಷ್ಟಿಯಿಂದ ನಮ್ಮ ಸರ್ಕಾರದವರು ಈಗ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಅಪ್ಪರ್ ಕೃಷ್ಣಾ ಪ್ರಾಜೆಕ್ಟು, ಮಲಪ್ರಭಾ ಪ್ರಾಜೆಕ್ಟು ಇವು ಗಳನ್ನೆಲ್ಲಾ ಸೇರಿಸಿಕೊಂಡಿದ್ದಾರೆ. ಮತ್ತು ಕೃಷ್ಣಾ ನದೀ ನೀರಿನಲ್ಲಿ ಶೇಕಡ 47½ ಭಾಗ ಮೈಸೂರಿಗೆ ಬರಬೇಕು. 47½ ಭಾಗ ಎಂದರೆ 1,250 ಟಿ. ಎಂ. ಸಿ ಅಡಿಗಳಷ್ಟು ಆಗುತ್ತದೆ ಮತ್ತು ಗೋದಾವರಿ ನದಿಯಿಂದ 24 ಟಿ. ಎಂ. ಸಿ ಅಡಿಗಳಷ್ಟು ಆಗುತ್ತದೆ. ಇಷ್ಟು ನೀರನ್ನು ಪಡೆಯಲಿಕ್ಕೆ ಎಲ್ಲಾ ಸೂಕ್ತ ಕ್ರಮಗಳನ್ನು ತೆಗೆದುಕೊಂಡು ನಮ್ಮ ಮೈಸೂರಿನ ಉತ್ತರ ಮತ್ತು ಪೂರ್ವ ಭಾಗದಲ್ಲಿ ನೀರಿನ ಅಭಾವದಿಂದ ಕ್ಷಾಮ ಡಾಮರಗಳೇನು ಬರುತ್ತಾ ಇವೆ ಅವನ್ನು ತಪ್ಪಿಸಿ ಆ ಜನಗಳಿಗೆ ಹೆಚ್ಚಿನ ಸೌಕರ್ಯ ಒದಗಿಸುವ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಹಾಗೆಯೇ ಕಾವೇರಿ ಬಯಲಿಗೆ ಬಂದರೆ, ಹಾರಂಗಿ, ಕಂಬದ ಕಡ ಮತ್ತು ಗೊರೂರು ಈ ಯೋಜನೆಗಳು ನಮ್ಮ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಅಡಕವಾಗಿವೆ. ಇವಕ್ಕೆ ಆಗಲೇ ೧೯೬೧-೬೨ಕ್ಕೆ ಸ್ವಲ್ಪ ಹಣ ಒದಗಿಸಿದ್ದಾರೆ. ಅದು ಇನ್ನೂ ಖರ್ಚಾಗಿಲ್ಲ. ಹಾರಂಗಿಯ ವಿಚಾರವಾಗಿ ಹೇಳಬೇಕಾದರೆ, ಈ ಯೋಜನೆ, ಸ್ವಾಮಿ, ನಮ್ಮ ಕೃಷ್ಣರಾಜನಗರ, ಹೊಳೇನರಸೀಪುರ, ಪಿರಿಯಾಪಟ್ಟಣ ಮತ್ತು ಅರಕಲಗೂಡು ತಾಲ್ಲೂಕುಗಳಲ್ಲಿ ಜನಗಳ ಮನಸ್ಸನ್ನು ಬಹಳವಾಗಿ ಕಲಕಿರತಕ್ಕ ವಿಷಯ. ಎಲ್ಲಿ ನೋಡಲಿ ಜನಗಳು ಹಾರಂಗಿ, ಕಂಬದ ಕಡ ಈ ವಿಷಯವಾಗಿ ಮಾತನಾಡುತ್ತಾ ಇರುತ್ತಾರೆ. ಸಂತೆಯಲ್ಲಿ, ಅಂಗಡಿಯಲ್ಲಿ ಎಲ್ಲಿ ಹೋದರೂ ಇದರ ವಿಷಯವೇ, ಮತ್ತು ಚುನಾವಣೆಯ ಪ್ರಣಾಳಿಕೆಯಲ್ಲೂ ಇದು ಸೇರಿದೆ. ಈ ಒಂದು ಪ್ರಶ್ನೆಯ ಮೇಲೆ ಈ ಚುನಾವಣೆ ನಡೆಯಿತು ಎಂದೂ ಕೂಡ ಹೇಳಬೇಕಾಗಿದೆ. ನಮ್ಮ ಸರ್ಕಾರದವರು ಇದನ್ನು ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿದ್ದಾರೆ. ಅದರಲ್ಲೂ ಈ ಹಿಂದೆ ಇದ್ದಂಥ ಹಳೇ ಕೊಡಗಿನ ಸರ್ಕಾರದವರು ಹಾರಂಗಿ ನದಿಗೆ ಅಡ್ಡಲಾಗಿ ಮೂರು ಕಡೆ ಅಣೆಕಟ್ಟು ಕಟ್ಟಲಿಕ್ಕೆ ಒಂದು ಸರ್ವೇ ನಡೆಸಿದರು. ಹುದುಗೂರು, ಬಟನ ಹಳ್ಳಿ, ಹರದೂರು ಇವುಗಳ ಪೈಕಿ ಹರದೂರಿನ ಹತ್ತಿರ ಕಟ್ಟತಕ್ಕ ಜಲಾಶಯ ಬಹಳ ಉತ್ತಮವಾದದ್ದು ಎಂಬುದಾಗಿ ಇತ್ತೀಚೆಗೆ ತಿಳಿಸಿದ್ದಾರೆ. ಇದರಲ್ಲಿ ೧೨.೪ ಟಿ. ಎಂ. ಸಿ. ಅಡಿಗಳಷ್ಟು ನೀರನ್ನು ಶೇಖರಣೆ ಮಾಡಬಹುದು. ಸುಮಾರು 1 ಲಕ್ಷ 5 ಸಾವಿರ ಎಕರೆ ಜಮೀನಿಗೆ ನೀರನ್ನು ಒದಗಿಸಬಹುದು ಎಂದು ತಿಳಿಸಿದ್ದಾರೆ. ಇದರಲ್ಲಿ ಮುಳುಗಡೆಯಾಗತಕ್ಕ ಗ್ರಾಮಗಳು ಒಂದೇ ಒಂದು. ಒಂದು ಹಳ್ಳಿ ಮತ್ತು ನೂರು ಸಂಸಾರಗಳಿಗೆ ಮಾತ್ರ ತೊಂದರೆಯಾಗುತ್ತದೆ. ಅವನ್ನು ಬೇರೆ ಕಡೆಗೆ ವರ್ಗಾಯಿಸಲು ಬಹಳ ಸುಲಭವಾದದ್ದು. ಆರ್ಥಿಕವಾಗಿ ಬಹಳ ಉತ್ತಮವಾದ ಯೋಜನೆ ಎಂದು ಗೊತ್ತಾಗಿದೆ. ಈ ಕೆಲವು ಕಾರಣಗಳಿಂದ ಈ ಯೋಜನೆಯನ್ನು ೧೯೬೧-೬೨ರಲ್ಲಿ ತೆಗೆದುಕೊಳ್ಳಬೇಕಾದದ್ದನ್ನು ಸ್ವಲ್ಪ ಮುಂದಕ್ಕೆ ಹಾಕಿದ್ದಾರೆ. ಅದು ನಮ್ಮ ದೇಶದ ಹಿತದೃಷ್ಟಿಯಿಂದ ನಮ್ಮ ಶ್ರೇಯಸ್ಸಿಗೆ ಸರಿಯಾದ್ದಲ್ಲ ಎಂದು ನಾನು ನಮ್ಮ ಮುಖ್ಯ ಮಂತ್ರಿಗಳಲ್ಲಿ ಬಿನ್ನೈಸಿಕೊಳ್ಳುತ್ತೇನೆ. ಈ ನಮ್ಮ ದೇಶದಲ್ಲಿ ಏನು ಪ್ರಕೃತಿ ಸಂಪತ್ತು ಇದೆ ಅದನ್ನು ಸರಿಯಾಗಿ ಉಪಯೋಗಿಸಿಕೊಳ್ಳಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳ ಭಾಷಣದಲ್ಲಿ ಆಗಾಗ್ಗೆ ಕೇಳುತ್ತಲೇ ಇದ್ದೇವೆ. ಅದಕ್ಕೆ ಸರಿಯಾಗಿ ಅವರು ಈ ಪ್ರಕೃತಿ ಸಪಂತ್ತನ್ನು ಸರಿಯಾಗಿ ಉಪಯೋಗಿಸಿಕೊಳ್ಳುವುದಕ್ಕೆ ಒಂದು ಅವಕಾಶ ಮಾಡಿ ಕೊಡುತ್ತಾರೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಈ ಹರದೂರಿನ ಹತ್ತಿರ ಅಣೆಕಟ್ಟು ಕಟ್ಟಿದರೆ ಅದು ಹುದುಗೂರಿಗಿಂತ ೧೧೬ ಅಡಿ ಎತ್ತರದಲ್ಲಿ ಇದೆ ಎಂದು ತಿಳಿದುಬಂದಿದೆ. ಎತ್ತರ ಹೆಚ್ಚಾದ್ದರಿಂದ ಮುಂದೆ ಅಲ್ಲಿ ವಿದ್ಯುಚ್ಛಕ್ತಿಯ ಉತ್ಪಾದನೆಗೂ ಸೌಕರ್ಯವುಂಟು ಎಂದು ಹೇಳಬಯಸುತ್ತೇನೆ. ಇಲ್ಲಿ ಜಲಾಶಯದಿಂದ ಮುಳುಗಡೆಯಾಗುವುದು ಸುಮಾರು ೫,೦೧೦ ಎಕರೆ ಎಂದು ತಿಳಿದು ಬಂದಿದೆ. ಇದರಲ್ಲಿ ಖಾಸಗೀ ಜನರಿಗೆ ೪,೫೬೬ ಎಕರೆ ಸೇರಿದೆ; ಉಳಿದಿದ್ದು ಸರ್ಕಾರಿ ಬಂಜರು ಭೂಮಿ. ಖಾಸಗೀ ಜನರಿಗೆ ಸೇರಿರತಕ್ಕ 4,566 ಎಕರೆ ಜಮೀನಿನಲ್ಲಿ ಸುಮಾರು 1,478 ಎಕರೆ ಪ್ಲಾಂಟೇಷನ್ ಬೆಳೆಯಲ್ಲಿದೆ. 1,074 ಎಕರೆ ಗದ್ದೆ ಜಮೀನು, ಇನ್ನು ಉಳಿದದ್ದು ಬಂಜರು ಭೂಮಿ ಎಂದು ಇದೆ. ಹೀಗಿರುವಾಗ ಮುಳುಗಡೆಯಾಗತಕ್ಕ ಜಮೀನು ಬಹಳ ಕಡಮೆ, ನಷ್ಟವೂ ಬಹಳ ಕಡಮೆ ಇದೆ. ಈ ಯೋಜನೆಯಿಂದ ಆದಾಯ ಬಹಳ ಹೆಚ್ಚಾಗಿದೆ ಎಂದು ತಿಳಿದು ಬರುತ್ತದೆ. ಫೈನಾನ್ಶಿಯಲ್ ರಿಟರ್ನ್ಸ್ ಶೇಕಡ 4.7 ಎಂದು ತಿಳಿಸಿದ್ದಾರೆ. ನಮ್ಮ ಕೊಡಗಿನ ಸ್ನೇಹಿತರು ಇದಕ್ಕೆ ಸ್ವಲ್ಪ ಅಡ್ಡಿ ಬರಬಹುದು. ಆದರೆ ಅವರನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಹೆಚ್ಚು ಜನರ ಹಿತ ದೃಷ್ಟಿಯಿಂದ ಅವರು ಸ್ವಲ್ಪ ತ್ಯಾಗ ಮಾಡಬೇಕು. ಜೊತೆಗೆ ಯಾರಿಗೆ ತೊಂದರೆಯಾಗುತ್ತದೆಯೋ ಅಂಥಾ ಜನಗಳಿಗೆ ಇದರಲ್ಲಿ ಫೈನಾನ್ಶಿಯಲ್ ರಿಟರ್ನ್ಸ್ ಹೆಚ್ಚಿಗೆ ಇರುವುದರಿಂದ—ಶೇಕಡ 4.7 ಇರುವುದರಿಂದ—ಕಾಂಪೆನ್ಸೇಷನ್ ಹೆಚ್ಚಿಗೆ ಕೊಡಬಹುದು ಎಂದು ನನ್ನವಾದ. ಮತ್ತು ಈ ಪ್ರಾಂತ್ಯದಲ್ಲಿ ಇನ್ನೇನಾದರೂ ವಿಶೇಷವಾದಂಥ ರೀತಿಯಲ್ಲಿ ಸೌಕರ್ಯವನ್ನು ಆ ಜನಗಳಿಗೆ ಒದಗಿಸಿಕೊಡಬಹುದು. ಹೀಗೆ ಮಾಡುವುದರಿಂದ ಆ ಸ್ನೇಹಿತರು ಈ ಹಾರಂಗಿ ಜಲಾಶಯ. ಹರದೂರು ಹತ್ತಿರ 207 ಅಡಿ ಎತ್ತರ ಕಟ್ಟಲಿಕ್ಕೆ ಒಂದು ಅವಕಾಶ ಮಾಡಿಕೊಟ್ಟು ಸರ್ಕಾರದವರು ಈ ವರ್ಷವೇ ಈ ಕೆಲಸ ಪ್ರಾರಂಭ ಮಾಡಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

1924 ನೇ ಇಸವಿಯ ಮೈಸೂರು—ಮದರಾಸು ಒಪ್ಪಂದದ ಪ್ರಕಾರ ನಮಗೆ ಇನ್ನೂ ಒಂದು ಲಕ್ಷ 10 ಸಾವಿರ ಎಕರೆ ಭೂಮಿಯನ್ನು ತರೀ ಸಾಗುವಳಿಗೆ ತರಲಿಕ್ಕೆ ಅವಕಾಶವಿದೆ. 45 ಟಿ. ಎಂ. ಸಿ. ಅಡಿಗಳಷ್ಟು ನೀರನ್ನು ಉಪಯೋಗಿಸಿಕೊಳ್ಳಲಿಕ್ಕೆ ಅವಕಾಶವಿದೆ. ಈಗ ಹೊಗೆನ ಕಟ್ಟೆ ಪ್ರಾಜೆಕ್ಟನ್ನು ಕೊಳ್ಳೇಗಾಲದ ಹತ್ತಿರ ಕೈಕೊಳ್ಳಬೇಕೆಂದು ಮದ್ರಾಸ್ ಸರ್ಕಾರದವರು ಯೋಚಿಸಿದ್ದಾರೆ. ಮೈಸೂರು ಸರ್ಕಾರದೊಡನೆ ವ್ಯವಹಾರ ಮಾಡಲಿಕ್ಕೆ ಬಂದಿದ್ದಾರೆ. ಬಂದಿರುವ ಸಮಯದಲ್ಲಿ ನಮಗೆ ಬಂದಷ್ಟು ಚೌಕಸಿ ಮಾಡಿ ಒಪ್ಪಂದದಲ್ಲಿ ಅನನುಕೂಲವಾದ ಪರಿಸ್ಥಿತಿ ಏನೇನು ಇದೆಯೋ ಅದನ್ನು ತಪ್ಪಿಸಿಕೊಳ್ಳ

(ಡಾ|| ಕೆ. ಎಸ್. ಗೌಡಯ್ಯ)

ಲಕ್ಕೆ ನಮ್ಮ ಸರ್ಕಾರದವರು ಪ್ರಯತ್ನ ಮಾಡಬೇಕು. ಮೊನ್ನೆ ಪತ್ರಿಕೆಯಲ್ಲಿ ಓದಿದೆ ಈ ತರಹ ಒಂದು ಸಡಿಲ ಮಾಡಿಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತಾ ಇದ್ದಾರೆ ಎಂದು. ಅದು ನಿಜವಾಗಿಯು ಶ್ಲಾಘನೀಯವಾದದ್ದು. ನಿಜವಾಗಿಯೂ ನಮ್ಮ ಸರ್ಕಾರದವರನ್ನು ಈ ವಿಷಯ ದಲ್ಲಿ ಅಭಿನಂದಿಸಬೇಕೆಂದು ಹೇಳುತ್ತೇನೆ.

ಇನ್ನು ಸೇತುವೆಗಳು. ಸ್ವಾಮಿ, ನಮ್ಮ ಕೃಷ್ಣರಾಜ ನಗರ ತಾಲ್ಲೂಕಿನ ಹನಸೋಗೆ ಹತ್ತಿರ ಒಂದು ಸೇತುವೆ ಕಟ್ಟಬೇಕೆಂದು ಮೂರನೇ ಯೋಜನೆಯಲ್ಲಿ ಏಳು ಲಕ್ಷ ರೂಪಾಯಿ ಒದಗಿಸಿದ್ದಾರೆ. 1961-62 ರಲ್ಲಿ ಸ್ವಲ್ಪ ಕೆಲಸ ಆಗಬೇಕಾಗಿತ್ತು. ಈಗ ಆಗಿಲ್ಲ. ಈ ಹಿಂದೆ ಮಾನ್ಯ ಮಂತ್ರಿಗಳು ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಸ್ವಲ್ಪ ವಾದವಿವಾದ ಇದೆ. ನಮ್ಮ ಚೀಫ್ ಇಂಜೀನಿಯರನ್ನು ಕಳುಹಿಸಿ ಯಾವ ಸ್ಥಳ ಚುನಾಯಿಸಬೇಕು ಎಂಬ ಬಗ್ಗೆ ಆ ಮೇಲೆ ಆಖೈರು ತೀರ್ಮಾನ ತೆಗೆದುಕೊಳ್ಳುತ್ತೇವೆ ಎಂದು ಹೇಳಿದರು. ಈಗಾಗಲೇ ಮೂರು ತಿಂಗಳಾಯಿತು. ದಯವಿಟ್ಟು ಬೇಗ ಒಂದು ಆಖೈರು ತೀರ್ಮಾನ ತೆಗೆದುಕೊಂಡು ಅದಕ್ಕೆ ಫೌಂಡೇಷನ್ ಸ್ಟೋನ್ ಹಾಕಲಿಕ್ಕೆ ಸೇತುವೆ ಕಟ್ಟಲಿಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಗ್ರಾಮಾಂತರ ರಸ್ತೆಗಳ ವಿಚಾರ. ಕೆಲವು ತಾಲ್ಲೂಕುಗಳಲ್ಲಿ ಹೆಚ್ಚು ಮೈಲಿಗಳ ಕೆಲಸ ನಡೆದಿದೆ ಯೆಂದು ಅಂಕಿ ಅಂಶಗಳಿಂದ ಕಂಡು ಬಂದಿದೆ. ಆದರೆ ನಾವು ಹೊಸದಾಗಿ ಈ ಸಭೆಗೆ ಚುನಾಯಿತರಾಗಿ ಬಂದಿರತಕ್ಕ ಸದಸ್ಯರು; ನಮ್ಮ ತಾಲ್ಲೂಕಿನಲ್ಲಿ ಹೋದ ಸಾರಿ ಹೆಚ್ಚು ಕೆಲಸ ನಡೆದಿದೆಯೆಂದು ಇನ್ನು ಐದು ವರ್ಷಗಳಲ್ಲಿ ಯಾವ ಕೆಲಸವೂ ನಡೆಯದೇ ಹೋದರೆ, ಗ್ರಾಮಾಂತರ ರಸ್ತೆಗಳಲ್ಲಿ, ನಮಗೆ ಅಪಖ್ಯಾತಿ ಬರುತ್ತದೆ. ಈ ಅಪಖ್ಯಾತಿಯನ್ನು ತಪ್ಪಿಸುವುದಕ್ಕಾಗಿ ಇನ್ನು ಎಂಟು ಹತ್ತು ಮೈಲಿಗಳಷ್ಟಾದರೂ, Rural Communication'', ರಸ್ತೆಗಳನ್ನು ನಮ್ಮ ಕ್ಷೇತ್ರಗಳಲ್ಲಿ ಮಾಡಿಸಲು ಸರ್ಕಾರ ಏರ್ಪಾಡು ಮಾಡಬೇಕೆಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಮಾನ್ಯ ಸಭಾಪತಿಗಳೇ, ನೆನ್ನೆಯ ದಿವಸ ವಿರೋಧ ಪಕ್ಷದ ನನ್ನ ಕೆಲವು ಸ್ನೇಹಿತರು ಮಾತನಾಡುತ್ತಾ ಲೋಕೋಪಯೋಗಿ ಇಲಾಖೆಯ ಕೆಲಸ ಕಾರ್ಯಗಳ ಮೇಲೆ ಕಟುತರವಾದ ಟೀಕೆಗಳನ್ನು ಮಾಡಿದರು. ದೇಶದಲ್ಲಿ ಯಾವ ಕಡೆಯಲ್ಲಿಯೂ ಈ ಇಲಾಖೆ ಯಾವ ರೀತಿಯಲ್ಲಿಯೂ ಕೆಲಸ ಮಾಡುತ್ತಿಲ್ಲ, ಇದು ಒಂದು ನಷ್ಟದ ಇಲಾಖೆ, ಇದು Public Enemy No. 1, ವಗೈರೆ ಎಂದು ಟೀಕೆ ಮಾಡಿದರು. ಆದರೆ ಮೊದಲನೆಯ ಮತ್ತು ಎರಡನೆಯ ಪಂಚವಾರ್ಷಿಕ ಯೋಜನೆಗಳಲ್ಲಿ ದೇಶದ ಮೂಲೆ ಮೂಲೆಗಳಲ್ಲಿ ಏನೇನು ಕೆಲಸ ಕಾರ್ಯಗಳನ್ನು ಈ ಇಲಾಖೆ ಸಾಧಿಸಿದೆ ಎನ್ನುವುದಕ್ಕೆ ಇವರು ಯಾವ ಗಮನವನ್ನೂ ಕೊಟ್ಟಿಲ್ಲವೆಂದು ಕಾಣುತ್ತದೆ. ನನಗೆ ಹೆಚ್ಚಿನ ವಿವರಗಳನ್ನು ಹೇಳಲು ಕಾಲಾವಕಾಶ ವಿಲ್ಲ. ಆದರೆ ಇಷ್ಟು ಮಾತ್ರ ಹೇಳುತ್ತೇನೆ. ''Mysore 1961,'' ಎಂಬ ಒಂದು ಪುಸ್ತಕವನ್ನು ಸರ್ಕಾರದವರು ಪ್ರಕಟಿಸಿದ್ದಾರೆ. ಅದರಲ್ಲಿ ಈ ಇಲಾಖೆ ಹತ್ತು ಹನ್ನೆರಡು ವರ್ಷಗಳ ಅವಧಿಯಲ್ಲಿ ಎಷ್ಟು ಕಟ್ಟಡಗಳನ್ನು, ಎಷ್ಟು ರಸ್ತೆಗಳನ್ನು, ಎಷ್ಟು ಕೆರೆಗಳ ನಿರ್ಮಾಣ ಮತ್ತು ಜೀರ್ಣೋದ್ಧಾರ ಕಾರ್ಯಗಳನ್ನು, ಎಷ್ಟು ಸ್ಕೂಲ್ ಕಟ್ಟಡಗಳನ್ನು ನಿರ್ಮಾಣ ಮಾಡಿ ಪ್ರಗತಿ ಸಾಧಿಸಿದೆ ಎನ್ನುವುದು ನಮೂದಾಗಿದೆ. ಇದನ್ನು ನೋಡಿದರೆ ಅವರಿಗೆ ಅರಿವಾಗುತ್ತದೆ ಎಂದು ಮಾತ್ರ ಹೇಳುತ್ತೇನೆ.

ಸಣ್ಣ ನೀರಾವರಿ ಕಾಮಗಾರಿಗಳನ್ನು ಹೆಚ್ಚು ತೆಗೆದುಕೊಂಡು ಇದಕ್ಕೆ ಹೆಚ್ಚಿನ ಗಮನ ಕೊಡುವುದು ಅತ್ಯಾವಶ್ಯಕವೆಂದು ನಾನು ತಿಳಿಸುತ್ತೇನೆ. ನಮ್ಮ ಮೈಸೂರು ದೇಶ ಮೈನರ್ ಕೆರೆಗಳ ನಾಡು ಎಂದು ಖ್ಯಾತಿ ಪಡೆದಿದೆ. ನಮ್ಮ ದೇಶದಲ್ಲಿ ಸುಮಾರು ೨೫,೦೦೦ ಕೆರೆಗಳಿವೆ; ನೀರಾವರಿ ನಡೆದಿರುವ ಒಟ್ಟು ವಿಸ್ತೀರ್ಣ ೧೯, ೨೨, ೨೨೧ ಎಕರೆಗಳಲ್ಲಿ ಕೆರೆಗಳ ಕೆಳಗಿರುವುದು ಸುಮಾರು ಒಂಬತ್ತು ಲಕ್ಷ ಎಕರೆಗಳು. ಎಂದಮೇಲೆ ಸುಮಾರು ಅರ್ಧದಷ್ಟು ಭಾಗ ಕೆರೆಗಳ ನೀರಿನ ಆಶ್ರಯದಿಂದ ನೀರಾವರಿಯಾಗುತ್ತದೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ (ತಿಪಟೂರು).—ಈ ಕೆರೆಗಳಲ್ಲಿ ಹೂಳು ತುಂಬಿರುವುದು ತೂಬು ಒಡೆದು ಹೋಗಿರುವುದು ಎಷ್ಟು ಕೆರೆಗಳು?

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಆಮೇಲೆ ಆ ವಿಷಯಕ್ಕೆ ಬರುತ್ತೇನೆ.

ನಮ್ಮ ದೇಶದಲ್ಲಿ ಕೆರೆಗಳ ಪ್ರಾಮುಖ್ಯತೆ ಇಷ್ಟಿದೆ. ಆದಕಾರಣ ಇವುಗಳ ಕಡೆ ಹೆಚ್ಚು ಗಮನ ಕೊಡುವುದು ಅತ್ಯಾವಶ್ಯಕ. ಸಣ್ಣ ನೀರಾವರಿ ಕೆಲಸಕಾರ್ಯಗಳಿಗೆ ಹೆಚ್ಚು ಹಣವನ್ನು ಖರ್ಚುಮಾಡಿ, ಅವುಗಳ ದುರಸ್ತು ಮಾಡುವ ಕೆಲಸವನ್ನು ನಡೆಸಿದರೆ ಬಹು ಭಾಗ ಜನರಿಗೆ ಅದರಿಂದ ಸಹಾಯವಾಗುತ್ತದೆ; ಅತ್ಯಲ್ಪ ಕಾಲದಲ್ಲಿ ಜನರಿಗೆ ಪ್ರತಿಫಲ ದೊರೆಯುತ್ತದೆ. ಈಗ ನೀರಾವರಿ ಬಾಬಿಗೆ ಒದಗಿಸಿರುವ ಹಣವನ್ನು ನೋಡಿದರೆ, ಮೈನರ್ ಕೆರೆಗಳು ಮತ್ತು ಸಣ್ಣ ನೀರಾವರಿ ಕೆಲಸಗಳಿಗೆ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ೮೫೦ಲಕ್ಷ ರೂಪಾಯಿ ಒದಗಿಸಿದ್ದಾರೆ. ಇದು ೧೯ ಜಿಲ್ಲೆಗಳಿಗೆ ಒಂದು ವರ್ಷಕ್ಕೆ ಎಷ್ಟಾಗುತ್ತದೆಂದು ಲೆಕ್ಕ ಹಾಕಿ ನೋಡಿದರೆ ಒಂದು ತಾಲ್ಲೂಕಿಗೆ ಒಂದು ವರ್ಷಕ್ಕೆ ಒಂದು ಲಕ್ಷರೂಪಾಯಿ ಬರುತ್ತದೆ. ಒಂದೊಂದು ತಾಲ್ಲೂಕಿನಲ್ಲಿ ಎಷ್ಟೋ ಕೆರೆಗಳಿವೆ. ಇವುಗಳಲ್ಲಿ ಹೂತುಹೋಗಿರುವುದನ್ನೂ ಒಡೆದು ಹೋಗಿರುವುದನ್ನೂ ರಿಪೇರಿ ಮಾಡಬೇಕಾಗಿದೆ; ಹೊಸದಾಗಿ ಕೆರೆಗಳನ್ನೂ ಪಿಕ್‌ಅಪ್‌ಗಳನ್ನೂ ಮಾಡುವುದು ಅತ್ಯಾವಶ್ಯಕ. ದೇಶದ ಅಗತ್ಯತೆಯ ದೃಷ್ಟಿಯಿಂದ ಈ ಕೆಲಸ ನಡೆಯ ಬೇಕಾಗಿದೆ. ಆದಕಾರಣ ಈಗ ಒದಗಿಸಿರುವ ಹಣ ಕೇವಲ ಅತ್ಯಲ್ಪ ಎಂದು ಹೇಳಬಯಸುತ್ತೇನೆ. ದೊಡ್ಡ ದೊಡ್ಡ ನೀರಾವರಿ ಕೆಲಸಗಳು ನಡೆಯುತ್ತಿವೆ. ಇವಕ್ಕೆ ಹೆಚ್ಚು ಹಣವೂ ದೊರಕಿದೆ. ಇದು ಆಗಬಾರದೆಂದು ನಾನು ಹೇಳುವುದಿಲ್ಲ. ಎಲ್ಲಿ ದೇಶದ ಹಿತದೃಷ್ಟಿಯಿಂದ ಬಹಳ ಆವಶ್ಯಕವೋ ಅಂಥ ಕಡೆ ಕೆಲವು ಮೇಜರ್ ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳಬಹುದು. ಆದರೆ ಮೇಜರ್ ಕಾಮಗಾರಿಗಳಿಗೆ ಹೆಚ್ಚು ಹಣವನ್ನೊದಗಿಸಿ ಮೈನರ್ ನೀರಾವರಿ ಯೋಜನೆಗಳನ್ನು ಕೈಬಿಡುವುದು ಸರಿಯಲ್ಲ. ದೊಡ್ಡ ದೊಡ್ಡ ನೀರಾವರಿ ಕೆಲಸಗಳೇನಿವೆಯೋ ಅವುಗಳ ಸಂಬಂಧವಾಗಿ ಹುಟ್ಟತಕ್ಕ ಸಮಸ್ಯೆಗಳೂ ಕೂಡ ಕ್ಲಿಷ್ಟವಾಗಿರುತ್ತವೆ. ಅವುಗಳನ್ನು ಬಗೆಹರಿಸುವುದೂ ಬಹಳ ಕಷ್ಟ. ಅಲ್ಲದೆ ಪ್ರತಿಫಲ ದೇಶಕ್ಕೆ ದೊರೆಯುವುದು ನಿಧಾನವಾಗುತ್ತದೆ. ರೈತ ಕೊಡುವ ಕಂದಾಯದ ಮೇಲೆ ಹೆಚ್ಚು ತೆರಿಗೆ ಹಾಕುತ್ತಿದ್ದೀರಿ, ಇನ್ನೂ ಅನೇಕ ತೆರಿಗೆಗಳನ್ನು ವಿಧಿಸುತ್ತಿದ್ದೀರಿ, ಆದರೆ ಅವನ ಊರಿನಲ್ಲಿರುವ ಕೆರೆಗಳನ್ನು ರಿಪೇರಿ ಮಾಡದಿದ್ದರೆ, ಅಕ್ಕಪಕ್ಕದಲ್ಲಿ pick-up ಮಾಡದಿದ್ದರೆ, ಈ ಹೆಚ್ಚು ತೆರಿಗೆಯನ್ನು ಅವನಿಂದ ಕೇಳುವುದು ಸರಿಯೇ ಎಂಬ

ಪ್ರಶ್ನೆ ಸಹಜವಾಗಿ ಏಳುತ್ತದೆ. ದೊಡ್ಡ ದೊಡ್ಡ ಭದ್ರಾ ಯೋಜನೆ, ಶರಾವತಿ ಯೋಜನೆ, ಹೇಮಾವತಿ ಯೋಜನೆಗಳೂ ಇವೆ. ಆದರೆ ಇವನ್ನೂ ನೋಡಿದರೆ ಹಳ್ಳಿಯ ರೈತರಿಗೆ ಅಷ್ಟು ತೃಪ್ತಿಯಾಗುವುದಿಲ್ಲ. ಅವರಿಗೆ ಬೇಕಾದುದು ಸಣ್ಣ ಸಣ್ಣ ಕೆರೆಗಳು, ಪಿಕಪ್‌ಗಳು, ಇವುಗಳಿಂದ ಅವರಿಗೆ ಹೆಚ್ಚಿನ ಸಹಾಯ ದೊರಕುವುದು.

ಡಾಕ್ಟರ್ ಗೌಡಯ್ಯನವರು ನನ್ನ ನೆರೆ ಕ್ಷೇತ್ರದವರು ; ಅವರು ಮಾತನಾಡಿದ ತಕ್ಷಣ ನನಗೆ ಅವಕಾಶ ದೊರೆತಿದೆ. ಅವರು ಮಾತನಾಡಿದ ಕೆಲವು ವಿಷಯಗಳನ್ನೇ ನಾನೂ ಹೇಳಬೇಕಾಗಿದೆ. ಹಾರಂಗಿ, ಕಂಬದಕಡ, ಹೇಮಾವತಿ ಯೋಜನೆಗಳು ನಮ್ಮ ತಾಲ್ಲೂಕಿಗೆ ಸಂಬಂಧ ಪಟ್ಟವು. ಈ ವಿಷಯ ಸಭೆಯಲ್ಲಿ ಹೆಚ್ಚಾಗಿ ಬರುತ್ತಿದೆ ಎಂದು ಮಾನ್ಯ ಸಭಾಪತಿಗಳು ಹೇಳಬಹುದು, ಹೀಗೆ ಬರುವುದು ಸ್ವಾಭಾವಿಕ. ಈ ಯೋಜನೆಗಳು ಎಲ್ಲ ಕಡೆಯೂ ಮನೆ ಮಾತಾಗಿದೆ. ಅದರಲ್ಲಿಯೂ ನನ್ನ ಕ್ಷೇತ್ರದಲ್ಲಿ, ಅರಕಲಗೂಡು ತಾಲ್ಲೂಕಿನಲ್ಲಿ ಹಾರಂಗಿ ಯೋಜನೆಯಿಂದ ನೀರು ಪಶ್ಚಿಮದಿಂದ ಪೂರ್ವದ ಕೊನೆಯವರೆಗೂ ತಾಲ್ಲೂಕಿನ ಬಹುಭಾಗಕ್ಕೆ ಒದಗುತ್ತದೆಂಬ ಭಾವನೆಯಿದೆ. ಈಗ ಈ ಯೋಜನೆ ಬದಲಾಗುತ್ತಿದೆ ಎಂದು ಜನರು ವರ್ತಮಾನ ಪತ್ರಿಕೆಗಳಲ್ಲಿ ನೋಡಿ ಮತ್ತು ಇಲ್ಲಿನ ಕಾರ್ಯಕಲಾಪಗಳ ವರದಿಗಳನ್ನು ನೋಡಿ ದಿಗ್ಭ್ರಾಂತರಾಗಿದ್ದಾರೆ. ಹಾರಂಗಿ ಜಲಾಶಯ ನಿರ್ಮಾಣಕ್ಕೆ ಬೇರೆ ಸೈಟುಗಳನ್ನೂ ನೋಡಲು ಸರ್ಕಾರದವರು ಯೋಚನೆ ಮಾಡಿದ್ದಾರೆಂಬ ವರ್ತಮಾನ ಬಂದಿದೆ. ಈ ಅಭಿಪ್ರಾಯ ಸರ್ಕಾರಕ್ಕಿದೆಯೋ ಏನೋ ಎನಿಸುತ್ತದೆ. ಹಾರಂಗಿ ಯೋಜನೆಯನ್ನು ತೆಗೆದು ಕೊಳ್ಳುವುದಕ್ಕೆ ಮುಂಚೆ ಹತ್ತಾರು ವರ್ಷಗಳಿಂದ ಈ ಬಗ್ಗೆ ವಿಪುಲವಾದ ಚರ್ಚೆಗಳು ನಡೆದಿವೆ. ಮೂರು ನಾಲ್ಕು ಸೈಟುಗಳನ್ನು ಪರೀಕ್ಷೆ ಮಾಡಿನೋಡಿ, ತಜ್ಞರ ಅಭಿಪ್ರಾಯ ಪಡೆದು ಕೊನೆಗೆ ಬಹಳ ಯೋಗ್ಯವಾದ ಸೈಟನ್ನು ಚುನಾಯಿಸಿ, ಇದು ಮೈಸೂರಿನಲ್ಲೇ ಬಹಳ ಉಪಯುಕ್ತವಾದ ಯೋಜನೆಯಾಗುತ್ತದೆಂಬ ತೀರ್ಮಾನಕ್ಕೆ ಬಂದಿದ್ದಾರೆ.

2-30 P.M

ನನ್ನ ಮಿತ್ರರು ಹೇಳಿದಂಥ ಕೆಲವು ಅಂಕಿ ಅಂಶಗಳನ್ನು ತಿಳಿಸಲು ಪ್ರಯತ್ನಿಸುತ್ತೇನೆ. ಹಾರಂಗಿ ಯೋಜನೆಯಿಂದ ನೀರಾವರಿಯಾಗುವುದು ೧,೦೫,೦೦೦ ಎಕರೆಗಳು. ನಾನು ಹೇಳುತ್ತಿರುವುದು ಸರ್ಕಾರದವರು ಕೊಟ್ಟಿರುವ ಅಂಕಿ ಅಂಶ. ಈ ಯೋಜನೆಯಿಂದ ಮುಳುಗಡೆಯಾಗುವುದು ೫,೦೧೦ ಎಕರೆಗಳು. ಅದರಲ್ಲಿ ೪,೫೦೦ ಎಕರೆಗಳು ಖಾಸಗಿಯವರಿಗೆ ಸೇರಿವೆ. ಕೊಡಗಿನ ಮಿತ್ರರು ಪ್ಲಾಂಟೇಷನ್ ಹೋಗುತ್ತದೆ, ಅದರಲ್ಲೂ ಕಾಫಿ ತೋಟ ಹೋಗುತ್ತದೆ ಎಂದು ಹೇಳುವುದು ಬಹಳ ಉತ್ಪ್ರೇಕ್ಷೆಯಿಂದ ಕೂಡಿರುವುದು ಎಂದು ತಿಳಿಸುವುದಕ್ಕಾಗಿ ಈ ಅಂಕಿ ಅಂಶಗಳನ್ನು ಕೊಡುತ್ತಿದ್ದೇನೆ. ಖಾಸಗಿಯವರ ೪,೫೦೦ಎಕರೆಗಳಲ್ಲಿ ಕೇವಲ ೧,೪೭೮ ಎಕರೆಗಳಷ್ಟು ಮಾತ್ರ ಕಾಫಿ ಮತ್ತು ಏಲಕ್ಕಿ ತೋಟವಿದೆ. ಬತ್ತ ಬೆಳೆಯುವ ಪ್ರದೇಶ ೧,೦೭೪ ಎಕರೆಗಳು, ಎರಡು ಸಾವಿರ ಚಿಲ್ಲರೆ ಪ್ರೈವೇಟ್ ವೇಸ್ಟ್‌ಲ್ಯಾಂಡ್ ಇದೆ. ಈ ಯೋಜನೆಯಿಂದ ಮುಳುಗಡೆಯಾಗುವುದು ಒಂದೇ ಒಂದು ಹಳ್ಳಿ. ಯಾವ ಪ್ರಾಜೆಕ್ಟ್ ನಮ್ಮ ದೇಶದಲ್ಲಿ ನೋಡಿದರೂ ಒಂದು ಹಳ್ಳಿ ಮುಳುಗಡೆಯಾಗುವುದು ಎಲ್ಲೂ ಇಲ್ಲ ; ಹತ್ತಾರು ಹಳ್ಳಿಗಳು, ನೂರಾರು, ಸಾವಿರಾರು ಎಕರೆಗಳು ಸಾಮಾನ್ಯವಾಗಿ ಮುಳುಗಡೆಯಾಗುತ್ತವೆ. ಆದರೆ ಹಾರಂಗಿ ಪ್ರಾಜೆಕ್ಟಿನಿಂದ ಮುಳುಗಡೆಯಾಗುವುದು ಒಂದೇ ಒಂದು ಹಳ್ಳಿ. ಎಷ್ಟು ಮನೆಗಳು ಹೋಗುತ್ತವೆ, ಎಷ್ಟು ಕುಟುಂಬಗಳಿಗೆ ತೊಂದರೆಯಾಗುತ್ತದೆ ಅಂದರೆ ನೂರು ಕುಟುಂಬಗಳಿಗೆ ಮಾತ್ರ ತೊಂದರೆಯಾಗುತ್ತವೆ. ಒಂದುಹಳ್ಳಿ ಮುಳುಗಡೆಯಾಗುತ್ತದೆ, ಐದು ಸಾವಿರ ಎಕರೆ ಜಮೀನು ಹೋಗುತ್ತದೆ. ಇದರಲ್ಲಿ ನಾಲ್ಕು ಸಾವಿರ ಎಕರೆ ಮಾತ್ರ ಪ್ರೈವೇಟ್ ಲ್ಯಾಂಡ್. ಅದರಲ್ಲಿ 2 ಸಾವಿರ ಎಕರೆ ವೇಸ್ಟ್‌ಲ್ಯಾಂಡ್, ಎರಡು ಸಾವಿರ ಚಿಲ್ಲರೆ ಎಕರೆಗಳಲ್ಲಿ ಮಾತ್ರ ವ್ಯವಸಾಯ ನಡೆಯುವುದು, ಪ್ರತಿಫಲ ೧,೦೫,೦೦೦ ಎಕರೆಗಳ ನೀರಾವರಿಯಾಗುವುದು. ಇದಕ್ಕಿಂತಲೂ ಉತ್ತಮವಾದ, ಇದಕ್ಕಿಂತಲೂ ಲಾಭಕರವಾದ ಒಂದು ಪ್ರಾಜೆಕ್ಟ್ ನಮ್ಮ ದೇಶದಲ್ಲಾಗಲಿ ಅಥವಾ ಇಂಡಿಯಾದೇಶದಲ್ಲಾಗಲಿ ಇಲ್ಲ ಎಂದು ಹೇಳುತ್ತೇನೆ. ಇಂಥ ಪ್ರಾಜೆಕ್ಟ್ ಬೇಡವೆಂದು ಹೇಳಿ ಇನ್ನೊಂದು ಕಡೆ, ಮತ್ತೊಂದು ಕಡೆ ಸೈಟ್ ನೋಡುವುದರ ಅರ್ಥವೇನು ? ಹತ್ತಾರು ವರ್ಷಗಳು ಯೋಚನೆ ಮಾಡಿ, ತಜ್ಞರು ನೋಡಿ, ಸರ್ಕಾರದವರು ಪರೀಕ್ಷಿಸಿ ಈ ರೀತಿ ಹೇಳಿದ್ದಾರೆ.—

"It could thus be seen that, while the Project for a reservoir across Harangi as originally envisaged by erstwhile Coorg provided for only 6000 acres irrigation, submerging about 1,729 acres, the one now proposed will benifit 1,05,000 acres comprising of 20,000 acres of sugarcane, 61,000 acres of paddy and 24,000 acres of irrigated dry. The extra submersion is just about 3000 acres and the extra benefit will be for about 1,00,000 acres. One special feature of this project is that extent of lands and the number of villages submerged is very small, as could be seen from the following table..."

ಏಳೆಂಟು ಪ್ರಾಜೆಕ್ಟುಗಳನ್ನು ಕಂಪೇರ್ ಮಾಡಿದ್ದಾರೆ. ಎಲ್ಲಾ ಪ್ರಾಜೆಕ್ಟುಗಳಿಗಿಂತಲೂ ಇದು ಲಾಭದಾಯಕ ಎಂದು ತಿಳಿಸಿದ್ದಾರೆ.

"It will thus be seen that Harangi Project is most economic from points of submergence of land, and villages, etc., and displacement of personnel, etc. as compared with other projects of magnitude in Mysore."

"The three sites referred to in para 2 were inspected and examined by the Standing Technical Advisory Committee. Hardur site was selected as the best for

(ಶ್ರೀ ಜಿ.ಎ. ತಿಮ್ಮಪ್ಪಗೌಡ)

a storage dam on considerations of economy, technical suitability and extensive command and minimum submersion..."

ಹೀಗೆ ಹೇಳಿರುವಾಗ ಬದಲಾವಣೆ ಮಾಡುವುದು, ಬೇರೆ ಸೈಟು ನೋಡುವುದು ಸೂಕ್ತವೆ ? ದೇಶದ ಹಿತ ದೃಷ್ಟಿಯಿಂದಲೂ, ಆಹಾರದ ಉತ್ಪನ್ನವನ್ನು ಹೆಚ್ಚಿಸುವ ದೃಷ್ಟಿಯಿಂದಲೂ ಹಾರಂಗಿ ಪ್ರಾಜೆಕ್ಟನ್ನು ಮೊದಲು ಗೊತ್ತುಮಾಡಿದಂತೆ ಹರದೂರು ಸೀವೇಶದಲ್ಲೇ ಕಡ್ಡಾಯವಾಗಿ ತೆಗೆದುಕೊಳ್ಳಲೇಬೇಕು ಎಂದು ಸರ್ಕಾರದಲ್ಲಿ ಅತಿವಿನಯದಿಂದ ಮನವಿಮಾಡುತ್ತೇನೆ.

ಕಂಬದಕಡ ಪ್ರಾಜೆಕ್ಟ್ಕೂಡ ಹಾಗೆಯೇ ಇದೆ. ಅದನ್ನು ಮೊದಲು ಯೋಚಿಸಿದ್ದಂತೆ ಮಾಡದೆ ಕಟ್ಟೇಪುರದ ಸೈಟ್‌ನಲ್ಲಿ ಮಾಡುವವರಾಗಿದ್ದಾರೆ. ಹೀಗೆ ಮಾಡುವುದರಿಂದ ಹಾಸನಜಿಲ್ಲೆ ಅರಕೂಲಗೂಡಿಗೆ ತೊಂದರೆಯಾಗುತ್ತದೆ. ಕಂಬದಕಡ, ಹಾರಂಗಿ ಮತ್ತು ಹೇಮಾವತಿ—ಈ ಮೂರು ಪ್ರಾಜೆಕ್ಟುಗಳನ್ನ ಹಣದ ಅನುಕೂಲವಿಲ್ಲದಿದ್ದರೂ ಕೂಡ ಒಂದೇ ವರ್ಷದಲ್ಲಿ ತೆಗೆದುಕೊಳ್ಳುವುದಾಗಿ ಪ್ರಚಾರಮಾಡಿದ್ದರಿಂದ ಕೊಡಗಿನವರಿಗೆ ಹೆದರಿಕೆಯಾಗಿದೆ. ಹಾಗೆ ಮಾಡದೆ ಒಂದೊಂದೇ ತೆಗೆದುಕೊಂಡಿದ್ದರೆ ಕೊಡಗಿನಿಂದ ಇಷ್ಟೊಂದು ವಿರೋಧ ಬರುತ್ತಿರಲಿಲ್ಲ.

ಶ್ರೀ ವೀರೇಂದ್ರಪಾಟೀಲ್ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).—ಮೊದಲು ಹೇಮಾವತಿ ಪ್ರಾಜೆಕ್ಟ್ ತೆಗೆದುಕೊಂಡರೆ ಏನಾಗುತ್ತದೆ ?

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಹೇಳುತ್ತೇನೆ. ಇಪ್ಪತ್ತೆರಡು ಸಾವಿರ ಎಕರೆ ನೀರಾವರಿಯಾಗುವುದು, ಎಂಟು ಸಾವಿರ ಎಕರೆ ಮುಳುಗಡೆಯಾಗುವುದು, ಹದಿನೆಂಟು ಹಳ್ಳಿಗಳು ಹೋಗುತ್ತವೆ, ೫೦೦ಕುಟುಂಬಗಳಿಗೆ ತೊಂದರೆಯಾಗುತ್ತದೆ. ಇದು ಸರ್ಕಾರಿ ಅಂಕಿ ಅಂಶ. ಇದನ್ನು ಹಾರಂಗಿ ಮತ್ತು ಕಂಬದಕಡೆ ಪ್ರಾಜೆಕ್ಟ್‌ಗಳೊಂದಿಗೆ ಹೋಲಿಸಿನೋಡಿ. ಹಾರಂಗಿ ಮತ್ತು ಕಂಬದಕಡ ಪ್ರಾಜೆಕ್ಟುಗಳಿಗೆ ಆಲ್ಟರ್ನೆಟಿವ್ ಸೈಟ್ ತೆಗೆದುಕೊಳ್ಳಲು ತೀರ್ಮಾನಿಸಿದ್ದಾರೆ. ಅದೇ ಹೇಮಾವತಿ ಪ್ರಾಜೆಕ್ಟಿನಿಂದ ಬೇಕಾದಷ್ಟು ಮುಳುಗಡೆಯಾಗುವುದಾದರೂ ಅದಕ್ಕೆ ಮಾತ್ರ ಏನೂ ಮಾಡಿಲ್ಲ. ಸುಮ್ಮನೆ ಗಾಭರಿ ಉಂಟುಮಾಡಿ ಮೊದಲು ಯೋಚಿಸಿದಂತೆ ಮಾಡುವುದನ್ನು ನಿಲ್ಲಿಸುವುದರ ಬದಲು, ಮೊದಲು ಹಾರಂಗಿ ಪ್ರಾಜೆಕ್ಟನ್ನು ಪೂರ್ಣಮಾಡಿ ಉಳಿದುದನ್ನು ಆಮೇಲೆ ಮಾಡಬಹುದು. ಷೆಡ್ಯೂಲ್ಡ್ ಮತ್ತು ನಾನ್‌ಷೆಡ್ಯೂಲ್ಡ್ ಎಂದು ಹೇಳುವುದು ತಪ್ಪು ಅಭಿಪ್ರಾಯಕ್ಕೆ ಎಡೆಕೊಟ್ಟಿದೆ. ಗೊರೂರು ಬಳಿ ಈಗ ಮಾಡುವ ಪ್ರಾಜೆಕ್ಟಿನಿಂದ ಮುಂದೆ ವ್ಯಸನಪಡಬೇಕಾಗುತ್ತದೆ. ಎಷ್ಟು ಅದರಿಂದ ನೀರಾವರಿಯಾಗುತ್ತದೆಯೋ ಅಷ್ಟೇ ಅದರಿಂದ ಮುಳುಗಡೆಯಾಗುತ್ತದೆ. ಆಲೂರು ಮತ್ತು ಅರಕಲಗೂಡು ತಾಲ್ಲೂಕುಗಳು ಬತ್ತದ ಕಣಜಗಳೆಂದು ಪ್ರಸಿದ್ಧಿಯಾಗಿವೆ. ಹಿಂದೆ ಆಹಾರ ಪದಾರ್ಥಗಳ ಕಂಟ್ರೋಲ್ ಇದ್ದಾಗ ೫೦ ಸಾವಿರ ಪಲ್ಲ ಬತ್ತವನ್ನು ಅಲ್ಲಿಂದ ಹೊರಕ್ಕೆ ಕಳುಹಿಸುತ್ತಿದ್ದೆವು. ಅಂಥ ಸ್ಥಳದವರಿಗೆ ಪ್ರತಿಫಲ ದೊರೆಯುವುದನ್ನು ತಪ್ಪಿಸಲು ಈಗ ಪ್ರಯತ್ನ ನಡೆಯುತ್ತಿದೆ. ಇದು ಅಲ್ಲಿ ಮಾಡುತ್ತಿರುವ ಯೋಜನೆಗಳ ಫಲ. ಆದುದರಿಂದ ಮೇಜರ್ ಇರಿಗೇಷನ್ ಮಾಡುವಾಗ ಪ್ರಾಮುಖ್ಯವಾಗಿರುವುದನ್ನು, ಪವರ್ ಉತ್ಪತ್ತಿಗೆ ಸಹಾಯಕವಾಗುವುದನ್ನು, ನೀರಾವರಿ ಸೌಕರ್ಯವಾಗುವುದನ್ನು ಹಣದ ಸೌಕರ್ಯ ನೋಡಿಕೊಂಡು ತೆಗೆದುಕೊಳ್ಳಿ, ಎಲ್ಲಕ್ಕೂ ಕೈಹಾಕಬಾರದು ಎಂದು ಸೂಚಿಸುತ್ತೇನೆ.

†ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೇ, ಈ ಪಬ್ಲಿಕ್ ವರ್ಕ್ಸ್ ಇಲಾಖೆಯ ಡಿಮ್ಯಾಂಡಿನ ಮೇಲೆ ಮಾತನಾಡುತ್ತಾ ನಾಲ್ಕೈದು ವರ್ಷಗಳ ಅನುಭವದಿಂದ ಮಾತನಾಡಿದರೆ ಎಷ್ಟು ಪ್ರಯೋಜನವಾಗುತ್ತದೆ, ಮಾತನಾಡುವುದರಿಂದ ಏನಾಗಬಹುದು ಎಂದು ಗೊತ್ತಿದ್ದರೂ ಏನಾದರೂ ಆಗಬಹುದೆಂಬ ನಿರೀಕ್ಷೆಯ ಮೇಲೆ ಈಗ ಮಾತನಾಡಲು ನಿಂತಿದ್ದೇನೆ. ಏಕೆಂದರೆ ಗ್ರಹಚಾರ ಬಿಟ್ಟುಹೋಯಿತು, ಮುಂದೆ ನನಗೆ ತಿಳಿಯದೆ ಎರಡು ವರ್ಷಗಳಲ್ಲಿ ಒಳ್ಳೆಯದಾಗುತ್ತದೆಂದು ನಾನು ಆಲೋಚಿಸುತ್ತಿದ್ದೆ. ಆದರೆ ಗ್ರಹಚಾರ ಕೊಡುತ್ತಿದ್ದ ದೇವರು ಕೆಲವು ಫಲ ಮಾತ್ರ ಕೊಟ್ಟುಹೋಗಿದ್ದಾನೆ. ಅಧಿಕಾರಿಗಳ ಮನೋಭಾವನೆ ಬದಲಾವಣೆಯಾಗುವವರೆಗೆ—ಅದು ಮೂಲ ದೇವತೆ—ನಮ್ಮ ತಾಲ್ಲೂಕಿಗೆ ಮುಕ್ತಿಯಿಲ್ಲ ಎಂದು ಬಹಳ ವ್ಯಸನದಿಂದ ಹೇಳಬೇಕಾಗಿದೆ. ನನ್ನ ತಾಲ್ಲೂಕ್ ಅರಿಡ್‌ಜೋನ್‌ನಲ್ಲಿದೆ ಎಂದು ಎಲ್ಲರಿಗೂ ಗೊತ್ತಿದೆ, ಶ್ರೀ ನಿಜಲಿಂಗಪ್ಪನವರಿಗೂ ಗೊತ್ತಿದೆ. ಆಗಾಗ್ಗೆ ಕ್ಷಾಮ ಬರುತ್ತದೆ, ಮಳೆಕೂಡ ಹೆಚ್ಚಾಗಿ ಆಗುವುದಿಲ್ಲ. ಹಾಗಿರುವಾಗ ಯಾವುದಾದರೂ 30-33 ಸಾವಿರದ-ಲಕ್ಷಗಟ್ಟಲೆ ಅಲ್ಲ-ಯಾವುದಾದರೂ ಪ್ರಾಜೆಕ್ಟ್ ತೆಗೆದುಕೊಳ್ಳಿ ಎಂದು ಹೇಳಿದರೆ ಎಕ್ಸಾಮಿನ್ ಮಾಡುತ್ತೇವೆ ಎಂದು ಹೇಳುತ್ತಾರೆ, ಇದನ್ನು ಕೇಳಿ ಸಾಕಾಗಿದೆ. ಯಾಗನ್ನು ಕೇಳಿದರೂ ಎಕ್ಸಾಮಿನ್ ಮಾಡುತ್ತೇವೆಂದು ಹೇಳುತ್ತಾರೆ.

ಇದ್ದದ್ದರಲ್ಲಿ ಸಣ್ಣವರಾದ ಶ್ರೀ ವೀರೇಂದ್ರ ಪಾಟೀಲರು ಪರವಾಗಿಲ್ಲಎಂದರೆ,ಅವರು ಯಾವುದನ್ನುಹೇಳಲಿ 'Examine ಮಾಡಿಸುತ್ತೇನೆ' ಎಂದು ಮುಂಚೆಯೇ ಹೇಳಿ ಬಿಡುತ್ತಾರೆ. ಇವರು 'Examine' ಮಾಡಿಸುವ ಹೊತ್ತಿಗೆ 'Still Born Baby' ಹೊರಗೆ ಬಂದು ಬಿಟ್ಟಿರುತ್ತದೆ. ಆದ್ದರಿಂದ, ಹೇಗದರೂ ಆಗಲಿ, ಈ 'Examine ಮಾಡಿಸುತ್ತೇನೆ' ಎನ್ನಿಸುವುದನ್ನು ಸಾಕು ಮಾಡಿದರೆ ಸಾಕು. ಇದಲ್ಲದೆ, ಅಲ್ಲಿರತಕ್ಕ ಅಧಿಕಾರಿಗಳ ಮನೋಭಾವನೆ ಬದಲಾಣೆಯಾಗಬೇಕು. ಎಷ್ಟೋ ಪ್ರಾಜೆಕ್ಟ್‌ಗಳು ಎಲ್ಲಾ ಪರಿಶೀಲನೆಯಾಗಿ, ಎಸ್ಟಿಮೇಟ್ ಆಗಿ ಸಾಂಕ್ಷನ್ ಆಗಿರುತ್ತವೆ ಎನ್ನುತ್ತಾರೆ. ಆದರೆ ಅದೇನಾಗುತ್ತದೋ ಏನೊ! ಕಾರ್ಯರಂಗಕ್ಕೆ ಹೋದೊಡನೆ ಕಂಟ್ರಾಕ್ಟರುಗಳ ಒತ್ತಾಯಕ್ಕೆ, ಪ್ರಭಾವಕ್ಕೆ ಒಳಗಾಗಿ ಪ್ರಾಜೆಕ್ಟಿನ ಎತ್ತರವನ್ನು ಜಾಸ್ತಿಮಾಡಬೇಕು, ಇಲ್ಲವೇ ಉದ್ದ ಕಡಮೆ ಮಾಡಬೇಕು—ಇತ್ಯಾದಿ ಯಾವುದೋ ಸಬೂಬು ಹಾಕಿ ಸದ್ಯಕ್ಕೆ ನಿಲ್ಲಿಸಿಬಿಡುತ್ತಾರೆ. ಅದೆಲ್ಲಾ ಮತ್ತೆ Examine ಆಗಿ ಬರುವಹೊತ್ತಿಗೆ ರೇಟುಗಳು ವ್ಯತ್ಯಾಸವಾಗಬೇಕು ಎಂದು ಮನವಿ ಹೊರಡುತ್ತದೆ............

ಶ್ರೀ ಎಸ್. ನಿಜಲಿಂಗಪ್ಪ.—ನಿಮ್ಮ ಕೆಲಸ ಆಗುತ್ತದೆ ; ನೀವೇನೂ ಯೋಚನೆ ಮಾಡಬೇಡಿ.

ಶ್ರೀಮತಿ ಕೆ. ಎಸ್ ನಾಗರತ್ನಮ್ಮ.—ಇದೇಕೆ ಹೀಗಾಯಿತು ಎಂದರೆ, "Classification of contractors" ಎಂದು ಮೊನ್ನೆ ಶ್ರೀ ಮುಕ್ಕಣ್ಣಪ್ಪನವರು ಹೇಳಿದರಲ್ಲಾ, ಅದರಿಂದ. ಈ ಪದ್ಧತಿ ಜಾರಿಗೆ ಬಂದ ಮೇಲೆ ಯಾವ ಕೆಸಸವೂ ಆಗುವ ಹಾಗಿಲ್ಲ ; ನಿವು ಕೊಡತಕ್ಕ ಷೆಡ್ಯೂಲ್ಡ್‌ದರಕ್ಕೆ ಯಾವ ಕಂಟ್ರಾಕ್ಟರುಗಳು ಸಿಕ್ಕುವುದಿಲ್ಲ. ಎಷ್ಟೋ

ವೇಳೆ ಎಸ್ಟಿಮೇಟ್‌ಆದ ದರಕ್ಕೆ ೨೦-೨೨ Per cent ಜಾಸ್ತಿ ಕಂಟ್ರಾಕ್ಟಗರ್‌ಳಿಗೆ ಕೊಡುತ್ತಾರೆ. ಕಂಟ್ರಾಕ್ಟರ್‌ಗಳ ಪ್ರಭಾವಕ್ಕೆ ಸಿಕ್ಕಿ ಯಾವುದೊಂದು ಪ್ರಾಜೆಕ್ಟಿ ಬರಲಿ ಅದರ ಎತ್ತರವನ್ನೋ ಮತ್ತೊಂದನ್ನೋ ವ್ಯತ್ಯಾಸ ಮಾಡಿಸಿ ಎಸ್ಟಿಮೇಟನ್ನು ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಆದ್ದರಿಂದ ಈರೀತಿ ಕಂಟ್ರಾಕ್ಟರ್‌ಗಳನ್ನು classify ಮಾಡುವ ಪದ್ಧತಿಯನ್ನು ಬಿಡದೆ ವಿಧಿಯಿಲ್ಲ. ಆಗಲೇ ಕಂಟ್ರಾಕ್ಟರ್‌ಗಳ ಅಭಾವವೂ ತಪ್ಪುತ್ತದೆ; ಕೆಲಸವೂ ಬೇಗ ಆಗುತ್ತದೆ; ಆಫೀಸರ್‌ಗಳು ಮಾಡುವ ದುರ್ವ್ಯಯಗಳಿಗೂ ಅವಕಾಶವಿರುವುದಿಲ್ಲವೆಂದು ನಾನು ಹೇಳುತ್ತೇನೆ.

ಆಮೇಲೆ, ನಮ್ಮ ತಾಲ್ಲೂಕಿನಲ್ಲಿ ಬ್ಲ್ಯಾಕ್ ಲಿಸ್ಟಿಗೆ ಬಂದಿರುವ ಒಬ್ಬ ಕಂಟ್ರಾಕ್ಟರಿದ್ದಾರೆ. ಅವರ ಮೇಲೆ ಎಕ್ಕ್ವೈರಿಕೂಡ ಇದೆ. ಅವರು ಕಟ್ಟಿಸಿದ ಹೈಸ್ಕೂಲು collapse ಆಯಿತೆಂದು ಹೇಳಿ ಅವರ ಮೇಲೆ charge ಮಾಡಿದಾರೆ. ಇಷ್ಟೆಲ್ಲಾ ಅವರ ಮೇಲಿದ್ದರೂ, ತಿರುಗಿ ಅವರಿಗೇ ಎಲ್ಲಾ ಕಂಟ್ರಾಕ್ಟಗಳನ್ನು ಕೊಡುತ್ತಿದ್ದಾರೆ. ಆ ಊರಿನಲ್ಲಿ ಜೆಲ್ಲಿ collect ಮಾಡುವ ಕಂಟ್ರಾಕ್ಟು ಅವರಿಗೇ. ಅರಣ್ಯದ ಕಂಟ್ರಾಕ್ಟುಗಳನ್ನು ಅವರೇ ಮಾಡಿಕೊಂಡಿದ್ದಾರೆ. ಇದಕ್ಕೆಲ್ಲಾ ಹೇಳುವವರು ಕೇಳುವವರೇ ಇಲ್ಲವೆಂದು ಕಾಣುತ್ತದೆ. ಈ ಡಿಪಾರ್ಟಮೆಂಟಿನ ವಿಷಯದಲ್ಲಿ ನಾನು ಯಾವ ದ್ವೇಷದಿಂದಲೂ ಹೇಳುತ್ತಿಲ್ಲ. ನಿಜವಾದ ಪರಿಸ್ಥಿತಿಯನ್ನು ತಮ್ಮ ಗಮನಕ್ಕೆ ತರಬೇಕೆಂದು ಹೇಳುತ್ತಿದ್ದೇನೆ, ಅಷ್ಟೆ.

ಆ ಮೇಲೆ, ಒಂದು ರಸ್ತೆಗೆ ಕೊಡಬೇಕಾದ ರಾಯಲ್ಟಿಯ ವಿಚಾರವಾಗಿ P.W.D. ಮಂತ್ರಿಗಳವರಲ್ಲಿಗೆ ಅನೇಕ ಕಂಟ್ರಾಕ್ಟರುಗಳನ್ನು ಕರೆದುಕೊಂಡು ಬಂದಿದ್ದೆ. ಈಗ ಅಲ್ಲಿ ಏನಾಗಿದೆಯೆಂದರೆ, ಒಂದು ಬಿಲ್ಲಿನ ಮೊತ್ತದ ಮೇಲೆ ೫ ನ.ಪೈ. ಯಂತೆ ಹಿಡಿಯಬೇಕೆಂದಿದ್ದಾರೆ, ೫೦ ನ.ಪೈ. ಹಿಡಿಯ ಹೊರಟಿದ್ದಾರೆ. ಮಂತ್ರಿಗಳಿಗೆ ಹೇಳಿದ್ದಕ್ಕೆ ನೋಡಿ ಪರಿಶೀಲನೆ ಮಾಡುತ್ತೇವೆಂದು ಹೇಳಿದರು. ಈಚೆಗೆ ಮಂತ್ರಿಗಳು, ೫೦ ನ.ಪೈಯಲ್ಲ, ೧೯ ನ.ಪೈ. ಯಂತೆ ವಸೂಲುಮಾಡಬೇಕೆಂದಿದೆ; ಈಪ್ರಕಾರ ಸೂಚನೆಕೊಡುತ್ತೇವೆ ಎಂದು ಹೇಳಿದರು. ಇದನ್ನೇ ಅವೊತ್ತು ನಮಗೆ ತಿಳಿಸಿದ್ದರೆ ನಮಗೂ ಎಷ್ಟೋ ಸಂತೋಷವಾಗುತ್ತಿತ್ತು. ಈಗಲೂ ನನಗೆ ಸಂದೇಹವೇ? ನಿಜವಾಗಿಯೂ ೧೯ ನ.ಪೈಸೆಯೋ ಅಥವಾ ೫೦ ನ.ಪೈ ಸೆಯೇ ಇದೆಯೋ ದಯವಿಟ್ಟು ನೋಡಿ ಹೇಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ

ನಮ್ಮ ಊರಿನ ಹತ್ತಿರ ಪರಮಾಪುರ-ಚಿಕ್ಕಪುತ್ತಾರ್ ರಸ್ತೆ ಎಂಬುದು ಚಿಕ್ಕಂದಿನಿಂದಲೂ ನೋಡುತ್ತಿರುವ ರಸ್ತೆ. ಈಗ ೫-೬ ವರ್ಷಗಳಿಂದಲೂ ಒಂದೇ ಸಮನೆ ಇದನ್ನು ರಿಪೇರಿ ಮಾಡಿಸಿಕೊಡಿ ಎಂದು ಕೇಳಿಕೊಳ್ಳುತ್ತಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳಾದ ನಿಂಜಲಿಂಗಪ್ಪನವರೂ ನಮ್ಮ ಊರಿಗೆ ಬಂದಾಗ ಈ ರಸ್ತೆಯನ್ನು ನೋಡಿ ಇದರ ಕಷ್ಟವೇನೆಂಬುದನ್ನು ಅನುಭವಿಸಿ ಬಂದಿದ್ದಾರೆ. ಇದು ಬಸ್ ಓಡಾಡುವ ರಸ್ತೆಯಾಗಿತ್ತು. ಈಚೆಗೆ ರೋಡ ಚೆನ್ನಾಗಿಲ್ಲದ್ದಿದರಿಂದ ಸುತ್ತಿಕೊಂಡು ಬೇರೆ ರಸ್ತೆಯಿಂದ ಪ್ರಯಾಣ ಮಾಡಬೇಕಾಗಿಬಂದಿದೆ. ವೃಥಾ ಪ್ರಯಾಣಿಕರು ೪೦ ನ.ಪೈ. ದಿನವೂ ಹೆಚ್ಚಿಗೆ ಕೊಟ್ಟು ಹೋಗುತ್ತಿದ್ದಾರೆ. ನೀವೇನೋ, ೪೦ ನಯೆ ಪೈಸೆ ಬಹಳ meagre ಎಂದು ಹೇಳಿಬಿಡಬಹುದು. ಆದರೆ ಬಡರೈತನಿಗೆ ೪೦ ನಯೆಪೈಸೆ ಇತ್ತೆಂದರೆ ಎರಡು ಸೇರು ಪುರಿ ಬೆಲ್ಲ ಸಿಕ್ಕಿ, ಒಂದು ದಿನದ ಗ್ರಾಸವಾಯಿತು. ಆದ್ದರಿಂದ ದಯವಿಟ್ಟು ಈ ರಸ್ತೆಯನ್ನು ಸರಿಮಾಡಿಸಿ ಕೊಡಬೇಕೆಂದು ಹೇಳುತ್ತೇನೆ.

ಆಮೇಲೆ ನಮ್ಮ ಕಡೆ ಭೀಮನ ಬೀಡ್ ಕೆರೆ ಮತ್ತು ಕೋಟಿ ಪುರದ ಕೆರೆ ಎಂಬ ಎರಡು ಕೆರೆಗಳನ್ನು ಕಟ್ಟಿಸಿ ಕೊಡಬೇಕೆಂದು ಈಗ ಸುಮಾರು ಮೂರು ವರ್ಷಗಳಿಂದಲೂ ಕೇಳಿಕೊಳ್ಳುತ್ತಿದ್ದೇನೆ. ಸಾಮಾನ್ಯವಾಗಿ ನಾನು ಬರೆಯುವ ಕಾಗದಕ್ಕೆ ಉತ್ತರವೇ ಬರುವುದಿಲ್ಲ. ಆದರೆ ಈ ಒಂದು ಕಾಗದವೇನೋ ಸರ್ಕಾರದಿಂದ ಜವಾಬು ಪಡೆಯುವ ಅದೃಷ್ಟ ಪಡೆದಿತ್ತು. ಭೀಮನ ಬೀಡು ಕೆರೆಗೆ ಎಸ್ಟಿಮೇಟು ಕೇವಲ 33,000 ರೂಪಾಯಿಗಳು. ಈ ಪ್ರದೇಶದ ಕಷ್ಟವೇನೆಂದರೆ, ಅದು ಜೌಗು ಪ್ರದೇಶ. ಜೋಳ ಬೆಳೆಯುವುದಿಲ್ಲ. ಬತ್ತಕ್ಕೆ ನೀರು ಸಾಲದು. ಹೀಗಾಗಿ ಆ ಪ್ರದೇಶದಲ್ಲಿ ಸರಿಯಾದ ಬೆಳೆಯಿಲ್ಲದೆ ಕ್ಷಾಮ ದೆಶೆಗೇ ತುತ್ತಾಗುತ್ತಿದೆ. ಇಂಥದನ್ನು ಮಾಡಿಸಿ ಕೊಡಿ ಎಂದು ಹೇಳಿದರೆ, ಈ Proposal ನ್ನು ಆಮೇಲೆ ತೆಗೆದುಕೊಳ್ಳುತ್ತೇವೆ ಎಂದು ಉತ್ತರ ಬರೆದು ಕಳುಹಿಸಿದ್ದಾರೆ. ಅದೇಕೆ ನಮ್ಮ ಗುಂಡ್ಲು ಪೇಟೆಯ ಮೇಲೆ ಕೋಪವೋ ನನಗೆ ಗೊತ್ತಿಲ್ಲ? ಇದನ್ನು ದಯವಿಟ್ಟು ಮಾಡಿಸಿಕೊಡಬೇಕೆಂದು ಹೇಳುತ್ತೇನೆ. ಮುಖ್ಯವಾಗಿ ಮೈನರ್ ಇರಿಗೇಷನ್‌ಗಳ ಬಗ್ಗೆ ಸರ್ಕಾರದವರು ಹೆಚ್ಚಿಗೆ ಗಮನ ಕೊಡಬೇಕೆಂದು ನಾನು ಹೇಳುತ್ತೇನೆ. ಈ ಸಭೆಯ ಸದಸ್ಯರೆಲ್ಲರೂ ಇದಕ್ಕೆ ಒಪ್ಪುತ್ತಾರೆಂದು ನಾನು ಹೇಳಬಲ್ಲೆ.

ಆಮೇಲೆ, ಈ ಇಲಾಖೆಯಲ್ಲಿರುವ ಸೂಪರ್‌ವೈಸರುಗಳ ವಿಚಾರ ಸ್ವಲ್ಪ ಹೇಳಬೇಕಾಗಿದೆ. ನಮ್ಮ ತಾಲ್ಲೂಕಿನಲ್ಲಿ ಹೇಳುವುದಾದರೆ, ಈ ಸೂಪರ್‌ವೈಸರುಗಳಿಗೆ ಕೆಲಸ ಸ್ವಲ್ಪವೂ ಸಾಲದು. ಇಷ್ಟಿಷ್ಟು ಕೋಟಿ ರೂಪಾಯಿಗಳಿಗೆ ಇಷ್ಟಿಷ್ಟು ಜನ ಎಂದು Establishment ಇಟ್ಟುಕೊಂಡಿರುತ್ತೀರಿ. ಕೆಲಸವಿದೆಯೇ ಇಲ್ಲವೇ ಎಂದು ನೋಡುವುದಿಲ್ಲ. ಕೆಲಸಕ್ಕೆ ಎಷ್ಟು ಜನ ಇರಬೇಕು ಎಂದು ನೋಡುವುದಿಲ್ಲ. ಎಷ್ಟೋ ಸೂಪರ್‌ವೈಜರುಗಳು ಕೆಲಸವಿಲ್ಲದೆ ರಾಜಕೀಯಕ್ಕೂ ಪ್ರವೇಶ ಮಾಡಿದ್ದಾರೆ. ಆದ್ದರಿಂದ ದಯವಿಟ್ಟು ಇವರುಗಳ ಸಂಖ್ಯೆಯನ್ನು ಕಡಮೆ ಮಾಡಿ. ಕೆಲಸವೆಷ್ಟಿದೆಯೋ ಅಷ್ಟಕ್ಕೆ ತಕ್ಕಂತೆ ಸೂಪರ್‌ವೈಜರುಗಳನ್ನು ಇಟ್ಟುಕೊಳ್ಳಬೇಕೆಂದು ಹೇಳುತ್ತೇನೆ.

ಆಮೇಲೆ ರಿಸರ್ಚ್ ವಿಷಯ. ಈ ಇಲಾಖೆಯಲ್ಲಿ ಈ ವಿಷಯದಲ್ಲಿ ಮೊದಲನೆಯ ಪ್ಲಾನಿನಲ್ಲಾಗಲೀ, ಎರಡನೆಯ ಪ್ಲಾನಿನ ಅವಧಿಯಲ್ಲಾಗಲೀ ಏನೇನೂ ಕೆಲಸ ನಡೆದಿಲ್ಲ. ಈ ಬಾಬಿಗೆ ಸರಿಯಾದ ಜನರಿಲ್ಲ. ಅದಕ್ಕೆ ತಕ್ಕ ಸಿಬ್ಬಂದಿ ಸೌಕರ್ಯವಿಲ್ಲ. ಇನ್ನೆಲ್ಲಾ ಇಲಾಖೆಗಳಲ್ಲೂ ರಿಸರ್ಚಿಗೆ priority ಕೊಡುತ್ತಿದ್ದಾರೆ. ಅದರೆ ಪಿ ಡಬ್ಲ್ಯೂ. ಡಿ. ಇಲಾಖೆ ಏಕೆ ಈ ವಿಚಾರದಲ್ಲಿ ಅನ್ಯಾಯ ಮಾಡಿದೆಯೋ ಗೊತ್ತಿಲ್ಲ. ಸರ್ಕಾರದವರು ಇತ್ತ ಗಮನ ಕೊಡುತ್ತಾರೆಂದು ನಂಬಿದ್ದೇನೆ.

ಕೊನೆಯದಾಗಿ, ಶರಾವತಿ ಪ್ರಾಜೆಕ್ಟನ್ನು ಏನಾದರೂ ಮಾಡಿ, "Centrally sponsored scheme," ಎಂದು ತೆಗೆದುಕೊಳ್ಳುವಂತೆ ಸರ್ಕಾರದವರು ಒತ್ತಾಯ ಮಾಡಬೇಕೆಂದು ಹೇಳುತ್ತೇನೆ. ಇದಾದರೆ ಮುಂದೆ ನಮ್ಮ ದೇಶಕ್ಕೆ ಬಹಳ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಶ್ರೀಮತಿ ಬಸವರಾಜೇಶ್ವರಿ (ಮಾನ್ವಿ).— ಮಾನ್ಯ ಅಧ್ಯಕ್ಷರೇ, ಈ ಡಿಮ್ಯಾಂಡನ್ನು ಅನುಮೋದಿಸುತ್ತಾ ಕೆಲವು ವಿಷಯಗಳನ್ನು ಸರ್ಕಾರದವರ ಮುಂದೆ ನಾನು ಇಡಬಯಸುತ್ತೇನೆ. ತುಂಗಭದ್ರಾ ದೊಡ್ಡ ಜಲಾಶಯವನ್ನು ಹಿಂದಿನ ಹೈದರಾಬಾದ್ ಸರ್ಕಾರದವರು ಕಟ್ಟಿಸಿದರು. ಇದರಿಂದಾಗಿ ಇವೊತ್ತಿನ ದಿವಸ ಲಕ್ಷಾಂತರ ಎಕರೆ ನೀರಾವರಿಯಾಗುತ್ತಿದೆ ಎಂದು ಹೇಳುತ್ತಿದ್ದಾರೆ. ಆದರೆ ವಾಸ್ತವವಾಗಿ ಅಲ್ಲಿ ಇನ್ನೂ 'Water given, Water taken,'' ಎಂದು ಬರೆವಣಿಗೆಯಲ್ಲಿ ಇದ್ದಂತಾಗಿದೆಯೇ ಹೊರತು ಕಾರ್ಯತಃ ಎಷ್ಟು ಮಾತ್ರವೂ ವ್ಯವಸಾಯ ಸಾಗಿಲ್ಲ. ಏಕೆಂದರೆ ಕೊಂಚ ಮಟ್ಟಿಗೂ ನೀರಿನ ಪೂರೈಕೆ ಆ ಜನರಿಗೆ ಲಭಿಸಿಲ್ಲ. ಈ ತೊಂದರೆಗಳನ್ನು ನಾನು ಇವೊತ್ತು ತಮ್ಮ ಗಮನಕ್ಕೆ ತರ ಬಯಸುತ್ತೇನೆ. ನೀರನ್ನು ಕೊಟ್ಟರೆಂದರೂ ಅದನ್ನು ಜಮೀನುಗಳಿಗೆ ಕೊಂಡೊಯ್ಯಲು ಬೇಕಾದ ಸಹಾಯ ಸವಲತ್ತುಗಳು ದೊರಕುತ್ತಿಲ್ಲ.

''Development loan,'' ಎಂದು ಸಾಲ ಕೊಡುತ್ತೀರಿ. ಸಾಲ ಕೊಟ್ಟ ಕ್ಷಣ ಆ ಭಾಗ develop ಆಯಿತೆಂದು ಅರ್ಥವಲ್ಲ. ಆದ್ದರಿಂದ ಹಣ ಕೊಟ್ಟ ಹಣದ ಉಪಯೋಗ ರೈತರಿಗೆ ಲಭಿಸುವುದಿಲ್ಲ. ಇದಕ್ಕೆ ಬದಲಾಗಿ ಬುಲ್ ಡೋಸರ್‌ಗಳನ್ನು, ಟ್ರಾಕ್ಟರುಗಳನ್ನು ಹೆಚ್ಚು ಹೆಚ್ಚಿಗೆ ಕೊಟ್ಟರೆ ರೈತರಿಗೇನಾದರೂ ಅನುಕೂಲ ಮಾಡಿಕೊಟ್ಟಂತಾಗುತ್ತದೆಂದು ನನ್ನ ಭಾವನೆ. ಆದ್ದರಿಂದ ಹಣದ ಬದುಲು ಟ್ರಾಕ್ಟರು ಬುಲ್‌ಡೋಜರುಗಳನ್ನು ಕೊಡಿ. ಈಗ ಆ ಅಯಕಟ್ಟಿನ ಪ್ರದೇಶದಲ್ಲಿರುವುದೆಲ್ಲಾ 3 ಬುಲ್ ಡೋಜರುಗಳು ! ಈಚೆಗೇನೋ ವ್ಯವಸಾಯದ ಮಂತ್ರಿಗಳನ್ನು ಕೇಳಿದ್ದರಲ್ಲ, 20 ಬುಲ್ ಡೋಜರುಗಳನ್ನು ಕಳುಹಿಸಿ ಕೊಡುವುದಾಗಿ ಹೇಳಿದ್ದಾರೆ. ದಯವಿಟ್ಟು ಆದಷ್ಟು ಜಾಗ್ರತೆ ಕಳುಹಿಸಿಕೊಟ್ಟು ಜನರಿಗೆ ವ್ಯವಸಾಯ ಮಾಡಲು ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ. ಮತ್ತು ಈಗ ಸುಮಾರು ನೂರಾರು ಬುಲ್ ಡೋಜರುಗಳು ಮತ್ತು ಟ್ರಾಕ್ಟರುಗಳೂ ಮುಸ್ಕಿ ಸಿಂಧನೂರು, ವಡ್ಡರ ಹಟ್ಟಿ, ಮುನಿರಾಬಾದು ಕ್ಯಾಂಪುಗಳಲ್ಲಿ P.W.D. ಇಲಾಖೆಯಿಂದ ಕೆಲಸವಿಲ್ಲದೆ ಬಿದ್ದಿವೆ. ಅವುಗಳನ್ನು ತಕ್ಷಣ ರಿಪೇರಿ ಮಾಡಿಸಿ ರೈತರಿಗಾಗಿ ಅನುಕೂಲ ಮಾಡಿ ಕೊಡಬೇಕು. ಅವರನ್ನು ಕೇಳಿದರೆ ಒಂದು ಡಿಪಾರ್ಟ್‌ಮೆಂಟಿನ ಸಾಮಾನುಗಳು ಇನ್ನೊಂದಕ್ಕೆ ಕೊಡಲು ಬರುವುದಿಲ್ಲ ಎಂದು ಹೇಳುತ್ತಾರೆ. ನಾವು, ಸರ್ಕಾರ ಅಂದರೆ ಒಂದೇ ಎಂದು ತಿಳಿದಿದ್ದೇವೆ. ಆದ ಕಾರಣ ತಾವು ಮನಸ್ಸು ಮಾಡಿ ರೈತರಿಗೆ ಉಪಯೋಗ ಆಗುವಂತೆ ಮಾಡಬೇಕು. ಮತ್ತು ರಿಪೇರಿ ಆಗವೆ ಇದ್ದಂತಹ ಎಲ್ಲವನ್ನು ರಿಪೇರಿ ಮಾಡಿಸಿ ಹಣದ ಬದಲಾಗಿ ಈ ಉಪಯೋಗ ರೈತರಿಗೆ ಮಾಡಿಸಿಕೊಟ್ಟಿದ್ದಾದರೆ ಅವರು ಜಮೀನಿಗೆ ನೀರು ತೆಗೆದುಕೊಳ್ಳುವಂತೆ ಮಾಡಿದಂತಾಗಿ ಆಹಾರ ಸಂಪತ್ತು ಬೆಳೆಯುತ್ತದೆ.

ಮೇನ್ ಕೆನಾಲ್‌ನಲ್ಲಿ ಸುಮಾರು ಇನ್ನೂರು ಮೈಲಿಗಳವರೆಗೂ ನೀರು ಕೊಟ್ಟಿದ್ದಾರೆ. ಈ ಕೆನಾಲ್ ಆದ ನಂತರ ಕೆಲವು ಜಮೀನಿನ ರೈತರಿಗೆ ತೊಂದರೆಯಾಗುತ್ತಿದೆ. ಇದಕ್ಕೆ ಅಲ್ಲಲ್ಲಿ cart bridges ಮಾಡದೇ ಇರುವುದರಿಂದ ವ್ಯವಸಾಯ ಮಾಡುವುದಕ್ಕೆ ಬಹಳ ತೊಂದರೆಯಾಗಿದೆ. ಸರಕಾರದವರು ಪ್ರತಿಯೊಂದು ಹಳ್ಳಿಗಳಲ್ಲಿಯೂ ಹತ್ತು ಮೈಲಿಗೊಂದು ತಿರುಗಾಡುವ ರಸ್ತೆಗಳನ್ನು ಮಾಡಬೇಕು ಎಂದು ಹೇಳುತ್ತೇನೆ. ಅಲ್ಲಲ್ಲಿ cart bridges ಗಳನು ಮಾಡುವುದು ಬಹಳ ಅಗತ್ಯ ಎಂದು ನಾನಿಲ್ಲಿ ಸಲಹೆ ಮಾಡುತ್ತೇನೆ. ಇದೇ ಪ್ರಕಾರ ಡಿಸ್ಟ್ರಿಬ್ಯೂಟರೀಸ್‌ಗಳನ್ನು ಮಾಡುವಾಗ ಬರಿಯ ಮಣ್ಣಿನಿಂದ ಮಾಡಿದರೆ ಸರಿಯಾಗಿರುವುದಿಲ್ಲ. ಇದರಿಂದ ಹೆಚ್ಚಿನ ನೀರಾವರಿ ಮಾಡಲು ಸಾಧ್ಯವಿಲ್ಲ. ಇವುಗಳನ್ನು ಸಿಮೆಂಟು ಲೈನಿಂಗು ಮೂಲಕ ಇಲ್ಲವೇ ಶಾಬಾದ್ ಕಲ್ಲುಗಳಲ್ಲಿ ಲೈನಿಂಗು ಮಾಡಬೇಕು, ಬರೀ ಮಣ್ಣಿನಿಂದ ಮಾಡಿದರೆ ಜಮೀನುಗಳಿಗೆ ನೀರು ಬಾರದೇ ಅರ್ಧದಲ್ಲೇ ನೀರು ಇಂಗಿ ಹೋಗುತ್ತದೆ. ಇದರ ಕಡೆಗೆ ಸರಕಾರ ಲಕ್ಷ್ಯ ಕೊಡಬೇಕು.

ಗಂಗಾವತಿ ಭಾಗದಲ್ಲಿ ಕೆಲವು ಕಡೆಗಳಲ್ಲಿ ಜಮೀನುಗಳಲ್ಲಿ ಉಪ್ಪು ತೇಲಿದೆ. ಸೀಪೇಜು ನೀರನ್ನು ತಡೆಯಲು ತಕ್ಕ ಕ್ರಮವನ್ನು ಸರಕಾರ ಮಾಡಬೇಕು. ಹಿಂದೆ ವಿಜಯನಗರ ರಾಜ್ಯವಿದ್ದಾಗ ಕೆಲವು ಸಣ್ಣ ಸಣ್ಣ ನೀರಾವರಿ ಕೆಲಸಗಳಿದ್ದುವು. ಆಕಡೆ ಕೂಡ ಸರಕಾರ ಲಕ್ಷ್ಯವಿಡಬೇಕು. ಅಲ್ಲಿ ಇದಕ್ಕಿಂತ Free Moghul Canals ಬಸವರಾಯು, ದೇಶನೂರು ಎಂಬ ಹೆಸರಿನ ಟ್ರಿಬ್ಯುಟರಿಗಳು ನೀರಾವರಿ ಕೆಲಸಗಳಿಗಾಗಿ ಎಂದು ಇದ್ದುವು. ಅದರಿಂದ ಕೆಲವೊಂದು ಜಮೀನುಗಳಿಗೆ ನೀರಿನ ಸೌಲಭ್ಯ ಸಿಕ್ಕುತ್ತಿಲ್ಲ. ಇದಕ್ಕೆ ಕಾರಣವೇನು ಎನ್ನುವುದರ, ಕಡೆಗೆ ಲಕ್ಷ್ಯಕೊಟ್ಟಿಲ್ಲ. ಇದರ ಪೂರ್ತಿ ಸ್ಕೀಮನ್ನು ರೀ ಆರ್ಗನೈಜುಮಾಡಿ ಸರಿಯಾದ ಎಸ್ಟಿಮೇಟುಗಳನ್ನು ಮಾಡಿ ದುರಸ್ತಿ ಮಾಡುವುದು ಆವಶ್ಯಕ. ನಾಲಾಗಳಿಂದ ನೀರು ಹರಿಯುವಂತೆ ಮಾಡುವಾಗ ಅದರ ಹತ್ತಿರವಿರುವ ರೈತರಿಗೆ ಅನುಕೂಲವಾಗುತ್ತದೆ. ಕೆಲವು ಜನಕ್ಕೆ ಟೆಂಪರರಿ ಲೈಸೆನ್ಸುಗಳನ್ನು ಕೊಟ್ಟು ನೀರು ತೆಗೆದುಕೊಳ್ಳಬೇಕೆಂದು ಇದ್ದರೂ ಕೆಲವು ಜನಕ್ಕೆ ನೀರು ಸಿಕ್ಕುತ್ತಿಲ್ಲ. ಈರೀತಿ ಟೆಂಪರರಿ ಲೈಸೆನ್ಸನ್ನು ಕೊಡುತ್ತಿದ್ದರೂ ತೊಂದರೆಯಾಗುತ್ತಿದೆ. ಅಲ್ಲದೆ Tail endನ ಜಮೀನುಗಳಿಗೆ ನೀರು ಸರಿಯಾಗಿ ಬರಲು ತಕ್ಕ ಪ್ರಯತ್ನಮಾಡಿ ಜನಗಳಿಗೆ ಆಗುತ್ತಿರುವ ತೊಂದರೆಗಳನ್ನು ತಪ್ಪಿಸಬೇಕು.

ಮತ್ತೆ ನಮ್ಮ ರಾಯಚೂರು ಜಿಲ್ಲೆಯಲ್ಲಿ ಗಿಲ್ಲುಸುಗೂರಷ ಎಂಬಲ್ಲಿ ಒಂದು ಬ್ರಿಡ್ಜ್‌ವನ್ನು ಮಾಡಿದರೆ, ಬೆಂಗಳೂರಿಗೆ ಅಲ್ಲಿಂದ 210 ಮೈಲಿಗಳಷ್ಟು ದೂರವಾಗುತ್ತದೆ ಮತ್ತು ಹೈದರಾಬಾದು ಭಾಗಕ್ಕೆ ಹೋಗಲು ಅನುಕೂಲವಾಗುತ್ತದೆ. ಇದರ ಕಡೆಗೆ ಸರಕಾರದವರು ಸ್ವಲ್ಪ ಲಕ್ಷ್ಯ ಕೊಡಬೇಕು. ಇದರ ಬಗ್ಗೆ ಯಾವ ಯೋಜನೆಯನ್ನೂ ಬಡ್ಜೆಟ್ಟಿನಲ್ಲಿ ಸೇರಿಸಿಲ್ಲ. ಇದೇ ಪ್ರಕಾರ ಆನೆಗೊಂದಿ ಬಳಿ ಒಂದು ಬ್ರಿಡ್ಜನ್ನು ಮಾಡಿಲ್ಲ. ಹಂಪೆಗೆ ಬರುವವರೆಲ್ಲ ಆನೆಗೊಂದಿಗೆ ಹೋಗುತ್ತಾರೆ. ಹೀಗೆ ಹೋಗಲು ಸರಿಯಾದ ರೋಡಿಲ್ಲ. ಇಲ್ಲಿ ಒಂದು ಬ್ರಿಡ್ಜ್ ಆಗಬೇಕು.

ಹೀಗೆ ತುಂಗಭದ್ರ ಅಣೆಕಟ್ಟಿನ ಬಳಿ ಇನ್ನೊಂದು ಬ್ರಿಡ್ಜನ್ನು ಕಟ್ಟಬೇಕು. ಇದರ ಬಗ್ಗೆ ಯೋಜನೆ ಮಾಡಬೇಕು.

ರಾಯಚೂರಿನಲ್ಲಿ ಒಂದು ದೊಡ್ಡ ಹಾಸ್ಪಿಟಲ್ಲನ್ನು ಮಾಡುತ್ತಿದ್ದಾರೆ. ಇದರಲ್ಲಿ ground floor ಆಗಿದೆ ಮೊದಲನೇ ಅಂತಸ್ತನ್ನು ಕಟ್ಟಬೇಕೆಂದು 4.60 ಲಕ್ಷ ರೂಪಾಯಿಗಳಷ್ಟು ಹಣವನ್ನು ಬಡ್ಜೆಟ್ಟಿನಲ್ಲಿ ಒದಗಿಸಿದ್ದಾರೆ. ಆದರೆ ಇದಕ್ಕೆ Administrative sanction ಯಾವ ಕಾರಣದಿಂದಲೋ ಕೊಟ್ಟಿಲ್ಲ. ಈ ರೀತಿ ಪಾಲಿಟೆಕ್ನಿಕ್, ಹಾಸ್ಟೆಲು ಸ್ಟಾಫು ಕ್ವಾರ್ಟರ್ಸು ಹಾಗಾಗಿವೆ. ಇದಕ್ಕೆ ಕಾರಣವನ್ನು ಮಾನ್ಯ ಸಚಿ

ವರು ಹೇಳಬೇಕೆಂದು ಕೇಳುತ್ತೇನೆ. ಇದು ಬಹಳ ಅಗತ್ಯವಾದುದು. ಇದರ ಕೆಲಸ ಕಾರ್ಯಗಳನ್ನು ಬೇಗನೆ ಮಾಡಲು ತಾವು ಸಹಾಯ ಮಾಡಬೇಕು.

ಇನ್ನೊಂದು ನವಿಲು ಕೋಲುದಿಂದ ಹಟ್ಟಿ ರೋಡು ಸುಮಾರು ಇಪ್ಪತ್ತೆರಡು ಮೈಲಿ ಮಾತ್ರ ಇದೆ. ಹಟ್ಟಿ ಚಿನ್ನದ ಗಣಿಯವರೆಗೆ ಹೋಗುವ ರೋಡಿನ ಮಧ್ಯೇ ಒಂದು ಕಲ್‌ವರ್ಟ್ ಇದೆ. ಅದರಿಂದ ಬಹಳ ತೊಂದರೆ ಆಗಿದೆ. ಇದನ್ನು ಇನ್ನೂ ದುರಸ್ತು ಮಾಡಿಲ್ಲ. ಈ ಬಗ್ಗೆ ಈ ಗಣಿ ಕಂಪನಿಯವರೂ ಕೂಡ ಎಷ್ಟೋ ಸಲ ಮನವಿಯನ್ನು ಮಾಡಿ ಕೊಂಡಿದ್ದಾರೆ. ಈ ರೋಡನ್ನು Black Top Road ಆಗಿ ಮಾಡಬೇಕು. ಇದರ ಬಗ್ಗೆ ಸರಕಾರದವರು ಲಕ್ಷ್ಯ ಕೊಟ್ಟಿಲ್ಲ. ತಾವು ಹೆಚ್ಚು ಗಮನ ಕೊಡಬೇಕು. ಇದೇ ಪ್ರಕಾರ, ಕವತಾಳ ಮತ್ತು ಮರ್ಕಿ ರೋಡು ಇದರಲ್ಲೂ ಕೂಡ ಕಲ್‌ವರ್ಟ್ ಕಟ್ಟದೇ ಇರುವುದರಿಂದ ಓಡಾಡಲು ಬಹಳ ಜನಕ್ಕೆ ಅನಾನುಕೂಲವಾಗುತ್ತಿದೆ. ಇದರ ಕಡೆ ಸರಕಾರ ಲಕ್ಷ್ಯ ಕೊಡಬೇಕು.

ಟ್ಯಾಂಕುಗಳ ವಿಚಾರ ಇಪ್ಪತ್ತು ಸಾವಿರ ರೂಪಾಯಿಗಳಿಗಿಂತ ಕಡಮೆ ಇರತಕ್ಕ ಮೈನರು ಇರಿಗೇಷನ್ ವರ್ಕನ್ನು ಮಾಡಬೇಕೆಂದಿದ್ದರು. ಇನ್ನೂ ಯಾವ ತರಹದ ಕೆಲಸವೂ ಆಗಿಲ್ಲ. ನಮ್ಮ ರಾಯಚೂರುಜಿಲ್ಲೆಯ ದೇವದುರ್ಗ, ಮಾನ್ವಿ, ಲಿಂಗಸಗೂರು ಇತ್ಯಾದಿ ಕೆಲವು ಸ್ಥಳಗಳಲ್ಲಿ ಮೈನರು ಟ್ಯಾಂಕುಗಳ ರೆಸ್ಟೊರೇಷನ್ನು ಕೆಲಸಗಳನ್ನು ಮಾಡಿಲ್ಲ. ಇದರ ಬಗ್ಗೆ ಕೇಳಿದರೆ ಚೀಫ್ ಇಂಜಿನಿಯರವರ ಸ್ಯಾಂಕ್ಷನ್ನು ಬರದೆ ಮಾಡಲು ಬರುವುದಿಲ್ಲ ಅವರು ಎನ್ನುತ್ತಾರೆ. ಆದುದರಿಂದ ಇಂತಹ ಮೈನರು ಇರಿಗೇಷನ್ ಕೆಲಸಗಳನ್ನು ಇನ್ನೂ ತೀವ್ರವಾಗಿ ಮಾಡಬೇಕೆಂದು ಸರಕಾರಕ್ಕೆ ಸಲಹೆ ಮಾಡುತ್ತೇನೆ. ನಮ್ಮ ರಾಯಚೂರು ಜಿಲ್ಲೆಯ ಕಡೆಗೆ ಮೈನರು ಇರಿಗೇಷನ್ನಿಗೆ ತಾವು ಹೆಚ್ಚಿನ ಗಮನಕೊಡಬೇಕೆಂದು ನಾನು ಅಭಿಪ್ರಾಯಪಡುತ್ತೇನೆ.

ಅಪ್ಪರು ಕೃಷ್ಣ ಯೋಜನೆಗಾಗಿ ಎಷ್ಟೋ ದುಡ್ಡನ್ನು ಒದಗಿಸಿದ್ದಾರೆ. ಇದರ ಸರ್ವೆ ಕೆಲಸವೂ ಪೂರ್ತಿಯಾಗಿ ಆಗಿದೆ. ಹಾಗಿದ್ದೂ ಕೆಲಸ ಪ್ರಾರಂಭವಾಗಲು ಇನ್ನೂ ತಡವಾಗುತ್ತಿದೆ. ಹೀಗೆ ಪ್ರಾರಂಭ ಮಾಡದೇ ಇರಲು ಕಾರಣವೇನು? ಸೆಂಟ್ರಲ್ ಅಸಿಸ್ಟೆನ್ಸು ಏನಾದರೂ ಬರಲಿಲ್ಲವೇ? ಬೇರಾವ ಕಾರಣಗಳಿವೆಯೋ ನಮಗೇನೋ ಗೊತ್ತಿಲ್ಲ. ಮಾನ್ಯ ಮಂತ್ರಿಗಳು ಇದರ ಬಗ್ಗೆ ನಮಗೆ ತಿಳಿಸಬೇಕೆಂದು ಬೇಡುತ್ತೇನೆ.

ಮಾನ್ವಿಯಲ್ಲಿರುವ ಹೈಸ್ಕೂಲಿನ ವಿಚಾರವಾಗಿ ಹೇಳುವುದಾದರೆ ಅದು ಸುಮಾರು ಐವತ್ತು ವರ್ಷಗಳಿಂದಲೂ ಒಂದು ಕಟ್ಟಡದಲ್ಲಿ ನಡೆಯುತ್ತಿದೆ. ಇವೊತ್ತಿನ ದಿವಸ ಇಲ್ಲಿ 500-600 ಹುಡುಗರು ಇದ್ದಾರೆ. ರತಕ್ಕ ಅಕಾಮೊಡೇಷನ್ನು ಸಾಲದು. ಇದಕ್ಕೆ ತಕ್ಕಷ್ಟು ಹೆಚ್ಚಿನ ಅಕಾಮೋಡೆಷನ್ನನ್ನು ಮಾಡಲು ಯಾವ ಪ್ಲಾನನ್ನು ಮಾಡಿಲ್ಲ. ಬಡ್ಜೆಟ್ಟಿನಲ್ಲಿ ಕೂಡ ಇದಕ್ಕೆ ತಕ್ಕಷ್ಟು ಹಣವನ್ನು ಕೊಟ್ಟಿಲ್ಲ. ನಮ್ಮ ಮಾನ್ವಿಯ ಕಡೆಗೆ ಹೆಚ್ಚಿನ ಗಮನ ಕೊಟ್ಟಿಲ್ಲ. ಅದರಲ್ಲೂ ನಮ್ಮ ಭಾಗದವರೇ ಆದ ಮಂತ್ರಿಗಳು ಈ ಖಾತೆಯ ಮಂತ್ರಿಗಳಾಗಿದ್ದಾರೆ. ಇವರು ಬಹಳ ಚೆನ್ನಾಗಿ ತಿಳಿದವರು. ನಾನು ಹೇಳಿರತಕ್ಕ ಪ್ರತಿಯೊಂದು ಅಂಶದ ಕಡೆಗೂ ಲಕ್ಷ್ಯ ಕೊಟ್ಟು ಪ್ರತಿಯೊಂದನ್ನೂ ಸರಿಮಾಡುತ್ತಾರೆಂದು ಹೇಳಿ ಅಧ್ಯಕ್ಷರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎ. ಕೃಷ್ಣಶೆಟ್ಟಿ (ಮಂಗಳೂರು II).—ಸ್ವಾಮೀ, ನಾನು ನಾಲ್ಕು ವಿಷಯಗಳ ಮೇಲೆ ಮಾತನಾಡುತ್ತೇನೆ. ಮೊದಲನೆಯದು ಲೋಕೋಪಯೋಗಿಖಾತೆ; ಎರಡನೆಯದು ಸಣ್ಣ ಮತ್ತು ದೊಡ್ಡ ನೀರಾವರಿ; ಮೂರನೆಯದು ವಿದ್ಯುಚ್ಛಕ್ತಿ ಮತ್ತು ನಾಲ್ಕನೆಯದು ಬಂದರು. ಈ ವಿಷಯಗಳ ಮೇಲೆ ಹೆಚ್ಚಿನ ಚರ್ಚೆ ಇಲ್ಲಿ ನಡೆಯಿತು. ನಾನು ಕೇಳಿದಂತೆ ಲೋಕೋಪಯೋಗಿ ಖಾತೆಯ ಮಟ್ಟಿಗೆ ಹೇಳುವಾಗ ಕೆಲವರು ಇದನ್ನು Public Enemy No. (1) ಎಂದು ಹೇಳಿದರು. ನಾನು ಅದು ಅಲ್ಲ ಎಂದು ಹೇಳುವುದು. ನಾನು ಹೇಳುವುದು, ಲೋಕೋಪಯೋಗಿ ಶಾಖೆಯು ಒಂದು ಕಂಟ್ರಾಕ್ಟರುಗಳ ವರ್ಗವನ್ನು ಸೃಷ್ಟಿಸಿವಂತಹುದು. ಕಂಟ್ರಾಕ್ಟರುಗಳ ವರ್ಗ Enemy No. (1) ಎಂದು ಹೇಳುತ್ತೇನೆ. ಕಂಟ್ರಾಕ್ಟರುಗಳ ಅಭಿವೃದ್ಧಿಗೂ ಸ್ಟೇಟ್ ಡೆವೆಲಪ್‌ಮೆಂಟಿನಂತಹ ಸಮುದಾಯದ ಅಭಿವೃದ್ಧಿಗೂ ಯಾವ ಸಂಬಂಧವೂ ಇಲ್ಲವೇ ಇಲ್ಲ. ಆದುದರಿಂದ ಲೋಕೋಪಯೋಗಿ ಖಾತೆಗೂ ಕಂಟ್ರಾಕ್ಟರುಗಳಿಗೂ ಇರುವ ಸಂಬಂಧವೂ ಸರಿಯಾಗಿ ಕಡಿದುಹೋಗಬೇಕು. ಸರಿಯಾದ ಪ್ರಾತಿನಿಧ್ಯವಾಗದೆ ಈ ಸಾರ್ವಜನಿಕ ಲೋಕೋಪಯೋಗಿ ಶಾಖೆಯು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಲಿಕ್ಕೆ ಎಂದೂ ಸಾಧ್ಯವಿಲ್ಲ. ಇಂಜಿನೀಯರುಗಳೆಂದು ಹೇಳುವವರು ನಮ್ಮ ಭಾವೀ ಸಮಾಜದ ಶ್ರೇಷ್ಟಶಿಲ್ಪಿಗಳು. ಅಂತಹವರು ಎಸ್ಟಿಮೇಟಿನಲ್ಲಿ ಯೋಜನೆಯಲ್ಲಿ ಹೇಳುವ ಕೆಲಸಗಳನ್ನು ಅಭಿವೃದ್ಧಿಯಾಗುವ ರೀತಿಯಲ್ಲಿ ಮಾಡಲು ಕೈಲಾದರೇನೇ ನಿಜವಾಗಿಯೂ ನಮ್ಮ ಮೂರನೇ ಪಂಚವಾರ್ಷಿಕ ಯೋಜನೆಯು ನಡೆಯುವುದಕ್ಕೆ ಸಾಧ್ಯವುಂಟು. ಆ ರೀತಿ ಸಾಮುದಾಯಕವಾದ ಕೆಲಸಗಳು ನಮಗೆ ಎದ್ದು ಕಾಣುತ್ತಿಲ. ಈ ವಿಷಯದಲ್ಲಿ ಮುಖ್ಯವಾಗಿ ಹೇಳುವುದೇನೆಂದರೆ ಕಂಟ್ರಾಕ್ಟಿನ ಪದ್ಧತಿಯಿಂದ ಕೆಲಸ ನಡೆಯುವುದರಿಂದ ದೇಶಕ್ಕೆ ತುಂಬಾ ಹಾನಿ, ನಷ್ಟವಾಗುತ್ತದೆ. ನಮ್ಮ ದೇಶದಲ್ಲೀಗ ಕಂಟ್ರಾಕ್ಟು ಪದ್ಧತಿಯಲ್ಲಿ ಕೆಲಸ ನಡೆಯುತ್ತಿದೆ. ಕಂಟ್ರಾಕ್ಟರುಗಳಿಂದ ಕೆಲಸಗಳನ್ನು ಮಾಡಿಸುವುದನ್ನು ಬಿಡಬೇಕು. ಏಕೆಂದರೆ, ಕಂಟ್ರಾಕ್ಟರು ಕಾಂಟ್ರಾಕ್ಟು ಕೆಲಸವನ್ನು ಮಾಡುವಾಗ ಅವರು ತಮ್ಮ ಕೆಲಸವನ್ನು ತಮ್ಮ ಕೈಕೆಳಗಿರುವ ಸಬ್‌ಕಂಟ್ರಾಕ್ಟರಿಗೆ ಕೊಡುತ್ತಾರೆ. ಇವರು ಮತ್ತೊಬ್ಬರಿಗೆ ಹೇಳುತ್ತಾರೆ. ಹೀಗೆ ಒಬ್ಬರಿಂದೊಬ್ಬರ ಕೈಗೆ ಹೋಗಿ ಆರನೆಯವರ ಕೈಯಲ್ಲೋ ಅಥವಾ ಏಳನೆಯವರ ಕೈಯಲ್ಲೋ ಕೆಲಸ ನಡೆಯುತ್ತದೆ ಅದರಲ್ಲೂ ನೂರು ರೂಪಾಯಿಗಳಷ್ಟು ಕೆಲಸಕ್ಕೆ ಕೇವಲ 50 ರಿಂದ 55 ರೂಪಾಯಿಗಳಷ್ಟು ಮಾತ್ರ ಖರ್ಚು ಬೀಳುತ್ತದೆ. ಈ ರೀತಿಯಾಗುತ್ತಿದೆ ಎನ್ನುವುದು ಮಧ್ಯ ಪ್ರದೇಶದ ಅಸೆಂಬ್ಲಿಯಲ್ಲಿಯೂ ಚರ್ಚೆಯಾಗಿದೆ. ನಾನು ಹೇಳುವುದೇನೆಂದರೆ, ಕಂಟ್ರಾಕ್ಟು ಪದ್ಧತಿಯನ್ನು ತೆಗೆದು ಹಾಕಿ; ಅನಂತರ ಈ ಕೆಲಸವನ್ನು ಒಂದು ಬೋರ್ಡಿನ ಮೂಲಕ ಪ್ರಾರಂಭ ಮಾಡಿದರೆ, ಸ್ಥಳದಲ್ಲಿರುವ ಜನಗಳೇ ಈ ಕೆಲಸಗಳನ್ನು ನಡೆಸಿಕೊಂಡು ಹೋಗುತ್ತಾರೆ.

Mr. SPEAKER.—The House will now rise and re-assemble after half-an-hour.

The House adjourned for recess at Three of the Clock and re-assembled at Thirty Minutes past Three of the Clock.

[MR. SPEAKER in the Chair.]

ಶ್ರೀ ಎ. ಕೃಷ್ಣಶೆಟ್ಟಿ.—ಈ ಲೋಕೋಪಯೋಗಿ ಖಾತೆ ಕೆಲಸ ಮಾಡತಕ್ಕ ಕಡೆ ಈ ಕಂಟ್ರಾಕ್ಟರುಗಳು ಇರುವುದೂ ಈ ಪ್ರೈವೇಟ್ ಕಂಪೆನಿಗಳಲ್ಲಿ ಏಜಂಟರುಗಳಿರುವುದು ಈ ಎರಡೂ ಒಂದೇ. ಆದರೆ ಈಗ ಈ ಕಂಟ್ರಾಕ್ಟರುಗಳು ಒಳ್ಳೆಯ ಶಕ್ತಿಯನ್ನು ಪಡೆದು ಆ ಶಕ್ತಿಯನ್ನು ಚುನಾವಣೆಗಳಲ್ಲಿ ಒಂದು ದೊಡ್ಡ ಪ್ರಮಾಣದಲ್ಲಿ ಉಪಯೋಗಿಸಿ ಕೆಲಸ ಮಾಡಲಿಕ್ಕೂ ಕೂಡ ಅವರು ಈಗ ಮುಂದೆ ಬಂದಿದ್ದಾರೆ. ಆದರೆ ಈ ಸಾರ್ವಜನಿಕ ರಂಗದಲ್ಲಿ-ಸಾರ್ವಜನಿಕ ವ್ಯವಹಾರದಲ್ಲಿ ಇವರ ಈ ಚಟುವಟಿಕೆಗಳು ನಮ್ಮ ಮುಂದೆ ಬರಲಿಕ್ಕೆ ಪ್ರಾರಂಭವಾದರೆ ಅದು ಒಂದು ದೊಡ್ಡ ಅಪಾಯವೇ ಸರಿ. ಅದನ್ನು ನಿವಾರಿಸತಕ್ಕದ್ದು ಅತ್ಯಾವಶ್ಯಕ. ಈ ಲೋಕೋಪಯೋಗಿ ಇಲಾಖೆ ದೇಶದ ಕೆಲಸಕಾರ್ಯಗಳನ್ನು ಸರಿಯಾಗಿ ನಡೆಸಬೇಕು, ಜನಗಳಿಂದ ತೆರಿಗೆ ರೂಪದಲ್ಲಿ ವಸೂಲ್ಮಾಡಿದ ಹಣದಿಂದ ಆ ಜನಗಳಿಗೆ ಒಂದು ಉಪಯುಕ್ತವಾದ ಕಾರ್ಯ ಆಗಬೇಕು. ಇಲ್ಲವಾದರೆ ಅದೊಂದು ಸುಲಿಗೆ ಆದೀತು. ಆದರೆ ಹಾಗಾಗಬಾರದೆಂದು ನಾನು ತಿಳಿಸಲಿಚ್ಛಿಸುತ್ತೇನೆ. ಆದಕಾರಣ ನಾನೀಗ ತಮ್ಮಲ್ಲಿ ಸೂಚನೆ ಮಾಡುತ್ತಿರುವುದೇನೆಂದರೆ—ಈ ಹಿಂದಿನಿಂದಲೂ ಬಂದಿರತಕ್ಕ ಕಂಟ್ರಾಕ್ಟರುಗಳೇನಿದ್ದಾರೆ, ಇವರನ್ನು ಕೂಡಲೆ ವಜಾ ಮಾಡಿ ಈ ಕಾರ್ಯಗಳನ್ನು ಒಂದು ಬೋರ್ಡಿನ ಮೂಲಕ ನಡೆಸಬೇಕು ; ಇದು ನನ್ನ ಅಭಿಪ್ರಾಯವಾಗಿರುತ್ತದೆಂದು ನಾನು ಈ ಮೂಲಕ ತಮಗೆ ಸೂಚನೆ ಮಾಡುತ್ತಿದ್ದೇನೆ.

ಇನ್ನು ಆ ವೆಸ್ಟ್-ಕೋಸ್ಟ್ ರೋಡ್ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಲ್ಲಿ ಹಾದುಹೋಗುತ್ತದೆ. ಈ ರಸ್ತೆ ಕೇರಳ ಸರ್ಕಾರಕ್ಕೂ ಸಂಬಂಧಪಟ್ಟದ್ದಾಗಿದೆ. ಕೇರಳ ಸರ್ಕಾರಕ್ಕೆ ಸೇರಿದ ಕಾಸರಗೋಡು ತಾಲ್ಲೂಕಿಗೂ ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೂ ಮಧ್ಯೇ ಈ ರಸ್ತೆ ಹಾಯ್ದು ಹೋಗುವ ಜಾಗದಲ್ಲಿ ಅನೇಕ ಹೊಳೆಗಳಿವೆ. ಅವುಗಳಿಗೆ ಒಂದಕ್ಕೂ ಈಗ ಸಂಕಗಳಿಲ್ಲ. ಇಲ್ಲಿ ಮೂರು ಹೊಳೆಗಳಿಗೆ ಸಂಕಗಳಾಗಬೇಕಾಗಿದೆ. ಈ ವಿಚಾರದಲ್ಲಿ ಕೇರಳ ಸರ್ಕಾರದವರಿಗೆ ಒತ್ತಾಯ ಮಾಡಬೇಕಾದುದು ಅಗತ್ಯ. ಆದರೆ ಈ ರಸ್ತೆಯನ್ನು 120 ಅಡಿ ಅಗಲ ಮಾಡಬೇಕೆಂದು ಅಂದಾಜು ಮಾಡಲಾಗಿತ್ತು. ಆದರೆ ಅಲ್ಲಲ್ಲೆ ಹಳ್ಳಿಗಳು ಸಿಕ್ಕುವ ಕಡೆ ಮಾತ್ರ ಸ್ವಲ್ಪ ಕಿರಿದಾಗುತ್ತಿತ್ತು. ಆದರೆ ಈಗ ಕೆಲವು ಕಡೆ ಈ ಕೆಲಸ ಹೇಗಾಗಿದೆ ಎಂದರೆ ದ್ರಾವಿಡ ಪ್ರಾಣಾಯಾಮ ಮಾಡಿದ ರೀತಿ ಆಗಿದೆ. ಆದರೆ ಹೀಗೆಲ್ಲಾ ಆಗುವುದಕ್ಕೆ ಮುಖ್ಯಕಾರಣ ಈ ರಾಜಕೀಯ ಮುತ್ಸದ್ದಿಗಳೇ ಎಂದು ಹೇಳುವುದಕ್ಕೆ ನನಗೆ ಧೈರ್ಯವಿದೆ. ಆದರೆ ಈ ಮಾರ್ಗವನ್ನು ಬೇಗ ಮುಗಿಸುವುದ ಸರ್ಕಾರದವರ ಕರ್ತವ . ಆದರೆ ಇದೊಂದು ಕರಾವಳಿ ರಸ್ತೆ ಮಾತ್ರವೇ ಎಂದು ನಾನು ಹೇಳುತ್ತಿಲ್ಲ. ಬೇರೆ ದೃಷ್ಟಿಯಿಂದಲೂ ಕೂಡ ಈ ರಸ್ತೆ ಬಹಳ ಮುಖ್ಯವಾದದ್ದು. ಈ ರಸ್ತೆ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಮಾರ್ಗವಾಗಿ ಕೇರಳಕ್ಕೆ ಹೋಗುತ್ತದೆ. ಆದಕಾರಣ ಈ ಕಾರ್ಯವನ್ನು ಆದಷ್ಟು ಬೇಗ ಮುಗಿಸಲು ನಮ್ಮ ಸರ್ಕಾರದವರು ಕೇರಳ ಸರ್ಕಾರಕ್ಕೆ ಒತ್ತಾಯ ಹಾಕಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ನಮ್ಮಲ್ಲಿರತಕ್ಕ ರಸ್ತೆಗಳ ವಿಚಾರದಲ್ಲಿ ಮತ್ತೊಂದು ವಿಶೇಷ ಸಂಗತಿ ಏನಿದೆ ಎಂದರೆ ಅಲ್ಲಿ ವರ್ಷಕ್ಕೆ 220 ಇಂಚುಗಳ ಮೇಲೆ ಮಳೆ ಬೀಳುತ್ತದೆ. ಅಲ್ಲಿ ಈ ಕೆಲಸಗಳೆಲ್ಲ ಬೇಗ ಮುಗಿಯಬೇಕು. ಈಗಾಗಲೆ ಅಲ್ಲಿ ಮಣ್ಣಿನ ಸಾರವೆಲ್ಲ ಕೊಚ್ಚಿಹೋಗಿ—ಅದರ ಸಾರ ಬಹಳ ಕಡಮೆಯಾಗಿದೆ. ನಮಗೆ ಒಂದು ವಿಚಾರದಲ್ಲೂ ಸ್ವಲ್ಪ ಸೂಕ್ಷ್ಮದೃಷ್ಟಿಯಿರಬೇಕು. ಕೆಲವು ಹೊಳೆಗಳಲ್ಲಿ ಅಲ್ಲಲ್ಲೇ ತೋಡುಗಳಲ್ಲಿ ಉಸಬು ತುಂಬಿರುತ್ತದೆ. ಈ ಉಸುಬನ್ನು ರಸ್ತೆಗೆ ಉಪಯೋಗ ಮಾಡಿಕೊಳ್ಳಬಹುದು ಒಳ್ಳೆಯದು. ಈ ಉಸುಬು ತೆಗೆದರೆ ವ್ಯವಸಾಯದ ಜಮಾನುಗಳಿಗೆ ಬಹಳ ಒಳ್ಳೆಯದು. ಇದರಿಂದ ಹೆಚ್ಚಿನ ಪ್ರಯೋಜನವಿದೆ. ಏನೇ ಆಗಲಿ ಈ ಕೆಲಸಗಳನ್ನು ಮಾಡುವಾಗ ಸರ್ಕಾರದವರು ಒಂದು ನಿರ್ದಿಷ್ಟವಾದ ಧೋರಣೆಯನ್ನಿಟ್ಟುಕೊಂಡು ಕೆಲಸ ಮಾಡಬೇಕು. ಈ ಕೆಲಸಗಳನ್ನು ತೊಗಲಕ್ ಸರ್ಕಾರದವರು ಮಾಡಿದಹಾಗೆ ಮಾಡುವುದು ಬೇಡ ಎಂದು ಹೇಳುತ್ತೇನೆ.

Sri M. V. KRISHNAPPA (Minister for Revenue).—We are successors to his regime.

ಶ್ರೀ ಎ. ಕೃಷ್ಣಶೆಟ್ಟಿ.—ಹೌದು. ಆದರೆ ಉಜ್ಜಯಿನಿಗೆ ಬಂದು ಹಿಂದಕ್ಕೆ ಹೋಗುವಾಗ ಕೇವಲ ಒಂದು ಸಾವಿರ ಜನರು ಮಾತ್ರ ಉಳಿದಿದ್ದರು. ಆದರೆ ನಾನು ಹೇಳುತ್ತಿರುವುದೇನೆಂದರೆ ಅಲ್ಲಲ್ಲಿ ಕೆಲವು ಸಣ್ಣ ಪುಟ್ಟ ಮಾರ್ಗಗಳು ಇರುತ್ತವೆ. ಇಂಥ ಕೆಲಸಗಳನ್ನು ಮಾಡುವಾಗಸರ್ಕಾರದವರು ತಮ್ಮದೇ ಆದ ಒಂದು ನಿರ್ದಿಷ್ಟ ಧೋರಣೆಯನ್ನಿಟ್ಟುಕೊಂಡು ಕೆಲಸವನ್ನು ಮುಂದುವರಿಸಬೇಕು. ಯಾವತ್ತೂ ಈ ಕೆಲಸಗಳನ್ನು ವ್ಯಕ್ತಿಗತವಾಗಿ ನೋಡಬಾರದು. ಈಗ ತಾವು ಹಾರಂಗಿ-ಕಂಬದಕಡ ಪ್ರಾಜೆಕ್ಟ್‌ಗಳ ವಿಚಾರದಲ್ಲಿ ಮಾಡಿದಂತೆ ಮಾಡಬೇಡಿ. ಒಬ್ಬರು ಬಂದರೆ ಅವರಿಗೇ ಒಂದು ರೂಪದಲ್ಲಿ ಕೆಲಸಮಾಡುವುದು, ಮತ್ತೊಬ್ಬರು ಬಂದರೆ ಅವರಿಗೆ ಮತ್ತೊಂದು ರೂಪದಲ್ಲಿ ಕೆಲಸ ಮಾಡುವುದು ಸರಿಯಾದ್ದಲ್ಲ. ಸರ್ಕಾರದವರು ಮಾಡುತ್ತಿರುವ ಕೆಲಸಗಳ ಧೋರಣೆಯನ್ನು ನೋಡಿದರೆ ನನಗೆ ಒಂದು ಎಸ್ಸೆ ಓದಿದ್ದು ಜ್ಞಾಪಕಕ್ಕೆ ಬರುತ್ತದೆ. ಏನೆಂದರೆ, ಯಾರೋ ಒಬ್ಬ ತೋಟಗಾರ ತಾನು ಮೊದಲು ಮಾಡಿದ್ದ ತೋಟವನ್ನು ಬಾಕಿ ಕೆಲವರು ಮುಂದುವರಿಸಿಕೊಂಡು ಹೋಗುತ್ತಾ ಬಂದಮೇಲೆ ತಾನು ಆ ತೋಟವನ್ನು ಪುನಃ ಬಂದು ನೋಡಿದಾಗ ಅದು ತಾನು ಮಾಡಿದ್ದ ತೋಟ ಹೌದೋ-ಅಲ್ಲವೋ ಎನ್ನುವಂತೆ ಕಾಣಿಸಿತಂತೆ. ಹಾಗೆಯೇ ಇಂದಿನ ಸರ್ಕಾರದವರ ಧೋರಣೆ ಸಹ ಇರುತ್ತದೆ. ಈ ದಿವಸ ಅಂಥ ಒಂದು ನಿರ್ದಿಷ್ಟ ಧೋರಣೆಯನ್ನು ಸರ್ಕಾರದವರು ಅನುಸರಿಸದೆ ಇರುವುದರಿಂದ "ಎಕ್ಸ್" ಬಂದುಹೇಳಿದರೆ ಒಂದು ರೀತಿ, "ವೈ" ಬಂದು ಹೇಳಿದರೆ ಇನ್ನೊಂದು ರೀತಿ ಹೀಗಾಗಿದೆ. ಇದು ಖಂಡಿತ ಸರಿಯಾದ್ದಲ್ಲ. ಈ ಕೆಲಸಗಳನ್ನೆಲ್ಲ ಸರ್ಕಾರದವರೇ ನೇರವಾಗಿ ಮಾಡಬೇಕಾದ್ದು ಮುಖ್ಯ. ಇದಕ್ಕೆ ತಾವು ಒಂದು ಧೋರಣೆಯನ್ನು ಹಾಕಿ

ಕೊಂಡು ಕೆಲಸಮಾಡಿ. ಅದಕ್ಕೆ ವಿರೋಧ ಪಕ್ಷದವರ ಬೆಂಬಲವು ಸಂಪೂರ್ಣವಾಗಿದೆ. ಅವನು ಬಂದು ಹೇಳಿದರೆ ಒಂದು ರೀತಿ, ಇವನು ಬಂದು ಹೇಳಿದರೆ ಇನ್ನೊಂದು ರೀತಿ ಹೀಗೆಲ್ಲ ಕೆಲಸ ಮಾಡುವುದು ಸರಿಯಲ್ಲ.

ಇನ್ನು ನೀರಾವರಿ ಯೋಜನೆಗಳ ಮಟ್ಟಿಗೆ ಹೇಳುವುವಾದರೆ ಈ ವಿಚಾರದಲ್ಲೂ ನಮ್ಮ ಸರ್ಕಾರದವರು ಅನುಸರಿಸುತ್ತಿರುವ ಧೋರಣೆ ಅದೇನು ಚಪಲವೋ ಚಂಚಲವೋ ಒಂದೂ ಗೊತ್ತಾಗುವುದಿಲ್ಲ. ಈಗ ಕೃಷ್ಣ-ಗೋದಾವರಿ ನದಿಗಳ ನೀರಿನ ಒಪ್ಪಂದ ೧೯೫೧ರಲ್ಲಿ ಆಗಿದೆ. ಆ ಒಪ್ಪಂದಕ್ಕೆ ನಾವೇನೂ ಪಾರ್ಟಿಗಳಾಗಿರಲಿಲ್ಲ. ಆಗ ಅದಕ್ಕೆ ಪಾರ್ಟಿಗಳಾಗಿದ್ದ ಬೆಳಗಾಂ, ಹುಬ್ಬಳ್ಳಿ ಇತ್ಯಾದಿ ಪ್ರದೇಶಗಳು ನಮ್ಮ ರಾಜ್ಯದಲ್ಲಿರಲಿಲ್ಲ. ಆದ್ದರಿಂದ ಆ ಒಪ್ಪಂದಕ್ಕೆ ನಾವು ಎಂದಿಗೂ. ಭಾಗಿಗಳಾಗುವುದಿಲ್ಲ. ನಾವು ಇದರಲ್ಲಿ ಪಾರ್ಟಿಯಾಗಿರಲಿಲ್ಲ ಆಗ್ಗೆ ಈ ಒಪ್ಪಂದ ನಡೆದಿದೆ. ಅದರಿಂದ ಸರಿಯಾಗಿ ಕೆಲಸವಾಗಬೇಕೆಂದು ಆಂಧ್ರ ಸರಕಾರದವರು ಒತ್ತಾಯ ಮಾಡುವಾಗ, ನಾವೂ ಸಹ ನಮ್ಮ ಶಕ್ತಿ ಪ್ರದರ್ಶನಮಾಡಿ ನಾವು ಭೀರುಗಳಾಗಿಲ್ಲ ಎಂದು ತೋರಿಸಿಕೊಡಬೇಕಾದುದು ಅಗತ್ಯ, ನಾವು ಕನ್ನಡ ಜನ ವೀರ ಯೋಧರಾಗಿದ್ದೇವೆ ನಮ್ಮ ಧಮನಿಗಳಲ್ಲಿ ಬಿಸಿ ರಕ್ತ ಹರಿಯುತ್ತದೆ ಎಂಬುದನ್ನು ತೋರಿಸಬೇಕು. ಇಂದು ನಮಗೆ ಬೇಕಾದ ನೀರಿನ ಈ ವಿಷಯದಲ್ಲಿ ಸಾಹಸದ ತೀರ್ಮಾನ ತೆಗೆದುಕೊಂಡು ಜನತೆಯ ಮುಂದೆ ಇಡಬೇಕು. ನಮಗೆ ಅವಶ್ಯಕತೆಯಿರುವಷ್ಟು ನೀರಿನ ಪ್ರಯೋಜನ ಪಡೆಯುವುದು ಅತ್ಯಗತ್ಯ. ಇದನ್ನು ಜನತೆಯ ಮುಂದೆ ಇಟ್ಟು ಮಂಡಿಸುವುದು ಮಂತ್ರಿ ಮಂಡಳದ ಕರ್ತವ್ಯ. ಮಂತ್ರಿ ಮಂಡಳವು ಈ ವಿಚಾರದಲ್ಲಿ ಮೀಸೆ ಹೊತ್ತ ಗಂಡಸಿನ ಹಾಗೆ ಕೆಲಸ ಮಾಡಬೇಕು. ಕಾವೇರಿ ನದಿಯ ನೀರನ್ನು ಇತ್ತ ಮದ್ರಾಸ್ ರಾಜ್ಯಕ್ಕೆ ಬಿಟ್ಟು ಕೊಡುವುದು ಅತ್ತ ಕಡೆ ಕೃಷ್ಣಾ ನದಿಯ ನೀರನ್ನು ಆಂಧ್ರ ರಾಜ್ಯಕ್ಕೆ ಬಿಟ್ಟು ಕೊಡುವುದು ಈರೀತಿ ಅತ್ತ ಕಡೆ ಕಲ್ಲಪ್ಪ, ಇತ್ತ ಕಡೆ ಗುಂಡಪ್ಪ ಇವರ ನಡುವೆ ಬೆಂಚಪ್ಪ ಸಿಕ್ಕು ಚೂರು ಚೂರು ಆದಹಾಗೆ ಕೆಲಸ ಮಾಡುವುದು ಸರಿಯಲ್ಲ.

ಶ್ರೀ ವೀರೇಂದ್ರ ಪಾಟೀಲ್.—ನದೀ ನೀರಿನ ಹಂಚಿಕೆಯ ವಿಚಾರದಲ್ಲಿ ನಮ್ಮ ನಿಲುವೇ, ಏನಿದೆ, ಯಾವ ರೀತಿಯಿಂದ ನಾವು ಸ್ಟ್ಯಾಂಡ್ ತೆಗೆದುಕೊಂಡಿದ್ದೇವೆ, ಗುಲ್ಹಾಟಿ ಕಮೀಷನ್ನಿಗೆ ಯಾವ ಯಾವ ವಿಷಯವನ್ನು ಮತ್ತು ಮಟೀರಿಯಲ್ ಇಟ್ಟಿದ್ದೇವೆ ಎಂಬುದನ್ನೆಲ್ಲ ವಿವರಗಳಿಂದ ಕೂಡಿದ ಒಂದು ವಾಲ್ಯೂಮ್ ಮಾಡಿ ನಿಮಗೆ ಹಂಚಿದ್ದೇವೆ. ತಮ್ಮ ಮುಂದೆ ಎಲ್ಲ ವಿವರವನ್ನೂ ಇಟ್ಟಿದ್ದೇವೆ. ಕಣ್ಣು ಮುಚ್ಚಿ ಏನನ್ನೂ ಮಾಡಿಲ್ಲ.

ಶ್ರೀ ಎ. ಕೃಷ್ಣ ಶೆಟ್ಟಿ.—ನಾವು ಮೊದಲು ಕೆಲಸ ಷುರುಮಾಡಬೇಕು. ಈವರೆಗೆ ಆ ರೀತಿ ಕೆಲಸ ಷುರುಮಾಡಲಿಲ್ಲ. ಪಂಚಾಯಿತಿಗೆ ಹೋಗುವುದು ಬೇಡ ಎಂದು ನಾನು ಹೇಳುವುದಿಲ್ಲ, ನಮಗೆ ಎಷ್ಟು ನೀರು ಅಗತ್ಯವಾಗಿದೆಯೋ ಅಷ್ಟನ್ನು ಉಳಿಸಿಕೊಳ್ಳಲು ಪ್ರಯತ್ನ ಮಾಡಬೇಕು. ಅಂದು ಮಾಡಿದ ಒಪ್ಪಂದವೇ ಸರಿಯಾಗಿದೆ ಅದನ್ನೇ ಕಾಪಾಡಿಕೊಂಡು ಬರುತ್ತೇವೆಂದು ಆಂಧ್ರ ಪ್ರದೇಶದವರು ಶಕ್ತಿ ಪ್ರದರ್ಶನ ಮಾಡಿದರೆ, ಸಂಜೀವರೆಡ್ಡಿಯವರು ಅದನ್ನೇ ಪ್ರತಿ ಪಾದಿಸಿದರೆ, ನಮ್ಮಲ್ಲಿಯೂ ಸಹ ಕೆ. ಸಿ. ರೆಡ್ಡಿಯವರಂಥವರು ಗವರ್ನರ್ ಆಗಿ ಹೋಗತಕ್ಕಂಥವರು ಅದಕ್ಕೆಲ್ಲಾ ಸರಿಯಾದ ಉತ್ತರ ಕೊಟ್ಟು ಕೆಲಸ ನಡೆಸುವುದು ಅತ್ಯಗತ್ಯ; ಇದನ್ನು ಮಾಡಲೇಬೇಕು. ಸಣ್ಣ ನೀರಾವರಿ ಯೋಜನಗಳ ಮಟ್ಟಿಗೆ ಕೆಲಸ ಮಾಡುವುದು ಅಗತ್ಯವಾಗಿದೆ. ಏಕೆಂದರೆ ನಮ್ಮಲ್ಲಿ ಎರಡು ತರಹದ ಯೋಜನೆಗಳು ಇರಬೇಕು. ತತ್‌ಕ್ಷಣ ಪ್ರಯೋಜವಾಗುವಂಥ ತುರ್ತು ಯೋಜನೆಗಳು ಮತ್ತು ದೀರ್ಘ ಯೋಜನೆಗಳು ಇರಬೇಕು. ಈ ವಿಚಾರದಲ್ಲಿ ಡಾಕ್ಟರ ನಾಗನ ಗೌಡರು ವಿವರವಾಗಿ ಬರೆದಿದ್ದಾರೆ. ಸಣ್ಣ ಪುಟ್ಟ ನೀರಿನ ಯೋಜನೆಗಳಿಗಾಗಿ ಬಾವಿಗಳಿಂದ ನೀರನ್ನು ತೆಗೆದುಕೊಳ್ಳಲಿಕ್ಕೆ ಅವಕಾಶವಿದೆ. ದೊಡ್ಡ ನೀರಾವರಿ ಯೋಜನೆಗಳನ್ನು ಸಹ ಮಾಡಬೇಕೆಂದು ಅವರು ಹೇಳಿದ್ದಾರೆ. ಆದರೆ ಸರಿಯಾದ ಕೆಲಸ ನಡೆದಿಲ್ಲ, ಈಗ ನಮ್ಮ ರಾಜ್ಯದ ಜನಸಂಖ್ಯೆ ೨ ಕೋಟಿ ೩೦ ಲಕ್ಷದವರೆಗಿದೆ. ಎರಡು ಕೋಟಿ ೭೦ ಲಕ್ಷದವರೆಗೆ ಅದು ವರ್ಷದಲ್ಲಿ ಹೋಗುತ್ತದೆ. ಈಗ ನಮ್ಮ ರಾಜ್ಯದಲ್ಲಿ ಬೆಳೆಯುವ ಆಹಾರ ನಮಗೆ ಸಾಕಾಗುವದಿಲ್ಲ, ನಾವು ಸ್ವಾವಲಂಬಿಗಳಾಗಿರುವದಿಲ್ಲ, ಆಹಾರದ ಉತ್ಪಾದನೆ ಬಹಳ ಕಡಮೆಯಾಗಿದೆ. ಆಕಾಶದ ಕಡೆ ನೋಡುತ್ತ ಮಳೆಗಾಗಿ ಬಾಯಿತೆರೆದು ಕೂಡುವುದು ಒಳ್ಳೆಯದಲ್ಲ, ಆದರೆ ನೀರಾವರಿ ಯೋಜನೆಗಳನ್ನು ಪ್ರಾರಂಭಮಾಡಿ ಸಣ್ಣದೇ ಆಗಲಿ ದೊಡ್ಡದೇ ಆಗಲಿ ನೀರಾವರಿ ಯೋಜನೆ ಕೆಲಸ ಮಾಡಿಕೊಂಡು ಅಭಿವೃದ್ಧಿ ಪಡಿಸಲು ಮುಂದೆ ಬರಬೇಕು. ಈ ಕೆಲಸ ಮಾಡುವುದಕ್ಕೆ ಪ್ರಯತ್ನ ಪಡಬೇಕಾಗಿದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ಸಣ್ಣ ನೀರಾವರಿ ಯೋಜನೆಗಳನ್ನು ಅಭಿವೃದ್ಧಿ ಪಡಿಸಲು ಅನುಕೂಲತೆಗಳಿವೆ. ಬೆಳ್ತಂಗಡಿ ಬಂಟವಾಳ ಹತ್ತಿರ ಪಶ್ಚಿಮ ಘಟ್ಟದಲ್ಲಿ ಪ್ರಯತ್ನ ಮಾಡಲು, ಸಾಧಿಸಲು ಅನುಕೂಲತೆಗಳಿವೆ. ಅಲ್ಲಿ ಸಣ್ಣ ನೀರಾವರಿ ಯೋಜನೆಗಳನ್ನು ಸರಿಯಾಗಿ ಮಾಡಬಹುದು. ವಿದ್ಯುತ್ ಶಕ್ತಿಯನ್ನು ಸಹ ಉತ್ಪಾದನೆ ಮಾಡಬಹುದು. ಈ ಕೆಲಸ ಮಾಡಲಿಕ್ಕೆ ಪರಿಸ್ಥಿತಿಯನ್ನು ಸೃಷ್ಟಿಸಿ ಕೆಲಸ ಮಾಡುವುದು ಅಗತ್ಯವಾಗಿದೆ, ನಮ್ಮ ಜಿಲ್ಲೆಯಲ್ಲಿ ನೀರಾವರಿ ಯೋಜನೆಗಳಾಗಿವೆ. ಆದರೆ ಅವು ಗೊಡ್ಡು ಯೋಜನೆಗಳಾಗಿವೆ. ಅವುಗಳಿಂದ ಏನೂ ಫಲವಿಲ್ಲ ಎಳೆಂಟು ಲಕ್ಷ ರೂಪಾಯಿ ಖರ್ಚಾಗಿದ್ದರೂ ಕೂಡ ಗೊಡ್ಡು ಯೋಜನೆಗಳಾಗಿವೆ. ಇಂಥ ಗೊಡ್ಡು ಯೋಜನೆಗಳು ನಮಗೆ ಬೇಡ. ಯೋಜನೆಗಳಿಂದ ಸ್ವಲ್ಪ ಉತ್ಪತ್ತಿಯಾಗಬೇಕು. ಇದನ್ನು ಗಮನದಲ್ಲಿಟ್ಟು ಕೊಂಡು ಕೆಲಸಮಾಡಬೇಕು. ಒತ್ತಡದಿಂದ ಕೆಲಸ ಮಾಡುವಾಗ್ಗೆ ಈ ಒಂದು ದೃಷ್ಟಿಯನ್ನು ಇಟ್ಟುಕೊಂಡು ಕೆಲಸ ಮಾಡಿದರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಣ್ಣ ಸಣ್ಣ ನೀರಾವರಿ ಯೋಜನೆಗಳು ಎಷ್ಟೋ ಪ್ರಾರಂಭವಾಗಬೇಕು. ಮತ್ತು ಅವುಗಳಿಂದ ಹೆಚ್ಚು ಉತ್ಪತ್ತಿಯಾಗಬಹುದು.

ಶ್ರೀ ಡಿ. ಎಂ. ಸಿದ್ದಯ್ಯ (ಬಳಿಗರೆ).—ಮಾನ್ಯ ಅಧ್ಯಕ್ಷರೆ, ಸಭೆಯ ಮುಂದೆ ಸರಕಾರದವರು ಮಂಡಿಸಿರತಕ್ಕ ಈ ಬೇಡಿಕೆಗಳನ್ನು ಅನುಮೋದಿಸುತ್ತಾ, ಒಂದೆರಡು ಪ್ರಾಮುಖ್ಯವಾದ ವಿಷಯಗಳ ಬಗ್ಗೆ ಮಾತನಾಡಲು ಬಯಸುತ್ತೇನೆ. ನಮ್ಮ ದೇಶದಲ್ಲಿ ಲೋಕೋಪಯೋಗಿ ಇಲಾಖೆಯು ಬಹಳ ಮುಖ್ಯವಾದುದು. ಅದರ ಹೆಸರು ಲೋಕೋಪಯೋಗಿ ಅಂದರೆ ಲೋಕಕೆಲ್ಲಾ, ಜನತೆಗೆಲ್ಲಾ ಉಪಯುಕ್ತವಾದ ಕೆಲಸಗಳನ್ನು ಮಾಡತಕ್ಕಂಥ ಇಲಾಖೆಯಾಗಿದೆ. ಪ್ರಜೆಗಳಿಗೆ ಅನುಕೂಲತೆಗಳನ್ನೊದಗಿಸಿಕೊಟ್ಟು ಸುಖೀ ರಾಜ್ಯ ಸ್ಥಾಪನೆಗೆ ಬಹುಮಟ್ಟಿಗೆ ಈ ಇಲಾಖೆಯಿಂದ ನೆರವಾಗುತ್ತದೆಂದು ಹೇಳಲು ಇಚ್ಛೆಪಡುತ್ತೇನೆ. ಈಗತಾನೆ ಮಾತನಾಡಿದ ಶ್ರೀಮಾನ್ ಕೃಷ್ಣ ಶೆಟ್ಟಿ

(ಶ್ರೀ ಡಿ. ಎಂ. ಸಿದ್ದಯ್ಯ)

ಯವರು ಈ ವಿಚಾರದಲ್ಲಿ ಬಹಳ ಉದ್ವೇಗದಿಂದ ಮಾತನಾಡಿದರು. ಈ ಇಲಾಖೆಯಲ್ಲಿ ಲೋಪದೋಷಗಳು ಕಂಡುಬಂದಿರಬಹುದು. ಆದರೆ ಈ ಇಲಾಖೆಯ ಮೂಲಕ ನಡೆದಿರತಕ್ಕಂಥ ಕೆಲಸಗಳು ಜನೋಪಯೋಗೀ ಕೆಲಸಗಳಾಗಿವೆ ಎಂದು ಹೇಳಲು ಯಾರು ಸಂಕೋಚಪಟ್ಟುಕೊಳ್ಳಬೇಕಾಗಿಲ್ಲ. ಈ ಲೋಕೋಪಯೋಗಿ ಇಲಾಖೆಯಲ್ಲಿಯ ಮೂರು ನಾಲ್ಕು ವಿಷಯಗಳ ಬಗ್ಗೆ ಮಾತ್ರ ಮಾತನಾಡುತ್ತೇನೆ. ಮೇಜರ್ ಇರಿಗೇಷನ್ ಮೈನರ್ ಇರಿಗೇಷನ್ ರಸ್ತೆಗಳ ರಚನೆ ಮತ್ತು ನೀರನ್ನು ಹಂಚುವಿಕೆ ಇವು ಮುಖ್ಯವಾದ ನಾಲ್ಕು ವಿಚಾರಗಳು. ನೀರಿನ ಅನುಕೂಲತೆಯನ್ನೊದಗಿಸುವ ವಿಚಾರದಲ್ಲಿ ಭಿನ್ನಾಭಿಪ್ರಾಯವು ಕಂಡುಬಂದಿದೆ. ನಮ್ಮ ದೇಶದಲ್ಲಿ ನೀರನ್ನು ಒದಗಿಸುವ ವಿಚಾರದಲ್ಲಿ ಕೆರೆಗಳು ಬಹಳ ಉಪಯುಕ್ತವಾಗಿವೆ. ಮೊದಲನೇ ಮತ್ತು ಎರಡನೇ ಪಂಚವಾರ್ಷಿಕ ಯೋಜನೆಗಳಲ್ಲಿ ಕೆರೆಗಳ ಅಭಿವೃದ್ಧಿಗಾಗಿ ಏಳು ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. ಮೂರನೇ ಯೋಜನೆಯಲ್ಲಿ ಹದಿನಾರು ಕೋಟಿ ರೂಪಾಯಿ ಖರ್ಚು ಮಾಡಲಿದ್ದೇವೆ. ಕೆರೆಗಳಲ್ಲದೆ ನೀರಾವರಿ ಯೋಜನೆಗಳಿಂದ ಸಹ ಆಹಾರ ಸಮಸ್ಯೆಯನ್ನು ಬಗೆಹರಿಸಲು ಬಹಳ ಸಹಾಯವಾಗುತ್ತಿದೆ. ಕೆರೆಗಳ ವಿಚಾರದಲ್ಲಿ ಒಂದು ಸೂಚನೆ ಮಾಡಬೇಕಾಗಿದೆ. ಡಿಸಿಲ್ಟ್ ಮಾಡಿ ಕೆರೆಗಳನ್ನು ರೆಸ್ಟೋರ್ ಮಾಡುವುದಕ್ಕೆ ಮುಂಚೆ ಕೆರೆಗಳ ಬಗ್ಗೆ ಸರ್ವೆ ಮಾಡಬೇಕು. ನಮ್ಮ ಸಂಸ್ಥಾನದಲ್ಲಿ ಕೆರೆಗಳೆಷ್ಟಿವೆ ಎನ್ನುವದನ್ನು ತಾಲ್ಲೂಕ್‌ವಾರ್ ಸರ್ವೆ ಮಾಡಿ, ಎಷ್ಟು ಕೆರೆಗಳ ದುರಸ್ತಿಯಾಗಬೇಕಾಗಿದೆ, ಎಷ್ಟು ಕೆರೆಗಳು ದುರಸ್ತಿಗೆ ಲಾಯಕ್ ಆಗಿವೆ ಎನ್ನುವುದನ್ನು ಪರಿಶೀಲನೆ ಮಾಡಬೇಕು. ಮತ್ತು ಅಂಥ ಕೆರೆಗಳಿಗೆ ಸಾಕಷ್ಟು ಹಣ ಒದಗಿಸಿದ ಪಕ್ಷದಲ್ಲಿ ಕೆರೆಗಳ ದುರಸ್ತಿ ಕೆಲಸ ಸುಸೂತ್ರವಾಗಿ ಆಗುತ್ತದೆಂದು ಅಭಿಪ್ರಾಯಪಡುತ್ತೇನೆ. ಕೆರೆಗಳ ದುರಸ್ತಿ ಕೆಲಸವನ್ನು P. W. D. ಇಟ್ಟುಕೊಳ್ಳಬಹುದು. ಈ ಕೆಲಸವನ್ನು ರೆವಿನ್ಯೂ ಇಲಾಖೆಯಿಂದ ಬೇರ್ಪಡಿಸಬೇಕು. ಈ ಕೆಲಸ ರೆವಿನ್ಯೂ ಇಲಾಖೆಗೂ ಸಂಬಂಧಪಟ್ಟದ್ದಾಗಿದೆ ಮತ್ತು P. W. D. ಸಹ ಕೆಲಸ ಮಾಡುತ್ತದೆ. ಒಬ್ಬರ ಮೇಲೆ ಇನ್ನೊಬ್ಬರ ಕೆಲಸ overlapping ಆಗಿ ಕೆಲಸ ಸಕಾಲದಲ್ಲಿ ಸರಿಯಾಗಿ ನಡೆಯುವುದಿಲ್ಲ. ಡಿಸಿಲ್ಟ್ ಮಾಡಿದರೆ ಪುನಃ ಕೆರೆಯಲ್ಲಿ ಮಣ್ಣು ಕುಳಿತುಕೊಳ್ಳುತ್ತದೆ. ಇದಕ್ಕೆ ಎಡೆಬಿಡದೆ ಗಮನ ಕೊಟ್ಟರೆ ಮಾತ್ರ ಮಣ್ಣು ಸೇರುವುದಿಲ್ಲ ಮತ್ತು ನೀರು ಯಥೇಚ್ಛವಾಗಿ ಬಂದು ಅದರಿಂದ ನೀರಾವರಿಗೆ ಬಹಳ ಅನುಕೂಲವಾಗುತ್ತದೆ. ಹಳೇ ಮೈಸೂರು ಪ್ರದೇಶದಲ್ಲಿ ಕೆರೆಗಳು ಹೆಚ್ಚಿನ ಸಂಖ್ಯೆಯಲ್ಲಿವೆ ಮತ್ತು ಇದೊಂದು ಪ್ರಾಮುಖ್ಯವಾದ ವಿಷಯವಾಗಿದೆ. ಇಂಥ ಕೆರೆಗಳ ದುರಸ್ತಿ ಕೆಲಸಕ್ಕೆ ಹೆಚ್ಚು ಹಣವನ್ನು ಒದಗಿಸಿ ಕೆರೆಗಳ ಪುನರುದ್ಧಾರ ಮಾಡಿದರೆ ನೀರಾವರಿ ಅನುಕೂಲತೆ ಮಾಡಿಕೊಡುವ ವಿಚಾರದಲ್ಲಿ ಬಡ ರೈತರಿಗೆ ಹೆಚ್ಚಿನ ಸಹಾಯವಾಗುತ್ತದೆಂದು ಹೇಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.--ಕೆರೆಗಳ ದುರಸ್ತಿ ಕೆಲಸ ಮುಂದುವರಿಸುವುದಕ್ಕೆ ಇನ್‌ವೆಸ್ಟಿಗೇಷನ್ ಡಿವಿಜನ್ ಅವರು ಕೆಲಸ ಮಾಡುತ್ತಾ ಇದ್ದಾರೆ. ಡಿಸಿಲ್ಟಿಂಗ್ ಮಾಡಲು ಅದಕ್ಕೆ ಹೆಚ್ಚು ಖರ್ಚು ಬರುತ್ತದೆ ಆದರೆ ಕೆರೆಗಳ ಬಂಡಿಂಗ್ ಲೆವೆಲ್ ಎತ್ತರಿಸಿದರೆ ಖರ್ಚು ಕಡಮೆಯಾಗಿ ಹೆಚ್ಚು ಅನುಕೂಲವಾಗುತ್ತದೆಂದು ತಜ್ಞರ ಅಭಿಪ್ರಾಯವಿದೆ.

ಶ್ರೀ ಡಿ. ಎಂ. ಸಿದ್ದಯ್ಯ.—ಕೆರೆಗಳ ದುರಸ್ತಿ ಮಾಡುವ ವಿಷಯದಲ್ಲಿ ತಾಲ್ಲೂಕವಾರ್ ಸರ್ವೆ ಮಾಡಿದರೆ ನಿರ್ದಿಷ್ಟವಾದ ಅಂಕಿ ಅಂಶಗಳು ಗೊತ್ತಾಗುತ್ತದೆ. ಕೆರೆಗಳ ಪುನರುದ್ಧಾರ ಮಾಡಿದರೆ ದೇಶಕ್ಕೆ ಅನುಕೂಲವಾಗುತ್ತದೆ. ದೊಡ್ಡ ದೊಡ್ಡ ನೀರಾವರಿ ಯೋಜನೆಗಳ ವಿಚಾರದಲ್ಲಿ ಸ್ವಲ್ಪ ತಡವಾದರೂ ಅಡ್ಡಿಯಿಲ್ಲ, ಆದರೆ ದೂರ ದೃಷ್ಟಿಯನ್ನಿಟ್ಟುಕೊಂಡು ಪ್ಲಾನ್ ಎಸ್ಟಿಮೇಟ್ಸ್ ಮಾಡಿಸಿ ಕೆಲಸ ಮಾಡಬೇಕು. ಉದಾಹರಣೆಗೆ ಶರಾವತಿ ಯೋಜನೆಯನ್ನು ತೆಗೆದುಕೊಂಡರೆ ಮೊದಲು 50 ಕೋಟಿ ರೂಪಾಯಿ ಇದ್ದುದು 80 ಕೋಟಿ ರೂಪಾಯಿ ಆಯಿತು. ಕೋಟಿಗಟ್ಟಲೆ ಎಸ್ಟಿಮೇಟ್‌ಗಳು ತಕ್ಷಣ ತಕ್ಷಣದಲ್ಲಿ ವ್ಯತ್ಯಾಸವಾಗತಕ್ಕ ಸನ್ನಿವೇಶ ನಮ್ಮ ದೇಶಕ್ಕೆ ಏಕೆ ಉಂಟಾಗುತ್ತಿದೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ನಮ್ಮ ದೇಶ ಡಾಕ್ಟರ್ ಎಂ. ವಿಶ್ವೇಶ್ವರಯ್ಯನವರು ಇದ್ದ ದೇಶ. ಅವರು Engineer Statesmam ಆಗಿ ಇಡೀ ಜಗತ್ತಿಗೇ ಮಾದರಿಯಾದಂಥ ಕೆಲಸಗಳನ್ನು ಮಾಡಿದ್ದಾರೆ. ನಮ್ಮ ಲೋಕೋಪಯೋಗಿ ಇಲಾಖೆಯಲ್ಲಿ ಇಂಜಿನಿಯರಿಂಗ್ ಬುದ್ಧಿವಂತರಿಗೆ ಮತ್ತು ತಜ್ಞರಿಗೆ ಅಭಾವವಿಲ್ಲ. ಇಂಥದ್ದರಲ್ಲಿ ದೊಡ್ಡ ಯೋಜನೆಗಳನ್ನು ತಯಾರು ಮಾಡುವಾಗ ಏತಕ್ಕೋಸ್ಕರ ಪದೇ ಪದೇ ಅಂದಾಜುಗಳನ್ನು ಬದಲಾವಣೆಮಾಡತಕ್ಕ ಅಗತ್ಯವಿದೆ? ಇದನ್ನು ಸರ್ಕಾರದವರು ಆಲೋಚನೆ ಮಾಡಬೇಕು. ತಜ್ಞರ ಕಮಿಟಿ ಇದೆ. ಅವರು ಅದನ್ನು ಪರಿಶೀಲಿಸುತ್ತಾರೆ. ರಾಜ್ಯದ ಮಟ್ಟದಲ್ಲಿ ತಜ್ಞರ ಕಮಿಟಿ ಇದೆ, ಕೇಂದ್ರದಲ್ಲಿ ತಜ್ಞರ ಕಮಿಟಿ ಇದೆ. ಈ ಎರಡು ಕಮಿಟಿಗಳ ತಜ್ಞರೂ ಕೂಡ ಪರಿಶೀಲಿಸಿ ಯೋಜನೆಯನ್ನು ಮಾಡಿದ ಮೇಲೆ ಪುನಃ ಪುನಃ ಬದಲಾವಣೆ ಮಾಡತಕ್ಕ ಅಗತ್ಯವೇನು ಎನ್ನುವುದನ್ನು ಸರ್ಕಾರದವರು ಆಲೋಚನೆ ಮಾಡಬೇಕು.

ಈ ಕೆಲಸಕಾರ್ಯಗಳು ಬಹಳ ಮಟ್ಟಿಗೆ ಸರ್ಕಾರದಿಂದ ಮಾಡತಕ್ಕ ಕೆಲಸಕಾರ್ಯಗಳು. ಅದು ಒಂದು ನಿಯಮಬದ್ಧವಾದುದು. ಇದನ್ನು ಪುನರಾಲೋಚನೆಮಾಡಿ ಕಂಟ್ರಾಕ್ಟರುಗಳಿಂದ ಕೆಲಸ ಮಾಡಿದ ಪಕ್ಷದಲ್ಲಿ ಕೆಲಸ ಬಹಳ ಜಾಗ್ರತೆಯಾಗುತ್ತದೆ, ಬಹಳ ಅನುಕೂಲವಾದ ಸ್ಥಿತಿಯಲ್ಲಿ ಆಗುತ್ತದೆ ಎಂದು ಬಹುತೇಕ ಕೆಲಸಕಾರ್ಯಗಳನ್ನು ಸಣ್ಣ ಸಣ್ಣ ಕಂಟ್ರಾಕ್ಟರ್‌ಗಳಿಗೆ ಕೊಟ್ಟು, ಪುನಃ ಅದನ್ನೆಲ್ಲ ಬದಲಾಯಿಸಿ ಒಬ್ಬೊಬ್ಬರಿಗೇ ಕೊಡುವುದು ಎಂದು ಮಾಡಿದರು. ಇದು ಸೂಕ್ತವಲ್ಲ. ಇದು ಜನೋಪಯುಕ್ತವಾದ ಕೆಲಸ, ದೇಶವನ್ನು ಪುನರ್ರಚನೆ ಮಾಡತಕ್ಕ ಕೆಲಸ. ಆದುದರಿಂದ ಲಕ್ಷಾಂತರ, ಕೋಟ್ಯಂತರ ಪ್ರಜೆಗಳ ಜೀವನವನ್ನು ಸುಗಮವಾಗಿ ಮಾಡತಕ್ಕ ಕಾರ್ಯವನ್ನು ಸರ್ಕಾರದವರೂ, ಇಲಾಖೆಯವರೂ ಬಹಳ ಪ್ರಾಮಾಣಿಕತೆಯಿಂದ ದೇಶದ ಹಿತವನ್ನು ಮುಖ್ಯವಾಗಿಟ್ಟುಕೊಂಡು ಕೆಲಸ ಮಾಡಬೇಕು. ನಾನು ಸ್ಥೂಲವಾಗಿ ಸರ್ಕಾರದ ಗಮನಕ್ಕೆ ತರುವುದಾದರೆ ಈ ದೊಡ್ಡ ಯೋಜನೆಗಳು ಜಾಗ್ರತೆಯಾಗುವಂತೆ ಸರ್ಕಾರದವರು ತೀವ್ರ ಕ್ರಮ ತೆಗೆದುಕೊಳ್ಳಬೇಕೆಂದು ಸೂಚನೆ ಮಾಡುತ್ತೇನೆ. ಉದಾಹರಣೆಗೆ ಘಟಪ್ರಭಾ, ಮಲಪ್ರಭಾ, ಶರಾವತಿ ಮತ್ತು ನಮ್ಮ ಮೈಸೂರು ಜಿಲ್ಲೆಯಲ್ಲಿ ಕಪಿಲಾ ಪ್ರಾಜೆಕ್ಟ್. ಈ ಕಪಿಲಾ ಪ್ರಾಜೆಕ್ಟ್ ಮೂರು ವರ್ಷಗಳಲ್ಲಿ ಮುಗಿಯಬೇಕೆಂದು ತಜ್ಞರು ಅಭಿಪ್ರಾಯಪಟ್ಟಿದ್ದರು. ಈಗಾಗಲೇ ಎರಡು ವರ್ಷವಾಗಿವೆ. ಕೆಲಸ ಪ್ರಾರಂಭದ ಸ್ಥಿತಿಯಲ್ಲಿದೆ. ಈ ಸಾವಕಾಶವೇಕೆ ಆಗುತ್ತದೆ? ಜಮೀನನ್ನು ಅಕ್ವೈರ್ ಮಾಡಿಕೊಳ್ಳುವಾಗ ಸ್ವಲ

ನಿಧಾನವಾಗುತ್ತದೆ. ಅಕ್ವಿಜಿಷನ್ ಆಗುವುದಕ್ಕೆ ಮುಂಚೆಯೇ ಕೆಲಸಗಳನ್ನು ಪ್ರಾರಂಭ ಮಾಡಿರತಕ್ಕ ಅನೇಕ ನಿದರ್ಶನಗಳಿವೆ. ಕೆಲಸ ಪ್ರಾರಂಭ ಮಾಡಿದ ಮೇಲೆ ಅಕ್ವಿಜಿಷನ್ ಮಾಡಬೇಕು ಎಂದರೆ ಭೂಮಿ ಯಾರಿಗೆ ಸೇರಿದೆಯೋ ಅವರು ಹೆಚ್ಚು ಹಣ ಕೇಳು ವುದಕ್ಕೆಅನುಕೂಲವಾಗುತ್ತದೆ. ಆದುದರಿಂದ ಮೊದಲು ಜಮೀನನ್ನು ಅಕ್ವೈರ್ ಮಾಡಿಕೊಳ್ಳಬೇಕು. ಸರ್ಕಾರಿ ಜಮೀನು ಇದ್ದಾಗ, ಅರಣ್ಯ ಇಲಾಖೆ ಅಥವಾ ಬೇರೆ ಇಲಾಖೆಗಳಿಂದ ತೆಗೆದುಕೊಳ್ಳಬೇಕಾಗಿದ್ದಾಗ ಅಂಥ ಜಮೀನನ್ನು ಜಾಗ್ರತೆ ರಿಲೀಸ್ ಮಾಡಿಸಿಕೊಂಡು ಪ್ರತಿಯೊಂದು ಕೆಲಸವನ್ನು "First in First", ಎನ್ನುವಂತೆ ಯಾವುದನ್ನೂ ಮೊದಲು ಮಾಡಬೇಕೋ ಅದನ್ನು ಮೊಟ್ಟಮೊದಲು ತೆಗೆದುಕೊಳ್ಳಬೇಕು. ಮೊದಲೇ ಸರಿಯಾಗಿ ಆಲೋಚನೆಮಾಡಿ ಒಳ್ಳೆಯ ಕಂಟ್ರಾಕ್ಟರುಗಳಿಗೆ ವಹಿಸಿಕೊಟ್ಟು ಸೂಪರ್‌ವಿಷನ್ ಚೆನ್ನಾಗಿ ನಡೆದು ಅಚ್ಚುಕಟ್ಟಾದ ರೀತಿಯಲ್ಲಿ ಕೆಲಸ ಕಾರ್ಯಗಳನ್ನು ನಡೆಸಿದ ಪಕ್ಷದಲ್ಲಿ Major Irrigations ಕೆಲಸಗಳ ಬಗ್ಗೆ ನಮಗೆ ತೊಂದರೆಯಾಗುವು ದಿಲ್ಲ; ಮತ್ತು ಜಾಗ್ರತೆಯಾಗಿಯೂ ಕೆಲಸವಾಗುತ್ತ ದೆಂದು ನಾನು ಅಭಿಪ್ರಾಯಪಡುತ್ತೇನೆ.

ಪ್ರಾಜೆಕ್ಟ್‌ಗಳ ವಿಚಾರದಲ್ಲಿ ಇನ್ನೊಂದು ಕಷ್ಟ ವೇನೆಂದರೆ ಇವುಗಳನ್ನು ಹೊಸದಾಗಿ ಕಟ್ಟುವಾಗ ಇಂಜಿನಿಯರುಗಳು ಹೋಗಿ ಅಲ್ಲಿ ಕೆಲಸ ಮಾಡುವುದಕ್ಕೆ ಇಚ್ಛೆಪಡುವುದಿಲ್ಲ. ಅವರು ಬೆಂಗಳೂರು ನಗರ ಮತ್ತು ಇತರ ಅನುಕೂಲವಾದ ಸ್ಥಳಗಳಲ್ಲಿರಬೇಕು ಎಂದು ಆಸೆ ಪಡುತ್ತಾರೆ ಮತ್ತು ಅದಕ್ಕೆ ಬೇಕಾದ ಪ್ರಭಾವವನ್ನೂ ಬೀರುವುದಕ್ಕೆ ಪ್ರಯತ್ನ ಮಾಡು ತ್ತಾರೆ. ಬೆಂಗಳೂರು ಕಾರ್ಪೊರೇಷನ್ನಿನಲ್ಲಿ ಒಬ್ಬ ಇಂಜಿನಿಯರು 27 ವರ್ಷಗಳಿಂದ ಅವಿಚ್ಛಿನ್ನವಾಗಿ ಇದ್ದಾರೆ. ಆದುದರಿಂದ ಸರ್ಕಾರದವರು ಏನು ಮಾಡ ಬೇಕು ಎಂದರೆ ಪ್ರಾರಂಭದಲ್ಲಿ ಯಾವ ಇಂಜಿನಿಯರ್ ಕೆಲಸ ಮಾಡಬೇಕಾದರೂ ಕೂಡ ಪ್ರಾಜೆಕ್ಟ್‌ಗಳಲ್ಲಿ ಐದುವರ್ಷವಾದರೂ ಕೆಲಸ ಮಾಡಬೇಕು. ಅನಂತರ ಮಾತ್ರವೇ ಬೇರೆಕಡೆಗೆ ಹಾಕತಕ್ಕದ್ದು ಎಂದು ವಿಧಾ ಯಕ ಮಾಡಬೇಕು. ಯಾವ ಪ್ರಭಾವಕ್ಕೂ ಒಳಗಾಗಿ, ಬದಲಾವಣೆಗಳನ್ನು ಮಾಡದೆ ಕೆಲಸಗಳನ್ನು ಜಾಗ್ರತೆ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಸರ್ಕಾರಕ್ಕೆ ಸೂಚಿಸುತ್ತೇನೆ.

ರಸ್ತೆಗಳು ಮತ್ತು ಕಾಮಗಾರಿ ಕೆಲಸ. ಈಗ ಪಬ್ಲಿಕ್ ವರ್ಕ್ಸ್ ಮಂತ್ರಿಗಳಾಗಿರುವ ಶ್ರೀ ವೀರೇಂದ್ರ ಪಾಟೀಲರು ಪ್ರಶ್ನೋತ್ತರ ಕಾಲದಲ್ಲಿ, ಪ್ರಶ್ನೆಗಳನ್ನು ಸಭೆಯಲ್ಲಿ ಕೇಳಿದಾಗ ಅನೇಕ ವೇಳೆ ಉತ್ತರ ಕೊಡು ವುದಕ್ಕೆ ಯೋಚಿಸುತ್ತಾರೆ. ಏಕೆಂದರೆ ಹೋದ ಸರ್ಕಾರ—ಸರ್ಕಾರ ಎಲ್ಲ ಒಂದೇ, continuous process ಎಂದು ಗೊತ್ತಿದೆ—ಒಂದು ಯೋಜನೆ ಯಿಟ್ಟುಕೊಂಡು ಕೆಲಸ ಮಾಡಿಲ್ಲ. ಹೆಚ್ಚಾಗಿ ಕೆಲಸ ವೇನೋ ಆಗುತ್ತಿತ್ತು. ಕೆಲವು ಕಡೆ ಜಾಸ್ತಿ ಕೆಲಸ ವಾಗಿ ಕೆಲವುಕಡೆ ಕಡಮೆಯಾಗಿದೆ. ಈಗಿರುವ ಮರಾಮತ್ ಶಾಖೆಯ ಮಂತ್ರಿಗಳು ನಮ್ಮ ತಾಲ್ಲೂಕಿ ನಲ್ಲಿ ಕೇವಲ ಒಂಬತ್ತು ಮೈಲಿ ರಸ್ತೆಯಾಗಿದೆ, ಎಂದು ಹೇಳಿದ್ದಾರೆ. ಮತ್ತೊಂದು ತಾಲ್ಲೂಕಿನಲ್ಲಿ ೪೦೦ ಮೈಲಿ ರಸ್ತೆಯಾಗಿದೆ. ಈರೀತಿ ಶಿಸ್ತಿಲ್ಲದೆ, ನಿಯಮವಿಲ್ಲದೆ, ಬೇಕು ಬೇಕಾದ ರೀತಿಯಲ್ಲಿ ಕೆಲಸ ಮಾಡಿರುವುದರಿಂದ ತೊಂದರೆಯಾಗಿದೆ. ಮಾನ್ಯ ಸಭೆಯ ಸದಸ್ಯರುಗಳು ಅವರವರ ಕ್ಷೇತ್ರದಲ್ಲಿ ಎರಡು ಮೂರು ಮೈಲಿ ರಸ್ತೆ ಮಾಡಿಸುವುದಕ್ಕೆ ಸಾಧ್ಯವಿಲ್ಲ. ಪ್ರಜೆಗಳಿಗೆ ಬೇಕಾದ ಕಾರ್ಯಗಳನ್ನು ನಡೆಸುವುದಕ್ಕೆ, ಅವರ ಬೇಡಿಕೆಗಳನ್ನು ಈಡೇರಿಸುವುದಕ್ಕೆ ಪ್ರಯತ್ನ ಮಾಡ ಬೇಕು. ಇಲ್ಲದೆ ಇದ್ದರೆ ದೇಶದ್ರೋಹವಾಗುತ್ತದೆ. ಪುನಃ ಸದಸ್ಯರಾದವರು ಹೋಗಿ ತಮ್ಮ ಕ್ಷೇತ್ರದಲ್ಲ ಮತದಾರರನ್ನು ಸಂದರ್ಶನ ಮಾಡತಕ್ಕದ್ದು ಕಷ್ಟ ವಾಗುತ್ತದೆ. ಆದುದರಿಂದ ಸರ್ಕಾರದವರು ಎಲ್ಲೆಲ್ಲಿ ಜನತೆಗೆ ಅನ್ಯಾಯವಾಗಿದೆ ಎಂಬುದನ್ನೆಲ್ಲ ಮನಸ್ಸಿ ನಲ್ಲಿಟ್ಟು ಆ ಭಾಗದಲ್ಲಿ ಕೆಲಸಗಳನ್ನು ಬಹು ಶ್ರದ್ಧೆ ಯಿಂದ ಹೆಚ್ಚು ಜಾಗರೂಕತೆಯಿಂದ ಮಾಡಬೇಕು. ಉದಾಹರಣೆಗೆ ಹೇಳುವುದಾದರೆ P.W.D. ರಸ್ತೆಗೆ ನಮ್ಮ ಹಳ್ಳಿ ಎರಡೂವರೆ ಮೈಲಿ ಇದೆ. ಇಪ್ಪತ್ತು ಮೈಲಿ ರಸ್ತೆ ಸೇರಿಸಿಕೊಂಡುಬಂದು ಮಿಕ್ಕದ್ದನ್ನು ಹಾಗೆಯೇ ಬಿಟ್ಟಿದ್ದಾರೆ.

ಸಣ್ಣ ಸಣ್ಣ ನೀರಾವರಿ ಯೋಜನೆಗಳ ವಿಷಯ ಹೇಳುವುದಾದರೆ ನಾನು ಬಂದಿರತಕ್ಕ ಕ್ಷೇತ್ರದಲ್ಲಿ ನಮ್ಮ ಹೋಬಳಿ ೪೦-೫೦ ಸಾವಿರ ಪ್ರಜಾಸಂಖ್ಯೆ ಯಿಂದ ಕೂಡಿದೆ. ಒಂದು ನೀರಾವರಿ ಕಾಲುವೆ ಯಾವುದೂ ಇಲ್ಲ. ಹಿಂದೆ ಅಲ್ಲಿ ಇದ್ದಂಥಾ ಅಸಿಸ್ಟೆಂಟ್ ಇಂಜಿನಿಯರು ಎರಡೂವರೆ ಲಕ್ಷ ರೂಪಾಯಿಗಳಿಗೆ ಒಂದು ಅಂದಾಜನ್ನು ತಯಾರ್ಮಾಡಿ, ಆದರಿಂದ ೨೫೦ ಎಕರೆ ನೀರಾವರಿಯಾಗುತ್ತದೆಂದು ಕಳಿಸಿದ್ದರು. ಅದನ್ನು ತಡೆದು ನಿಲ್ಲಿಸಿದ್ದಾರೆ. ಏಕೆ ಎನ್ನುವುದು ಅರ್ಥವಾಗಿಲ್ಲ. ಹೀಗೆ ಕೆಲವು ಕಡೆಗಳಲ್ಲಿ ಪಕ್ಷಪಾತ ಮನೋಭಾವವನ್ನು ತೋರಿಸಿದ್ದಾರೆ. ಇದಕ್ಕೆ ರಾಜಕೀಯಕಾರಣವಿದೆಯೋ, ಬೇರೆ ಕಾರಣ ವಿದೆಯೋ ಗೊತ್ತಿಲ್ಲ. ಜನತೆಗೆ ಉಪಯುಕ್ತ ವಾಗುವಂಥ, ಜನರಿಗೆ ಪ್ರಯಾಣ ಮಾಡು ವುದಕ್ಕೆ. ವಾಹನ ಸೌಕರ್ಯಕ್ಕೆ ಅನುಕೂಲ ವಾಗುವಂತೆ ರಸ್ತೆಗಳು ಮತ್ತು ಇತರ ಕೆಲಸಗಳನ್ನು ಮಾಡಬೇಕು. ಆದರೆ ಸಣ್ಣ ಪುಟ್ಟ ವಿಷಯಗಳನ್ನು ಮನಸ್ಸಿನಲ್ಲಿಟ್ಟುಕೊಂಡು ತೊಂದರೆ ಕೊಡುವುದಾದರೆ ವ್ಯಕ್ತಿಗಳಿಗೆ ವೈಯಕ್ತಿಕವಾಗಿ ನಷ್ಟವಾಗುವುದಿರಲಿ, ದೇಶಕ್ಕೆ ಹಾನಿಯಾಗುತ್ತದೆ. ಇಂಥ ಕೆಲಸ ಈಗ ನಡೆಯುತ್ತಿಲ್ಲ; ಮತ್ತು ಮುಂದೆ ನಡೆಯುವುದಿಲ್ಲ ವೆನ್ನುವ ನಂಬಿಕೆ ಇದೆ. ಹಿಂದೆ ನಡೆದಿರುವುದನ್ನು ಸರಿಪಡಿಸತಕ್ಕ ಕೆಲಸವನ್ನು ಮಾನ್ಯ ಮಂತ್ರಿಗಳು ಆಲೋಚನೆ ಮಾಡಬೇಕು. ಏನೇನು ಕುಂದು ಕೊರತೆ ಗಳಿವೆಯೋ ಅವೆಲ್ಲವನ್ನೂ ಸರಿಪಡಿಸಬೇಕೆಂದು ಈ ಸಂದರ್ಭದಲ್ಲಿ ಹೇಳಲು ಇಚ್ಛೆಪಡುತ್ತೇನೆ.

ಅಂತರ ರಾಜ್ಯ ನದಿನೀರಿನ ಹಂಚಿಕೆಯ ವಿಷಯದಲ್ಲಿ ಬಹಳ ಪ್ರಾಮುಖ್ಯವಾದ ತೀರ್ಮಾನವನ್ನು ಸರ್ಕಾರ ದವರು ಕೈಗೊಳ್ಳಬೇಕಾಗಿದೆ. ಉದಾಹರಣೆಗೆ ಕಾವೇರಿ ನದಿನೀರಿನ ವಿಚಾರದಲ್ಲಿ ನಮ್ಮ ಸರ್ಕಾ ರಕ್ಕೂ ಮದ್ರಾಸ್ ಸರ್ಕಾರಕ್ಕೂ ಬಹಳ ಹಿಂದೆ ೧೯೨೪ರಲ್ಲಿ ಒಂದು ಒಪ್ಪಂದವಾಯಿತು. Mettur Dam ಕಟ್ಟಿದ ಮೇಲೆ ಈ ಒಪ್ಪಂದವನ್ನು ನಡೆಸಿ ಕೊಂಡು ಹೋಗುವುದಕ್ಕೆ ಕಷ್ಟವಾಗಿದೆ. ಇದನ್ನು ಪುನರ್ವಿಮರ್ಶೆಮಾಡಿ, ಕಾವೇರಿ ನದಿಯು ನಮ್ಮ ರಾಜ್ಯದಲ್ಲಿ ಎಲ್ಲಿಂದ ಹುಟ್ಟಿ ಎಲ್ಲಿಯವರೆಗೆ ಹರಿಯು ತ್ತದೆ, ನೀರನ್ನು ಎಷ್ಟರಮಟ್ಟಿಗೆ ಉಪಯೋಗಿಸಿ ಕೊಳ್ಳಬಹುದು, ಹೇಗೆ ನೀರಾವರಿ ಯೋಜನೆಗಳನ್ನು ಕಟ್ಟಬಹುದು ಎನ್ನುವುದನ್ನೆಲ್ಲ ಆಲೋಚನೆಮಾಡಿ, ನಮಗೆ ಅನುಕೂಲವಾಗುವ ರೀತಿಯಲ್ಲಿ ಮಾಡ ಬೇಕೆಂದು ಸೂಚಿಸುತ್ತೇನೆ.

ಮತ್ತೊಂದು ಬೃಹತ್ ಪ್ರಶ್ನೆ ಕೃಷ್ಣ ಗೋದಾವರಿ ನೀರಿನ ಹಂಚಿಕೆಯ ವಿಷಯ. ಈ ಸಂದರ್ಭದಲ್ಲಿ ೧೯೫೧ರಲ್ಲಿ ಏನೊಂದು ಒಪ್ಪಂದವಾಯಿತೋ ಅದನ್ನೇ ಸಾಧಿಸಬೇಕು ಎಂದು ಆಂಧ್ರ ಸರ್ಕಾರ ಪ್ರಯತ್ನ

(ಶ್ರೀ ಡಿ. ಎಂ. ಸಿದ್ದಯ್ಯ)

ಮಾಡುತ್ತಿದೆ. ಇದಕ್ಕಾಗಿ ಅನೇಕ ಪ್ರಯತ್ನಗಳು ನಡೆದರೂ ಕೂಡ, ನಮಗೆ ಈ ಕೃಷ್ಣ ನೀರು ಖಂಡಿತವಾಗಿಯೂ ಬರುವುದಿಲ್ಲವೋ ಏನೋ ಎನ್ನುವ ಶಂಕೆಯುಂಟಾಗಿದೆ. ಕೇಂದ್ರ ಸರ್ಕಾರದವರು ಗುಲ್ಹಾಟಿ ಕಮಿಷನ್ ನೇಮಿಸಿದ್ದಾರೆ. ಈ River Board ಮಾಡುವುದಕ್ಕೆ ಮುಂಚೆ ನದಿ ನೀರಿನ ಹಂಚಿಕೆಯ ವಿವಾದ ಇತ್ಯರ್ಥವಾಗುವುದಕ್ಕೆ ನಮ್ಮ ಸರ್ಕಾರ ಮತ್ತು ಆಂಧ್ರ ಸರ್ಕಾರ ರಾಜ್ಯ ಮಟ್ಟದಲ್ಲಿ ಸಂಧಾನಮಾಡಬೇಕೆಂದೂ, ಅನಂತರ ಬೇಕಾದಗೆ ಕೇಂದ್ರ ಸರ್ಕಾರದ ಮಟ್ಟದಲ್ಲಿ ತೀರ್ಮಾನ ಮಾಡಬೇಕೆಂದೂ ಒಂದು ಮನವಿಯನ್ನು ಸರ್ಕಾರ ಮಾಡಿಕೊಂಡಿತ್ತು.

ಶ್ರೀ ಜಿ. ವೆಂಕಟೇಗೌಡ (ಪಾಳ್ಯ).—ಎರಡು ರಾಜ್ಯಗಳೂ ಒಪ್ಪಿ ಆ ಸಮಿತಿಗೆ ಈ ಪ್ರಶ್ನೆಯನ್ನು ಒಪ್ಪಿಸಿದೆ.

ಶ್ರೀ ಡಿ. ಎಂ. ಸಿದ್ದಯ್ಯ.—ಆ ಕಮಿಷನ್ನಿನ ತೀರ್ಮಾನ ನಮ್ಮ ಮೇಲೆ binding ಆಗುತ್ತದೆಯೋ ಸಲಹಾ ರೂಪದಲ್ಲಿರುತ್ತದೆಯೋ ನಮಗೆ ಗೊತ್ತಿಲ್ಲ, ಅಂತೂ ಇಷ್ಟು ನಿಜ. ಈ ಕಮಿಷನ್ನಿಂದ ಕೃಷ್ಣ. ಗೋದಾವರಿ ನೀರು ನಮಗೆ ಬರುತ್ತದೆನ್ನುವ ನಂಬಿಕೆ ಇಲ್ಲ. ಈಗಿನ ಆಂಧ್ರ ಸರ್ಕಾರದವರು ಮಾತನಾಡತಕ್ಕ ರೀತಿ, ಹಿಂದೆ ಪಬ್ಲಿಕ್ ವರ್ಕ್ಸ್ ಮಂತ್ರಿಗಳಾಗಿದ್ದ ಸತ್ಯನಾರಾಯಣರಾಜುರವರು ಮಾತನಾಡಿರತಕ್ಕ ರೀತಿ, ಮತ್ತು ನಾಗಾರ್ಜುನ ಪ್ರಾಜೆಕ್ಟಿಗೆ ನೂರು ಕೋಟಿ ರೂಪಾಯಿ ಖರ್ಚು ಮಾಡುತ್ತೇವೆ, ಅದಕ್ಕ ಧಕ್ಕೆಯಾಗುತ್ತದೆ ಎನ್ನುವ ರೀತಿ—ಇವುಗಳನ್ನೆಲ್ಲ ನೋಡಿದರೆ ಇವೊತ್ತು ನಮಗೆ ಕೃಷ್ಣ ಗೋದಾವರಿ ನೀರಿನ ಹಂಚಿಕೆ ವಿಷಯ ಕಷ್ಟವಾಗಿರುವುದಾಗಿ ಕಾಣುತ್ತದೆ. ನಮಗೆ ಪೂರ್ಣವಾಗಿ ಬರಬೇಕಾದ ನೀರು ಬಂದರೆ 30 ಲಕ್ಷ ಎಕರೆಗಳಿಗಾಗುವಷ್ಟು ನೀರು ಸಿಕ್ಕಬೇಕು. ಕೊನೆಯ ಪಕ್ಷ ಮೂರನೆಯ ಒಂದು ಭಾಗ ಎಂದರೆ ಹತ್ತು ಲಕ್ಷ ಎಕರೆಗೆ ನೀರು ಸಿಕ್ಕಿದರೆ ಮೈಸೂರು ರಾಜ್ಯದ ಉತ್ತರ ಭಾಗ, ಬಹಳ ಕಷ್ಟದಲ್ಲಿರುವ ಕ್ಷಾಮದಿಂದ ಪರಿತಪಿಸತಕ್ಕ ಲಕ್ಷಾಂತರ ಜನಗಳಿಗೆ ಉಪಯೋಗವಾಗುತ್ತದೆ. ಈ ಕೆಲಸದಲ್ಲಿ ಮಾನ್ಯ ಲೋಕೋಪಯೋಗಿ ಶಾಖೆಯ ಮಂತ್ರಿಗಳೂ ಮತ್ತು ನೀರಾವರಿ ಹಾಗೂ ವಿದ್ಯುದುತ್ಪಾದನೆ ಶಾಖೆಗಳನ್ನು ವಹಿಸಿಕೊಂಡಿರುವ ಮುಖ್ಯ ಮಂತ್ರಿಗಳೂ ತಮ್ಮ ಪ್ರಭಾವದಿಂದ ಈ ನದಿಗಳ ನೀರಿನ ಹಂಚಿಕೆ ಯಶಸ್ವಿಯಾಗಿ ನಡೆಯುವಂತೆ ಮಾಡಬೇಕು. ನಮಗೆ ನೀರಿನ ಹಂಚಿಕೆಯಲ್ಲಿ ಸರಿಯಾದ ಪಾಲು ಬಾರದೆಇದ್ದರೆ ವಿಷಯವನ್ನು ಸುಪ್ರೀಂ ಕೋರ್ಟಿಗೆ ಆದರೂ ತೆಗೆದುಕೊಂಡು ಹೋಗಿ ನಮಗೆ ನೀರು ದೊರೆಯುವಂತೆ ಮಾಡಬೇಕೆಂದು ಸೂಚಿಸುವುದಕ್ಕೆ ಇಚ್ಛೆ ಪಡುತ್ತೇನೆ.

4-00 P.M.

ಕೊನೆಯದಾಗಿ, ಈ ಇಲಾಖೆಯ ಸಿಬ್ಬಂದಿಯನ್ನು ಕಡಮೆಮಾಡಬೇಕು, ಬಹಳ ಹೆಚ್ಚಿಗೆ ಚೀಫ್ ಇಂಜನಿಯರುಗಳೂ, ಸೂಪರಿಂಟೆಂಡಿಂಗ್ ಇಂಜನಿಯರುಗಳೂ ಇದ್ದಾರೆ. ರಾಮಚಂದ್ರರಾವ್ ಕಮಿಟಿ ರಿಪೋರ್ಟಿನಲ್ಲಿ ಈ ಇಲಾಖೆಯ ಎಷ್ಟಾಬ್ಲಿಷ್‌ಮೆಂಟನ್ನು ಕಡಮೆ ಮಾಡಿದರೆ ನಾಲ್ಕುವರೆ ಕೋಟಿ ರೂಪಾಯಿ ಉಳಿತಾಯವಾಗುತ್ತದೆಂದು ಹೇಳಿದೆ. ಅದರಂತೆ ಇನ್ನೂ ಅನೇಕ ಉಪಯುಕ್ತವಾದ ಸಲಹೆಗಳನ್ನು ಆ ಸಮಿತಿಯವರು ಕೊಟ್ಟಿದ್ದಾರೆ. ಆ ಸಲಹೆಗಳನ್ನು ಕೂಡ ಸರ್ಕಾರದವರು ಮನಸ್ಸಿನಲ್ಲಿಟ್ಟುಕೊಂಡು ಏನೇನು ಸುಧಾರಣೆಗಳನ್ನು ಮಾಡಬೇಕೋ ಅವುಗಳನ್ನು ಮಾಡುತ್ತಾರೆಂದು ನಂಬಿದ್ದೇನೆ.

ಇನ್ನು ರಿಸರ್ಚ್ ವಿಚಾರವಾಗಿ ಸ್ವಲ್ಪ ಹೇಳಬೇಕಾಗಿದೆ. ನಮ್ಮ ಕೆ. ಆರ್. ಸಾಗರ ರಿಸರ್ಚ್ ಇನ್‌ಸ್ಟಿಟ್ಯೂಟಿಗೆ ಆರು ಲಕ್ಷ ರೂಪಾಯಿಯನ್ನು ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕೊಟ್ಟಿದ್ದಾರೆ. ಬೃಹತ್ತಾಗಿ ರಿಸರ್ಚಿಗೋಸ್ಕರ ೧೨೫ ಲಕ್ಷ ರೂಪಾಯಿ ಥರ್ಡ್ ಫೈವ್ ಇಯರ್ ಪ್ಲಾನಿನಲ್ಲಿ ಕೊಟ್ಟಿದ್ದಾರೆ. ಆದರೆ ಕೃಷ್ಣರಾಜಸಾಗರ ಇನ್‌ಸ್ಟಿಟ್ಯೂಟಿಗೆ ಪಿ.ಡಬ್ಲ್ಯು.ಡಿ. ಇಲಾಖೆ ಇಂಜನಿಯರುಗಳು ಹೋಗುತ್ತಿದ್ದಾರೆ. ರಿಸರ್ಚ್ ಅನ್ನತಕ್ಕಂಥಾದ್ದಕ್ಕೆ ಬಹಳ ಮೇಧಾವಿಗಳು ಬೇಕು, ರಿಸರ್ಚ್ ಮಾಡುವುದರಲ್ಲಿ ನಂಬಿಕೆ, ವಿಶ್ವಾಸವಿರುವವರು ಬೇಕು. ಆ ಇನ್‌ಸ್ಟಿಟ್ಯೂಟಿನಲ್ಲಿ ತಜ್ಞರು, ಬುದ್ಧಿವಂತರು ಇರಬೇಕು. ಅಂಥಾ ಜನಗಳನ್ನೇ ಆ ಇನ್‌ಸ್ಟಿಟ್ಯೂಟಿಗೆ ಹಾಕಬೇಕು ಎಂದು ಸರ್ಕಾರಕ್ಕೆ ಸೂಚಿಸುತ್ತೇನೆ. ವೇಸ್ಟೇಜ್ ಏನಾಗುತ್ತಿದೆಯೋ ಅದನ್ನು ರಿಸರ್ಚ್ ಸಂಸ್ಥೆಯವರು ನಿಲ್ಲಿಸಬೇಕು. ಒಟ್ಟಿನಲ್ಲಿ ಬಹಳ ಲೀಕೇಜ್ ಇದೆ, ಅದನ್ನೆಲ್ಲಾ ಸೆಟ್‌ರೈಟ್ ಮಾಡಬೇಕೆಂದು ವಿರೋಧ ಪಕ್ಷದವರು ಹೇಳುತ್ತಾರೆ. ಈ ಇಲಾಖೆಯನ್ನು "Public Enemy No. 1, 2, 3," ಎಂದು ಕರೆದರು. ಆದರೂ ಕೂಡ ಲೋಪದೋಷಗಳು ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಏನು ಲೋಪದೋಷಗಳಿವೆಯೋ ಅವುಗಳನ್ನು ಸರಿಪಡಿಸಿ, ಈ ಕೋಟ್ಯಂತರ ರೂಪಾಯಿ ಖರ್ಚುಮಾಡುವ ಪ್ರಾಜೆಕ್ಟುಗಳಿಂದ ನಮ್ಮ ದೇಶವನ್ನು ಹೊಸದಾದ ರೀತಿಯಲ್ಲಿ ರೂಪಿಸಲು ನಮ್ಮ ಸರ್ಕಾರದವರು ಪ್ರಯತ್ನಿಸುತ್ತಾರೆಂದು ನಂಬಿ, ಈ ಕಟ್‌ಮೋಷನ್ನಿಗೆ ಅನುಮೋದನೆ ಕೊಡುತ್ತೇನೆ. ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ (ಮದ್ದೂರು).—ಮಾನ್ಯ ಸಭಾಪತಿಗಳೆ, ಕಾಂಗ್ರೆಸ್ ಪಕ್ಷದ ಮಾನ್ಯ ಶ್ರೀಮಾನ್ ಸಿದ್ದಯ್ಯನವರ ಭಾಷಣವನ್ನು ಬಹು ಕುತೂಹಲದಿಂದ ಕೇಳಿದೆ. ಈ ಸಾರ್ವಜನಿಕ ಕಾಮಗಾರಿ ಇಲಾಖೆಯ ಮೇಲೆ ಹಲವಾರು ಆರೋಪಗಳನ್ನು ಬಹು ಜವಾಬ್ದಾರಿಯುತರಾದವರು ಮಾಡಿದ್ದಾರೆ. ಮುಖ್ಯವಾಗಿ ಈ ಇಲಾಖೆಯಲ್ಲಿ ಶಿಸ್ತು ಮಾಯವಾಗಿದೆ, ಪಕ್ಷಪಾತ ಮನೋಭಾವನೆಯಿಂದ ಕೆಲಸಕಾರ್ಯಗಳು ನಡೆಯುತ್ತಾ ಇವೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಈ ಅಭಿಪ್ರಾಯವನ್ನು ನಾನಾದರೂ ಕೂಡ ಬಹಳ ನೊಂದ ಮನಸ್ಸಿನಿಂದ ಪುಷ್ಟೀಕರಿಸಬೇಕಾಗಿದೆ. ಈ ಲೋಕೋಪಯೋಗಿ ಸಚಿವ ಶಾಖೆ ಎನ್ನುವ ಹೆಸರು ಬಹು ಸುಂದರವಾಗಿದೆ, ಕೇಳುವುದಕ್ಕೆ ಆಪ್ಯಾಯಮಾನವಾಗಿದೆ. ಆದರೆ ನಮ್ಮ ಕಷ್ಟ ಏನೂ ಎಂದು ಹೇಳಿದರೆ ಈ ಲೋಕೋಪಯೋಗಿ ಇಲಾಖೆ ಕೆಲವರಿಗೆ ಲೋಕೋಪಯೋಗಿಯಾಗಿ ಪರಿಣಮಿಸಿ, ಮಿಕ್ಕ ಕೆಲವರಿಗೆ ಲೋಕ ಅಪಯೋಗಿಯಾಗಿ ಪರಿಣಮಿಸಿರತಕ್ಕಂಥ ಹಲವಾರು ಧೃಷ್ಟಾಂತಗಳನ್ನು ಈ ಕಡೆಯಿಂದ ನಾನು ಕೊಡಬಲ್ಲೆ. ಆದರೂ ಕೂಡ ನಾವಾದರೂ ಆಸೆ ಮಾಡತಕ್ಕಂಥಾದ್ದು ಏನು ಅಂದರೆ, ಹಲವಾರು ನನ್ನ ಮಾನ್ಯ ಸ್ನೇಹಿತರು ಹೇಳಿದಹಾಗೆ ಈ ಇಲಾಖೆಯಲ್ಲಿ ಶಿಸ್ತು. ಈ ಇಲಾಖೆ ಲಂಚ ದೇವತೆಯ ಆರಾಧನೆಸ್ಥಾನ ಎಂಬುದಾಗಿ ಹಲವರು ವ್ಯಾಖ್ಯಾನಗಳನ್ನು ಮಾಡಿದ್ದಾರೆ. ಈ ಸಭೆಯ ಎಲ್ಲೆಡೆಗಳಿಂದಲೂ ಬಂದಿರತಕ್ಕಂಥ ಒಂದೇ ಒಂದು ಅಭಿಪ್ರಾಯ ಏನು ಅಂದರೆ ಈ ಇಲಾಖೆಯಲ್ಲಿ ಎಲ್ಲಿಯೂ ಕೂಡ ಸರಿಯಾಗಿಲ್ಲ,

ಬೇಕಾದಷ್ಟು ಮಾರ್ಪಾಡುಗಳು, ಬೇಕಾದಷ್ಟು ಸುಧಾರಣೆಗಳು ಬಹು ಅಗತ್ಯವಾಗಿ ಆಗಬೇಕಾಗಿವೆ ಎಂದು ಹೇಳಿದರು. ಲಘುವಾಗಿ ಮಾತನಾಡ ಬೇಕಾದರೆ ಅಥವಾ ಲಘುವಾದಂಥ ದೃಷ್ಟಾಂತ ಒಂದನ್ನು ಈ ಸಮಯಲ್ಲಿ ಕೊಡಬೇಕಾದರೆ, ಇವತ್ತಿನ ದಿವಸ ಈ ಮದುವೆಯ ಮಾರುಕಟ್ಟೆಯಲ್ಲಿ ಈ ಸಬ್ ಓವರ್‌ಸೀರ್‌ಗಳಿಗೆ, ಅಸಿಸ್ಟೆಂಟ್ ಇಂಜನೀಯರು ಗಳಿಗೆ ಇರತಕ್ಕಂಥ ಡಿಮ್ಯಾಂಡು ಹೆಣ್ಣು ಮಕ್ಕ ಳನ್ನು ಪಡೆದಿರತಕ್ಕಂಥ ತಾಯಂದಿರುಗಳಿಗೆ ಚೆನ್ನಾಗಿ ಗೊತ್ತು. ಅಂದರೆ ಇವತ್ತು ಈ ಲಂಚ ಅನ್ನತಕ್ಕಂಥ ಶಬ್ದ ಈ ಲೋಕೋಪಯೋಗಿ ಇಲಾಖೆಯಲ್ಲಿ ಎಷ್ಟರ ಮಟ್ಟಿಗೆ ಹುದಗಿದೆ, ಎಷ್ಟರಮಟ್ಟಿಗೆ ಕಾಣಿಸುತ್ತಾ ಇದೆ ಎಂದು ನಮಗಾದರೂ ಅನ್ನಿಸುತ್ತದೆ. ಅದೇ ರೀತಿ ನಮ್ಮ ದೇಶದಲ್ಲಿ ನಮ್ಮ ಸಮಾಜದಲ್ಲಿ ಇಷ್ಟರ ಮಟ್ಟಿನ ಅನ್ಯಾಯ, ಇಷ್ಟರ ಮಟ್ಟಿನ ಅಸತ್ಯ ಮುಂದು ವರಿದರೆ ಇದಕ್ಕೆ ಕೊನೆ ಯಾವಾಗ ? ಕೊನೆ ಎಲ್ಲಿದೆ ? ಎನ್ನತಕ್ಕಂಥ ಒಂದು ಘೋರವಾದ ಸಂಕಟ ನಮಗೆ ಉಂಟಾಗುತ್ತದೆ.

ನಾನು ಕೇವಲ ಈ ಇಲಾಖೆಯಲ್ಲಿ ಇರತಕ್ಕಂಥ ಲಂಚಕೋರ ಅಧಿಕಾರಿಗಳನ್ನು ಮಾತ್ರ ಟೀಕೆ ಮಾಡುತ್ತಾ ಇಲ್ಲ. ಈ ಲಂಚಕೋರ ಅಧಿಕಾರಿಗಳು ತಮ್ಮ ತಮ್ಮ ಮನಸ್ಸನ್ನು, ತಮ್ಮ ತಮ್ಮ ಹೃದಯ ವನ್ನು ಶೋಧನೆ ಮಾಡಿಕೊಳ್ಳುವಂಥ ಕಾಲ ಈಗ ಬಂದಿದೆ. ನಮಗೆ ತಿಳಿದಹಾಗೆ ಎಪ್ಪತ್ತು ಕೋಟಿ ರೂಪಾಯಿಗಳನ್ನು ಇವೊತ್ತಿನ ದಿವಸ ಮಂಜೂರು ಮಾಡಬೇಕಾಗಿದೆ. ನೈತಿಕ ಮಟ್ಟಕಡಮೆ ಇದ್ದರೆ, ಈ ಎಪ್ಪತ್ತು ಕೋಟಿ ರೂಪಾಯಿ ಖರ್ಚು ಮಾಡುವುದರ ಮೂಲಕ ನಮ್ಮ ಜನತೆಯ ಕಲ್ಯಾಣ ಎಷ್ಟರ ಮಟ್ಟಿಗೆ ಸಾಧನೆ ಮಾಡಬಹುದು ? ಜನತೆಯ ಕಲ್ಯಾಣ ಸಾಧನೆ ಮಾಡುವುದರಲ್ಲಿ ಈ ಇಲಾಖೆ ವಿಫಲವಾಗಿದೆ, ಎಂದು ನಾನಾದರೂಕೂಡ ಅಭಿಪ್ರಾಯ ಪಡುತ್ತೇನೆ. ಸ್ವಾಮಿ, ಈ ಸಮಯದಲ್ಲಿ ಬಹು ನೊಂದ ಹೃದಯದಿಂದ ಒಂದೇ ಒಂದು ಮಾತನ್ನು ಕೆಲವು ಉನ್ನತ ಅಧಿಕಾರಿ ಗಳ ವಿಚಾರದಲ್ಲಿ ನಾನು ಈ ಸಭೆಯ ಅವಗಾಹನೆಗೆ ತರಬೇಕಾಗಿದೆ. ಕಳೆದ ಚುನಾವಣೆಗಳಲ್ಲಿ ಹಲವಾರು ಶಕ್ತಿಗಳು ಒಬ್ಬರ ಪರವಾಗಿ ಕೆಲಸ ಮಾಡಿವೆ. ಆದರೆ ಸರ್ಕಾರಿ ಇಲಾಖೆಗೆ ಸೇರಿದ ಅಧಿಕಾರಿಗಳು ನಿಷ್ಪಕ್ಷ ಪಾತವಾಗಿ ಇರಬೇಕು. ಅದರೆ ಚುನಾವಣೆ ಕಾಲದಲ್ಲಿ ಎಷ್ಟೋ ಶಕ್ತಿಯುತ ಮತ್ತು ಉನ್ನತ ಸ್ಥಾನದಲ್ಲಿ ಇರತಕ್ಕಂಥ ಜನಗಳು ತಮ್ಮ ಅಧಿಕಾರ ಪ್ರಭಾವವನ್ನು ಜನಗಳ ಮೇಲೆ ಬೀರಿ ದುಡ್ಡನ್ನೂ ವಸೂಲು ಮಾಡು ವುದರ ಮೂಲಕ ಒಬ್ಬಾನೊಬ್ಬ ವ್ಯಕ್ತಿಗೆ ಫಂಡ್ ಮಾಡಿ ಕೊಟ್ಟರು. ಆ ಫಂಡನ್ನು ಆ ವ್ಯಕ್ತಿ ಉಪಯೋಗಿಸಿ ದರು ಎಂದು ತಿಳಿಸಲು ನನಗೆ ಕೊಂಚ ಭಯವಾಗು ತ್ತಿದೆ.

ಶ್ರೀ ಎಸ್. ನಿಜಲಿಂಗಪ್ಪ.—ಯಾರಿಗೆ ಕೊಟ್ಟರು ?

ಶ್ರೀ ಎಸ್. ಎಂ. ಕೃಷ್ಣ.—ನಮ್ಮ ಸಭಾನಾಯ ಕರಿಗೆ ಎಲ್ಲಾ ಚೆನ್ನಾಗಿ ಗೊತ್ತು.—ಯಾರಿಂದ ದುಡ್ಡು ಎಲ್ಲಿಗೆ ಹೋಯಿತು ಎಂದು ಅವರಿಗೆ ಚೆನ್ನಾಗಿ ಗೊತ್ತು. ಆದರೆ ಒಂದು ವಿಚಾರ ಏನು ಎಂದರೆ ಆದದ್ದು ಆಗಿ ಹೋಯಿತು.

ಶ್ರೀ ಎಸ್. ನಿಜಲಿಂಗಪ್ಪ.—ಅದನ್ನು ಹೇಳಿ.

ಶ್ರೀ ಎಸ್. ಎಮ್. ಕೃಷ್ಣ.—ಅವರು ಒಂದು ಫಂಡನ್ನು ಮಾಡಿ ಆ ಒಬ್ಬ ವ್ಯಕ್ತಿಗೆ ಕೊಟ್ಟರು. ಅದು ಒಂದು ದುರಂತ ನಾಟಕವಾಗಿ ಪರಿಣಮಿಸಿತು. ಕೆಲ ವರು ಈ ವಿಚಾರವನ್ನು ಈಗಾಗಲೇ ಪ್ರಸ್ತಾಪ ಮಾಡಿ ದ್ದಾರೆ. ಇಂಥ ವಿಷಾದಕರ ಪ್ರಸಂಗಗಳು ನಮ್ಮ ಜೀವನದಲ್ಲಿ, ನಮ್ಮ ಸಮಾಜದಲ್ಲಿ, ನಮ್ಮ ರಾಜ್ಯದಲ್ಲಿ ನಡೆದುವು. ಒಂದು ಆಸೆಯನ್ನು ಮನಸ್ಸಿನಲ್ಲಿ ಇಟ್ಟು ಕೊಂಡು ಮಾಡಿದ್ದಾರೆಂದು ನಾನು ಈ ಸಭೆಯ ಅವಗಾಹನೆಗೆ ತರುತ್ತಾ ಇದ್ದೇನೆ.

ಸ್ವಾಮಿ, ನಮ್ಮ ಮುಂದೆ ಈ ಅಡಿಟ್ ರಿಪೋರ್ಟ್ ಇದೆ. ಈ ಆಡಿಟ್ ರಿಪೋರ್ಟ್‌ನಲ್ಲಿ ಕಾಣತಕ್ಕಂಥಾದ್ದು ಏನು ? ಸುಮಾರು ಎರಡು ಕೋಟಿ ರೂಪಾಯಿಗಳಷ್ಟು ಕಾಮಗಾರಿಗಳಿಗೆ ಸ್ಯಾಂಕ್ಷನ್ ಪಡೆಯದೆಯೇ ವೆಚ್ಚ ಮಾಡಿರುವುದು. ಈ ಬಡ್ಜೆಟ್ಟಿಗೆ ಸೇರಿಸದೆ ಇರುವ ಕೆಲಸಕಾರ್ಯಗಳನ್ನು ಮಾಡಿದ್ದಾರೆ. ಮತ್ತೆ ಒಂದು —ಒಂದೂವರೆ ಕೋಟಿ ರೂಪಾಯಿನಷ್ಟು ಕೆಲಸ ಕಾರ್ಯಗಳನ್ನು ಬಡ್ಜೆಟ್ಟಿನಲ್ಲಿ ಸೇರಿಸಿದ್ದರೂ ಕೂಡಾ ಅವನ್ನು ಕೈ ಬಿಟ್ಟಿದ್ದಾರೆ. ಇದಕ್ಕೆ ಕಾರಣ ಏನು ಅನ್ನತಕ್ಕಂಥಾದ್ದನ್ನು ಸರ್ಕಾರದವರೂ ನಾವೂ ಸಾಮೂಹಿಕವಾಗಿ ಆಲೋಚನೆ ಮಾಡಬೇಕಾಗಿದೆ. ಈ ಬಡ್ಜೆಟ್ಟು ತಯಾರುಮಾಡುವುದು ಏಕೆ ? ಮಂಜೂರು ಮಾಡುವುದು ಏಕೆ ? ಇವೆಲ್ಲವನ್ನೂ ದೃಷ್ಟಿಯಲ್ಲಿ ಇಟ್ಟು ಕೊಂಡು ನೋಡಿದರೆ ಈ ಬಡ್ಜೆಟ್ಟಿಗೆ Sanctity ಏನಿದೆ ? ಪವಿತ್ರತೆ ಏನಿದೆ ? ಅದು ನೀರಿನಲ್ಲಿ ಹೋಮ ಮಾಡಿದಂತಾಗುತ್ತದೆ. ಆದ್ದರಿಂದ ಈ ಅಪರಾಧಗಳು ಜಾಸ್ತಿ ನಡೆಯದ ರೀತಿಯಲ್ಲಿ ಈ ಇಲಾಖೆಯ ಸಿಬ್ಬಂದಿ ಯವರು ಕೆಲಸ ಮಾಡಬೇಕು ಎಂದು ನಾನಾದರೂ ಕೂಡ ಅಭಿಪ್ರಾಯ ಪಡುತ್ತೇನೆ. ಇನ್ನು ಈ ಆಡಿಟ್ ರಿಪೋರ್ಟ್‌ನಲ್ಲಿ ಬೇಕಾದಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಈ ಶರಾವತಿ ಪ್ರಾಜೆಕ್ಟಿ ನಲ್ಲಿ ಕೆಲವು ಮೆಷಿನರಿಗಳನ್ನು ಉಪಯೋಗಿಸದಿದ್ದುದ ರಿಂದ ಕೆಲಸಕ್ಕೆಬಾರದಂತಾಗಿವೆ. ಆದ್ದರಿಂದ ನಮ್ಮ ಸಂಸ್ಥಾನದಲ್ಲಿ ಲಕ್ಷಾಂತರ ರೂಪಾಯಿಗಳು ಹೇಗೆ ಉಪಯೋಗವಾಗದೆ ಬಿದ್ದಿವೆ ಎನ್ನುವ ವಿಚಾರವನ್ನೂ ಕೂಡ ಅಲ್ಲಿ ಪ್ರಸ್ತಾಪ ಮಾಡಿದ್ದಾರೆ.

ಇನ್ನು ನಮ್ಮ ಸ್ನೇಹಿತರಾದಂಥ ಶ್ರೀಮಾನ್ ಕೃಷ್ಣ ಶೆಟ್ಟಿ ಅವರು ನದೀ ವಿಭಾಗದ ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಬಹು ಉಗ್ರವಾಗಿ ಅವರು ಸರ್ಕಾರ ವನ್ನು ಟೀಕೆ ಮಾಡಿದರು. ಅವರು ಬಹಳ ವ್ಯಂಗ್ಯ ವಾಗಿ ಮೀಸೆ ಹೊತ್ತವರಂತೆ ಸರ್ಕಾರ ಕೆಲಸ ಮಾಡು ತ್ತಿಲ್ಲವೆಂಬ ಒಂದು ಆಮಂತ್ರಣವನ್ನು ಸರ್ಕಾರಕ್ಕೆ ಕೊಟ್ಟರು. ಆದ್ದರಿಂದ ಮೀಸೆ ಹೊತ್ತವರಂತೆ ಸರ್ಕಾರ ಕೆಲಸ ಮಾಡಬೇಕು ಎಂದು ಹೇಳಿದರು. ನಾನೂ ಸಹ ಅವರ ಆ ಒಂದು ಮಾತಿಗೆ ಬೆಂಬಲ ಕೊಡುತ್ತೇನೆ.

ಶ್ರೀ ಎಂ ವಿ. ಕೃಷ್ಣಪ್ಪ.—ಅವರಿಗೇ ಇಲ್ಲ ಮೀಸೆ !

ಶ್ರೀ ಎಸ್. ಎಂ. ಕೃಷ್ಣ.—ನಮ್ಮಲ್ಲಿ ಕೆಲವರಿ ಗಾದರೂ ಅದು ಇದೆಯಲ್ಲಾ; ಮೀಸೆ ಹೊತ್ತಿಲ್ಲದವ ರಂತಹವರ ಕೈಯಲ್ಲಿ ಕಾಂಗ್ರೆಸ್ ಸರ್ಕಾರ ಕೊಟ್ಟಿ ದ್ದೇವೆ ಎಂಬುದಾಗಿ ಅವರು ಹೇಳಿದ್ದು ಸ್ವಲ್ಪಮಟ್ಟಿಗೆ ನಿಜವೇ ಇರಬಹುದು ಎಂದು ನನಗೆ ಕಾಣುತ್ತದೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಕಾಂಗ್ರೆಸ್ಸಿನಲ್ಲಿಯೂ ಮೀಸೆ ಹೊತ್ತವರು ಇದ್ದಾರೆಂದು ಶ್ರೀಮಾನ್ ರೇವಣ್ಣ ಸಿದ್ದಪ್ಪನವರಿಗೆ ಸ್ವಲ್ಪ ಹೇಳಿ.

ಶ್ರೀ ಎಸ್. ಎಂ. ಕೃಷ್ಣ.—ನಾವು ನದಿ ವಿವಾದ ವನ್ನು ಆಲೋಚನೆ ಮಾಡುವಾಗ, ಚರ್ಚೆ ಮಾಡು ವಾಗ ಇಡೀ ಭಾರತ ದೇಶದ ಸಮಗ್ರತೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ನಾವು ವಿಚಾರ ಮಾಡಬೇಕು, ವಿಮರ್ಶೆ ಮಾಡಬೇಕು. ಕೇವಲ ಮೈಸೂರು ಮತ್ತು ಮದ್ರಾಸ್ ಪ್ರಾಂತಗಳ ಒಂದೇ ದೃಷ್ಟಿಯನ್ನಿಟ್ಟು ಕೊಂಡು ವಿಚಾರ ಮಾಡುವುದಕ್ಕೆ ಹೋಗುವುದು ಸರಿ ಯಾದುದಲ್ಲ. ನದಿಯ ವಿಚಾರದಲ್ಲಿ ಒಬ್ಬರಿಗೊಬ್ಬ

(ಶ್ರೀ ಎಸ್. ಎಂ. ಕೃಷ್ಣ)

ರಿಗೆ ವೈಮನಸ್ಯ, ಉದ್ರೇಕವಾಗತಕ್ಕಂಥ ವಾತಾವರಣದಲ್ಲಿ ನದಿಗಳ ವಿವಾದವನ್ನು ಚರ್ಚೆ ಮಾಡುವುದು ಸಾಧುವಲ್ಲವೆಂಬುದಾಗಿ ನಾನು ಬಹು ನಮ್ರತೆಯಿಂದ ಸರ್ಕಾರದವರಿಗೆ ಹೇಳುತ್ತೇನೆ. ಏಕೆಂದರೆ ಮೈಸೂರು ಸಂಸ್ಥಾನ ಬೆಳೆದರೆ ಭಾರತ ದೇಶ ಬೆಳೆಯುತ್ತದೆ. ಆಂಧ್ರ ರಾಜ್ಯ ಬೆಳೆದರೆ ಭಾರತ ರಾಜ್ಯ ಬೆಳೆಯುತ್ತದೆ. ಈ ಒಂದು ಉದಾರದೃಷ್ಟಿಯಿಂದ ಮತ್ತು ವಿಶಾಲದೃಷ್ಟಿಯಿಂದ ನಾವು ಅಂತರ ರಾಜ್ಯಗಳ ನದಿ ವಿವಾದಗಳನ್ನು ವಿಮರ್ಶೆ ಮಾಡುವ ಯೋಚನೆಯನ್ನು ಈ ಸಂದರ್ಭದಲ್ಲಿ ಮಾಡಬೇಕಾಗಿದೆ. ಈಗ ನಮ್ಮ ಸರ್ಕಾರದವರು ಗುಲ್ಹಾಟಿ ಕಮಿಷನ್ನಿನವರ ವರದಿಯನ್ನು ಈ ಬಗ್ಗೆ ನಿರೀಕ್ಷಿಸುತ್ತಿದ್ದಾರೆ. ನಾವಾದರೂ ಈ ಕಮಿಷನ್ನಿನ ತಜ್ಞರು ಏನೇನು ಅಭಿಪ್ರಾಯಗಳನ್ನು ಈ ನದಿಗಳ ನೀರಿನ ಹಂಚಿಕೆಯ ಬಗ್ಗೆ ವರದಿಯಲ್ಲಿ ಕೊಡುತ್ತಾರೋ ಅವೆಲ್ಲವನ್ನೂ ಬಹುಜವಾಬ್ದಾರಿಯುತವಾಗಿ ಆಲೋಚನೆ ಮಾಡಬೇಕಾಗಿದೆ. ರಾಜ್ಯ ಸರ್ಕಾರದವರೂ ಅದರ ವಿಚಾರದಲ್ಲಿ ದೀರ್ಘವಾಗಿ ಚರ್ಚೆ ಮಾಡಿ ಒಂದು ಅಂತಿಮ ತೀರ್ಮಾನವನ್ನು ಕೈಗೊಳ್ಳಬೇಕಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರದವರು ಇತ್ತೀಚೆಗೆ ಅಂತರರಾಜ್ಯ ನದಿ ಮಂಡಲಿಗಳನ್ನು ರಚನೆಮಾಡಬೇಕೆಂದು ಯೋಚನೆ ಮಾಡಿದ್ದಾರೆ. ರಾಜ್ಯಸರ್ಕಾರದವರೂ ಅದೇ ರೀತಿಯಲ್ಲಿ ಯೋಚನೆ ಮಾಡುತ್ತಿದ್ದಾರೆ ಎಂಬುದಾಗಿ ಅರ್ಥ ಬರುವ ರೀತಿಯಲ್ಲಿ ಈ ಸಭೆಗೆ ಕೆಲವು ದಿವಸಗಳ ಕೆಳಗೆ ತಿಳಿಸಿದರು. ಇದು ಬಹು ಸ್ವಾಗತಾರ್ಹವಾದ ಸಮಾಚಾರ. ಈ ಅಂತರರಾಜ್ಯ ನದಿ ಮಂಡಲಿಗಳು ಎಲ್ಲಾ ರಾಜ್ಯಗಳ ಕೇಳಿಕೆಗಳನ್ನು ಮತ್ತು ಕೋರಿಕೆಗಳನ್ನು ಸಮನ್ವಯ ಮಾಡುವಂತಹ ಸಮಿತಿಗಳು ಬೇಕು. ಈ ಬಗ್ಗೆ ಈ ಸಮಿತಿಗಳು ಏನೇನು ತತ್ತ್ವಗಳನ್ನು ರಚನೆ ಮಾಡಬೇಕೆಂದು ಭಾರತ ಸರ್ಕಾರದವರು ಆದೇಶವನ್ನು ಮತ್ತು ಅಭಿಪ್ರಾಯಗಳನ್ನು ಕೊಟ್ಟಿದ್ದಾರೋ ಅವುಗಳನ್ನೆಲ್ಲಾ ನಾವು ಈ ಸಭೆಯಲ್ಲಿ ಸ್ವಾಗತಿಸಬೇಕು. ಆದರೆ ಒಂದೇ ಒಂದು ಶಂಕೆ ನನ್ನಲ್ಲಿದೆ. ಅದೇನೆಂದರೆ ಈ ಅಂತರರಾಜ್ಯ ನದಿ ಮಂಡಲಿಗಳು ರಾಜಕೀಯ ನಿರಾಶ್ರಿತರ ಆಶ್ರಯ ಸ್ಥಾನವಾಗುವುದೋ, ಏನೋ ಎಂಬ ವಿಚಾರ; ಇದಕ್ಕೆ ಅವಕಾಶ ಕೊಡಬೇಡಿ.

ಇನ್ನು ನಮ್ಮ ರಾಜ್ಯದಲ್ಲಿ ಅದರಲ್ಲೂ ಕೂಡ ಹಳೆಯ ಮೈಸೂರು ರಾಜ್ಯದಲ್ಲಿ ಈ ಸಣ್ಣ ಪ್ರಮಾಣದ ನೀರಾವರಿ ಯೋಜನೆಗಳಿಗೆ ಬಹು ಪ್ರಾಮುಖ್ಯತೆಯನ್ನು ಸರ್ಕಾರದವರು ಕೊಡಬೇಕಾಗಿದೆ. ಈ ರೀತಿ ಆ ಬಗ್ಗೆ ಪ್ರಾಮುಖ್ಯತೆಯನ್ನು ಕೊಡುವುದರ ಮೂಲಕ ನಮ್ಮ ದೇಶದ ಜನರ ಜೀವನವನ್ನು ಸುಧಾರಿಸಿದಂತಾಗುತ್ತದೆ. ಮತ್ತು ನಮ್ಮ ದೇಶದ ಆಹಾರ ಪರಿಸ್ಥಿತಿಯನ್ನು ಕೂಡ ಜಾಸ್ತಿಮಾಡಿದ ಹಾಗಾಗುತ್ತದೆಂದು ನಾನು ಭಾವನೆ ಮಾಡುತ್ತೇನೆ. ಈಗ ನಮ್ಮ ಮುಂದಿರುವ ಈ ಡಿಮ್ಯಾಂಡಿನಲ್ಲಿ ಸಣ್ಣ ಪ್ರಮಾಣದ ನೀರಾವರಿ ಯೋಜನಾ ಕಾರ್ಯಗಳಿಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ಹಣವನ್ನು ಒದಗಿಸಿದ್ದರೆ ಬಹುಶಃ ಬಹಳ ಒಳ್ಳೆಯದಾಗುತ್ತಿತ್ತು ಮತ್ತು ನಮ್ಮ ದೇಶದಲ್ಲಿ ಇನ್ನೂ ಕೊಂಚ ಹೆಚ್ಚು ನೆಮ್ಮದಿ ಉಂಟಾಗುತ್ತಿತ್ತು ಎಂದು ನಾನು ಸಲಹೆ ಮಾಡುತ್ತೇನೆ.

ಇನ್ನು ನನ್ನ ತಾಲ್ಲೂಕಿನ ವಿಚಾರದಲ್ಲಿ ಕೇವಲ ಎರಡು ಪ್ರಾರ್ಥನೆಗಳನ್ನು ಈ ಘನಸರ್ಕಾರದವರ ಮುಂದೆ ಇಡಬೇಕೆಂದಿದ್ದೇನೆ.

ಶ್ರೀ ಎಸ್. ನಿಜಲಿಂಗಪ್ಪ.—ನಿಮ್ಮ ತಾಲ್ಲೂಕಿನ ಬಗ್ಗೆ ಹೇಳುವಾಗ ಘನಸರ್ಕಾರ ಆಯಿತೇ?

ಶ್ರೀ ಎಸ್. ಎಂ. ಕೃಷ್ಣ.—ಅದು ಸರ್ಕಾರದಮೇಲೆ ನನಗೆ ಎಷ್ಟು ಪ್ರೀತಿ, ಗೌರವ ಇದೆಯೆಂಬುದನ್ನು ತೋರಿಸುತ್ತದೆ. ಏಕೆಂದರೆ ನಮ್ಮ ಹಿಂದೂ ಸಮಾಜದಲ್ಲಿ ಏನಾದರೂ ಪ್ರಾರ್ಥನೆ ಮಾಡಿದಾಗ್ಗೆ ದೊಡ್ಡವರು ಮತ್ತು ಘನ ಹೊಂದಿದವರು ಎಂದು ಹೇಳುವುದು ರೂಢಿ. ನಾನು ಒಬ್ಬ ಸಂಪ್ರದಾಯಬದ್ಧನಾಗಿರತಕ್ಕ ಯುವಕನು. ಆದ್ದರಿಂದ ನಾನು ಆ ಒಂದು ಸಂಪ್ರದಾಯಕ್ಕೆ ಸೇರಿಕೊಂಡು ಮತ್ತು ಅದಕ್ಕೆ ಹೊಂದಿಕೊಂಡೇ ಘನಸರ್ಕಾರವೆಂದು ನಾನು ಪ್ರಾರ್ಥನೆ ಮಾಡುತ್ತಿದ್ದೇನೆ. ಮುಖ್ಯವಾಗಿ ನನ್ನ ತಾಲ್ಲೂಕಿನ ಜನಗಳ ಮೇಲೆ ತಮಗೆ ಹೆಚ್ಚಿನ ಅನುಕಂಪವಿರಬೇಕು. ಈಗ ಬೋಳಾರೆ ಯೋಜನೆಯನ್ನು ತೃತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿಲ್ಲವೆಂದು ಅಪ್ಪಣೆ ಕೊಡಿಸಿದ್ದೀರಿ. ಈ ಎರಡು ವರ್ಷಗಳ ಪ್ಲಾನಿನೊಳಗೆ ಈ ಯೋಜನೆಯನ್ನು ಕಾರ್ಯರೂಪಕ್ಕೆ ತಂದು ಅದನ್ನು ಆದಷ್ಟು ಜಾಗ್ರತೆಯಾಗಿ ಆಗುಮಾಡಿಕೊಟ್ಟರೆ ನಮ್ಮ ಭಾರತ ಜನಗಳ ಮತ್ತು ನನ್ನ ತಾಲ್ಲೂಕಿನ ಜನಗಳ ಶಾಶ್ವತವಾದ ಕೃತಜ್ಞತೆಗೆ ಮತ್ತು ಆ ಮೂಲಕ ಲೋಕಕಲ್ಯಾಣಕ್ಕೆ ದಾರಿಮಾಡಿಕೊಟ್ಟಂತಾಗುತ್ತದೆಂದು ನಾನು ಹೇಳಬೇಕಾಗಿದೆ.

ಇನ್ನು ನನ್ನ ತಾಲ್ಲೂಕಿನಲ್ಲಿ ಎರಡು ಸಣ್ಣಸಣ್ಣ ಪಿಕಪ್‌ಗಳಿವೆ. ಅವನ್ನೂ ಕೂಡ ನಾನು ಈ ಸಮಯದಲ್ಲಿ ಸರ್ಕಾರದ ಗಮನಕ್ಕೆ ತರಬೇಕಾಗಿದೆ. ಆದರೆ ಹೆಚ್ಚು ಕಾಲಾವಕಾಶವಿಲ್ಲ. ಆದ್ದರಿಂದ ಸಂಬಂಧಪಟ್ಟ ಮಂತ್ರಿಗಳಿಗೆ ನಾನು ಆ ಬಗ್ಗೆ ಒಂದು ವಿಜ್ಞಾಪನೆಯನ್ನು ಮಾಡುತ್ತೇನೆ.

ಕಡೆಯದಾಗಿ ಮಾನ್ಯ ಸಭಾಧ್ಯಕ್ಷರಾದ ತಾವು ನನಗೆ ಈ ಸಭೆಯಲ್ಲಿ ಇಷ್ಟುಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟದ್ದಕ್ಕಾಗಿ ನಾನು ತಮಗೆ ಆಭಾರಿಯಾಗಿದ್ದೇನೆ.

ಶ್ರೀ ಎಫ್. ಎಂ. ಹಸಬಿ (ಕಲ್ಘಟಗಿ).—ಅಧ್ಯಕ್ಷರೇ ಈ ಲೋಕೋಪಯೋಗಿ ಕಾಮಗಾರಿಗಳ ಅಭಿವೃದ್ಧಿಗಳ ಪೈಕಿ ನೀರಾವರಿ ಯೋಜನಾ ಕಾರ್ಯದ ಅಭಿವೃದ್ಧಿ ಮುಖ್ಯವಾದುದು. ಇದಲ್ಲದೆ ಇನ್ನೂ ಅನೇಕ ಯೋಜನೆಗಳು ನಮ್ಮ ಮುಂದೆ ಬರುತ್ತಿವೆ. ಆ ಬಗ್ಗೆ ನನ್ನ ಮಾನ್ಯ ಸ್ನೇಹಿತರು ಅನೇಕರು ಬೇಕಾದಷ್ಟು ಸಲಹೆಗಳನ್ನು ಕೊಟ್ಟಿದ್ದಾರೆ. ಆ ಸಲಹೆಗಳನ್ನೆಲ್ಲಾ ನಾನು ಸಮರ್ಥನೆ ಮಾಡುತ್ತಾ ಬರಗಾಲ ಪ್ರದೇಶದಲ್ಲಿದ್ದ ತಾಲ್ಲೂಕುಗಳ ಬಗ್ಗೆ ಕೆಲವು ಸೂಚನೆಗಳನ್ನು ತಮ್ಮ ಎದುರಿಗೆ ಹೇಳಬಯಸುತ್ತೇನೆ. ಕೆಲವು ಕಾಲದ ಹಿಂದೆ ನಮ್ಮ ತಾಲ್ಲೂಕುಗಳಲ್ಲಿ ನಾಲ್ಕೈದು ವರ್ಷಗಳು ಒಂದೇ ಸಮನೆ ಬರಗಾಲ ಪರಿಸ್ಥಿತಿ ಇದ್ದುದರಿಂದ ಅಲ್ಲಿ ಅನೇಕ ರಸ್ತೆಗಳು ಕೆಟ್ಟುಹೋಗಿ ಸಂಚಾರಕ್ಕೆ ತುಂಬಾ ತೊಂದರೆಯುಂಟಾಗಿದೆ. ಇದುವರೆಗೂ ಆ ರಸ್ತೆಗಳು ರಿಪೇರಿಯಾಗಿಲ್ಲ. ಆದ್ದರಿಂದ ಸರ್ಕಾರದವರು ಜಾಗ್ರತೆಯಾಗಿ ಆ ರಸ್ತೆಗಳನ್ನು ಸುವ್ಯವಸ್ಥಿತವಾದ ರೀತಿಯಲ್ಲಿ ನಿರ್ಮಾಣ ಮಾಡಲು ತಕ್ಕ ವ್ಯವಸ್ಥೆಯನ್ನು ಕೈಗೊಳ್ಳಬೇಕು. ಇದನ್ನು ಮಾಡದೆ ಸುಮ್ಮನೆ ಕೋಟ್ಯಂತರ ರೂಪಾಯಿಗಳನ್ನು ಖರ್ಚುಮಾಡಿ ಅನೇಕ ಇಂಟೀರಿಯರ್ ರಸ್ತೆಗಳನ್ನು ಮಾಡುತ್ತಿದ್ದಾರೆ. ಅದರಿಂದಷ್ಟಾಗಿ ಸಾಕಷ್ಟು ಪ್ರಯೋಜನವೂ ಆಗುತ್ತಿಲ್ಲ. ಖರ್ಚುಮಾಡಿದಂತಹ ರೊಕ್ಕ ಪ್ರಯೋಜನವಾಗಬೇಕು. ರಸ್ತೆಗಳ ನಿರ್ಮಾಣದ ಬಗ್ಗೆ ಸರ್ಕಾರ ಅಲಕ್ಷ್ಯ ಮಾಡದೆ ಹೆಚ್ಚು

ಲಕ್ಷ್ಯ ಕೊಡಬೇಕೆಂದು ನಾನು ಹೇಳುತ್ತೇನೆ. ಈ ವಿಚಾರವನ್ನು ಈ ಸಭೆಯ ಗಮನಕ್ಕೂ ಮತ್ತು ಸರ್ಕಾರದ ಗಮನಕ್ಕೂ ತರಬಯಸುತ್ತೇನೆ.

ಇನ್ನು ಇತ್ತೀಚೆಗೆ ಸರ್ಕಾರದವರು ಪ್ರತಿಯೊಂದು ತಾಲ್ಲೂಕಿನೊಳಗೆ 50 ಮೈಲಿಗಳಷ್ಟು ರಸ್ತೆ ನಿರ್ಮಾಣ ಮಾಡಬಹುದು ಎಂದು ಹೇಳಿದ್ದಾರೆ. ಆದರೆ ನಮ್ಮ ಕಡೆ ಹಿಂದುಳಿದ ವರ್ಗದವರು ಅಷ್ಟು ರಸ್ತೆಗಳನ್ನು ಕೈಗೊಳ್ಳುವ ಶಕ್ತಿ ಹೊಂದಿದವರಲ್ಲ. ಬಡ ಜನರು ವಿಶೇಷವಾಗಿದ್ದಾರೆ. ಅವರು ಆ ರಸ್ತೆಗಳಲ್ಲಿ ಹೋಗಿಬರುವುದೇ ಮಹಾಕಷ್ಟ. ಆದ್ದರಿಂದ ಸರ್ಕಾರದವರೇ ಅಂತಹ ಜನಗಳ ಬೇಡಿಕೆಯನ್ನು ತಮ್ಮ ಅವಗಾಹನೆಗೆ ತೆಗೆದುಕೊಂಡು ಆ ರಸ್ತೆಗಳನ್ನು ಮಾಡಿಸಿಕೊಟ್ಟರೆ, ತುಂಬಾ ಸಹಾಯವಾಗುತ್ತವೆಂದು ನಾನು ಹೇಳುತ್ತೇನೆ. ಈ ವಿಷಯದ ಬಗ್ಗೆ ನಾನು ಸರ್ಕಾರದವರಲ್ಲಿ ಉತ್ತರ ಬಯಸುತ್ತೇನೆ. ಈಗ ರೈತರು ಬೆಳೆದಂತಹ ಸಾಮಾನುಗಳನ್ನು ಪಟ್ಟಣಗಳಿಗೆ ತರುವುದಕ್ಕೆ ಬಹಳ ಅನಾನುಕೂಲವಾಗಿದೆ. ಈ ಬಾಬಿಗೆ ಇಷ್ಟೊಂದು ಹಣ ಖರ್ಚು ಮಾಡಿದರೂ ಅಷ್ಟಾಗಿ ಪ್ರಯೋಜನವಾಗಲಿಲ್ಲವೆಂದು ನಾನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

ಇನ್ನು ಈಗ ಶಾಲಾಕಟ್ಟಡಗಳಿಗೆ ಸರ್ಕಾರದವರು ಒಂದು ಸಾವಿರ ರೂಪಾಯಿಗಳನ್ನು ಕೊಡುತ್ತೇವೆಂಬುದಾಗಿ ಹೇಳಿದ್ದಾರೆ. ಉಳಿದ ಹಣವನ್ನು ಗ್ರಾಮಸ್ಥರು ಸರಿಮಾಡಬೇಕೆಂಬ ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ. ನಮ್ಮ ಭಾಗದಲ್ಲಿರತಕ್ಕ ಜಮೀನುಗಳು ಬಹಳವಾಗಿ ಆಳವಾಗಿ ಹೋಗಿ ಶಾಲಾ ಕಟ್ಟಡಗಳಿಗೆ ಪಾಯ ಹಾಕುವುದಕ್ಕೇ ಎಷ್ಟೋ ಹಣ ಖರ್ಚಾಗಬೇಕಾಗಿದೆ. ಸರ್ಕಾರ ಕೊಡತಕ್ಕ ಸಾವಿರ ರೂಪಾಯಿಗಳು ಇದಕ್ಕೆ ಏನೇನೂ ಸಾಲದು. ಬಹಳ ಬಡಜನಗಳು ಇದ್ದಾರೆ. ಉಳಿದ ರೊಕ್ಕವನ್ನೆಲ್ಲಾ ಕೂಡಿಸಿ ಶಾಲಾ ಕಟ್ಟಡಗಳಿಗೆ ತಕ್ಕ ವ್ಯವಸ್ಥೆಯನ್ನು ಸರಿಯಾಗಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಸರ್ಕಾರದವರು ಈಗ ಇರತಕ್ಕ ಆರ್ಡರನ್ನು ಪುನರ್ವಿಮರ್ಶೆ ಮಾಡಬೇಕೆಂದು ನಾನು ಅವರಲ್ಲಿ ಭಿನ್ನೈಸುತ್ತೇನೆ. ಈಗಿರತಕ್ಕ ಶೇಕಡ 40 ಭಾಗವನ್ನು ಶೇಕಡ 60 ರಷ್ಟಾದರೂ ಹಣಸಹಾಯ ಕೊಡಬೇಕೆಂದು ನಾನು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ನಾನು ಧಾರವಾಡ ಜಿಲ್ಲೆಯ ಕಲ್ಘಟ್ಗಿ ತಾಲ್ಲೂಕ್ ಕ್ಷೇತ್ರದಿಂದ ಸದಸ್ಯನಾಗಿ ಆರಿಸಿಬಂದಿರುವವನಾಗಿದ್ದು ಅಲ್ಲಿರುವ ಜನಗಳಿಗೆ ಬೇಕಾದ ಸೌಕರ್ಯಗಳನ್ನು ಒದಗಿಸಿಕೊಡುವುದು ನನ್ನ ಕರ್ತವ್ಯವಾಗಿದೆ. ಅಲ್ಲಿರುವ ಜನಗಳಿಗೆ ನೀರು ಬಿಲ್‌ಕುಲ್ ಇಲ್ಲ. ಅದನ್ನು ಕೂಡಲೇ ಸರ್ಕಾರದವರು ಒದಗಿಸಿಕೊಡಬೇಕೆಂದು ನಾನು ಹೇಳುತ್ತೇನೆ. ನಮ್ಮಕಡೆಯ ಬಾವಿಗಳಲ್ಲಿ ನೀರು ವಿಶೇಷವಾಗಿ ಇಲ್ಲದೇ ಇರುವುದರಿಂದ ಮತ್ತು ನಮ್ಮ ಭಾಗ ಮಲೆನಾಡು ಪ್ರದೇಶವಾಗಿರುವುದರಿಂದ ಸರ್ಕಾರದವರು ಹೆಚ್ಚು ಲಕ್ಷ್ಯ ಕೊಡಬೇಕೆಂದು ನಾನು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ನೀರಾವರಿ ಯೋಜನೆಗಳ ಬಗ್ಗೆ ನಮ್ಮಲ್ಲಿ ಸಾಕಷ್ಟು ಪ್ರಯೋಜನವಾಗಿಲ್ಲ. ಸೌಂದತ್ತಿ, ನರಗುಂದ ಮತ್ತು ನವಲ್‌ಗುಂದ—ಈ ಮೂರು ತಾಲ್ಲೂಕ್‌ಗಳು ಬರಗಾಲ ಪರಿಸ್ಥಿತಿಯಿಂದ ತುಂಬಾ ಕಷ್ಟಕ್ಕೀಡಾಗಿವೆ. ಇದರಿಂದ ಅಲ್ಲಿ ಅನೇಕ ಕಾಮಗಾರಿಗಳು ಕಾರ್ಯಗತವಾಗದೆ ನಿಂತುಹೋಗಿವೆ. ಈಗ ಅಲ್ಲಿ ಮಲಪ್ರಭಾ ಮಹಾ ಯೋಜನೆಯನ್ನು ತೆಗೆದುಕೊಂಡದ್ದು ಮತ್ತು ಅಲ್ಲಿ ಈಗಾಗಲೇ ಸುಮಾರು 50 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದರೂ ಪುನಃ ಅದನ್ನು ರಿ-ಎಸ್ಟಿಮೇಟ್ ಮಾಡಬೇಕು ಎಂದು ಹೇಳುವುದು ಖಂಡಿತ ಸರಿಯಾದುದಲ್ಲವೆಂದು ನಾನು ಹೇಳುತ್ತೇನೆ. ಅಲ್ಲಿನ ಚೀಫ್ ಇಂಜನಿಯರ್ ಆಗಲೀ ಅಥವಾ ಯಾರೇ ಆಗಲಿ ಮುನಿರಾಬಾದ್‌ನಲ್ಲಿ ಈ ಯೋಜನೆಗಾಗಿ ಕೋಟಿಗಟ್ಟಲೆ ರೂಪಾಯಿಗಳನ್ನು ಖರ್ಚುಮಾಡಿರುವುದನ್ನು ಇದುವರೆಗೂ ಇನ್‌ವೆಸ್ಟಿಗೇಷನ್ ಮಾಡಲಿಲ್ಲವೆಂಬುದಾಗಿ ನಾನು ಸರ್ಕಾರದ ಗಮನಕ್ಕೆ ತಮ್ಮ ಮೂಲಕ ತರುತ್ತಿದ್ದೇನೆ. ಇಂಥಾದ್ದಕ್ಕೆಲ್ಲಾ ಸರ್ಕಾರದವರು ವಿಶೇಷ ಲಕ್ಷ್ಯ ಕೊಡಬೇಕೆಂದು ನಾನು ಹೇಳುತ್ತೇನೆ. ಜನಾಭ್ಯುದಯ ಕಾರ್ಯಗಳಿಗೆ ಉಪಯುಕ್ತವಾದ ಈ ಖಾತೆಯನ್ನು ಸರ್ಕಾರದವರು ಯೋಗ್ಯ ರೀತಿಯಿಂದ ಅಭಿವೃದ್ಧಿಪಡಿಸಬೇಕಾಗಿದೆ. ಈ ಖಾತೆಯಲ್ಲಿರತಕ್ಕ ಲೋಪದೋಷಗಳನ್ನು ಮಾನ್ಯ ಮಂತ್ರಿಗಳು ಹೆಚ್ಚು ಇನ್‌ವೆಸ್ಟಿಗೇಷನ್ ಮಾಡಬೇಕೆಂದು ನಾನು ಹೇಳುತ್ತೇನೆ. ಕೆಲವು ಅಂದಾಜುಗಳನ್ನು ಇನ್ನುಮುಂದೆ ಸರ್ಕಾರದವರು ಮಾಡುವ ಕಾಲಕ್ಕೆ ದೊಡ್ಡದೊಡ್ಡ ಅಧಿಕಾರಿಗಳಿಗೆ ಹೋಗದೆ ಇತರ ಸಣ್ಣ ಅಧಿಕಾರಿಗಳೇ ತಂತಮ್ಮ ಆಫೀಸಿನಲ್ಲಿಯೇ ಕುಳಿತು ಅವರೇ ಎಸ್ಟಿಮೇಟು ತಯಾರು ಮಾಡಬೇಕು. ಆಗಾಗ್ಗೆ ಪುನಃ ಪುನಃ ರಿ-ಎಸ್ಟಿಮೇಟು ಮಾಡುವುದು ತಪ್ಪಬೇಕು. ಅಂಥಾದ್ದನ್ನು ಕೂಡಲೆ ತೆಗೆದುಹಾಕಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಲೋಕೋಪಯೋಗಿ ಖಾತೆ ಎಂದರೆ ವ್ಯವಸಾಯವನ್ನು ಮಾಡತಕ್ಕ ಜನಗಳಿಗೆ ಉಪಯೋಗವನ್ನು ಮಾಡುವಂಥಾ ಖಾತೆ. ಕೆಲವು ಮಾನ್ಯ ಸದಸ್ಯರು ಹೇಳಿದರು, ಈ ಲೋಕೋಪಯೋಗಿ ಖಾತೆ ಈಗ ಲೋಕಕ್ಕೆ ಉಪಯೋಗವಾಗದಂತಹ ಖಾತೆಯಾಗಿದೆ ಎಂದು. ಅದನ್ನು ನಾನು ಒಪ್ಪುವುದಿಲ್ಲ. ಲೋಕೋಪಯೋಗಿ ಖಾತೆ ಸಾಧ್ಯವಾದಮಟ್ಟಿಗೆ ಒಳ್ಳೆಯ ಕೆಲಸಗಳನ್ನು ಮಾಡುತ್ತಿದೆ. ಆದರೆ ಈಗ ಈ ಇಲಾಖೆಗೆ ಲೋಕಕ್ಕೆ ಉಪಯೋಗವಾಗದ ಖಾತೆ ಎಂದು ಕೆಲವು ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆಯೋ ಅದನ್ನು ಹೋಗಲಾಡಿಸಲು ಅಧಿಕಾರಿಗಳು ಮತ್ತು ಅವರ ಮೇಲಿನ ವರಿಷ್ಠರು ಈ ಇಲಾಖೆಯಲ್ಲಿ ಚೆನ್ನಾಗಿ ಕೆಲಸ ನಡೆಯುವಂತೆ ವ್ಯವಸ್ಥೆ ಮಾಡಬೇಕೆಂದು ನಾನು ಭಿನ್ನೈಸುತ್ತೇನೆ.

ಈಗ ನಮ್ಮ ಭಾಗದಲ್ಲಿ ವಿದ್ಯುಚ್ಛಕ್ತಿ ದೀಪವನ್ನು ಒದಗಿಸುವುದಕ್ಕೋಸ್ಕರ ಈಗಾಗಲೇ ಸರ್ವೆ ಆಗಿದೆ. ಆದರೂ ಕೂಡ ಅನೇಕ ಹಳ್ಳಿಗಳಿಗೆ ವಿದ್ಯುಚ್ಛಕ್ತಿ ದೀಪವನ್ನು ಕೊಡದೆ ತಡೆ ಹಿಡಿದಿದ್ದಾರೆ. ಅದನ್ನು ಆದಷ್ಟು ತೀವ್ರವಾಗಿ ಕಾರ್ಯಗತಮಾಡಿಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ನಮ್ಮ ಭಾಗದಲ್ಲಿ, ಕೆಲವು ಸಣ್ಣ ಸಣ್ಣ ನೀರಾವರಿ ಆಗತಕ್ಕ ಪ್ರದೇಶಗಳು ಇವೆ. ಅವುಗಳನ್ನು ಸರ್ಕಾರದವರು ಮಾಡಿಸಿಕೊಟ್ಟರೆ ಆ ಭಾಗದ ಜನಗಳಿಗೆ ಅವು ಬಹಳ ಉಪಯುಕ್ತವಾದುವುಗಳಾಗುತ್ತವೆ. ಆ ಕೆಲಸಗಳನ್ನು ಆದಷ್ಟು ತೀವ್ರವಾಗಿ ಮಾಡಿಸಿಕೊಡಬೇಕೆಂದು ನಾನು ಸರ್ಕಾರದವರ ನಜರಿಗೆ ತರಬಯಸುತ್ತೇನೆ.

ನಾನು ಇನ್ನೊಂದು ವಿನಂತಿ ಮಾಡಿಕೊಳ್ಳುವುದೇನೆಂದರೆ ಹಳೆಯ ಮೈಸೂರು ಮತ್ತು ಹೊಸ ಮೈಸೂರು ಎನ್ನುವ ಭಾವನೆಯನ್ನು ಆದಷ್ಟು ಕಡಮೆ ಮಾಡಿ, ಎಲ್ಲರೂ ಒಂದೇ ಪ್ರಾಂತದವರು ಎನ್ನುವಂಥಾ ಭಾವನೆಯನ್ನು ಇಟ್ಟುಕೊಳ್ಳಬೇಕು. ಉತ್ತರ ಕರ್ಣಾಟಕದವರು ಮತ್ತು ಹಳೆಯ ಮೈಸೂರಿನವರು

(ಶ್ರೀ ಎಫ್. ಎಂ. ಹಸಬಿ)

ಎನ್ನುವಂಥಾ ಭಾವನೆಯನ್ನು ಯಾರೂ ಇಟ್ಟುಕೊಳ್ಳಬಾರದು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ನಾವೆಲ್ಲರೂ ಒಟ್ಟಾರೆ ಕೂಡಿ ಒಂದು ಮೈಸೂರು ರಾಜ್ಯ ಆಗಿದೆ. ನಾವೆಲ್ಲರೂ ಕೂಡ ಒಂದೇ ಮನಸ್ಸುಳ್ಳವರಾಗಿ ಇಡೀ ರಾಜ್ಯದ ಪ್ರಗತಿಯಾಗುವ ಹಾಗೆ ಮಾಡಬೇಕು. ಆ ರೀತಿ ತಾವೆಲ್ಲರೂ ಸಹಕಾರ ಮಾಡಬೇಕೆಂದು ಹೇಳಿ, ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

4-30 P.M.

[Sri N. O. SAMAJI (Belgaum II).—Spoke in Marathi].

ಶ್ರೀ ಬಿ. ಜೆ. ಲಿಂಗೇಗೌಡ (ಚನ್ನಪಟ್ಟಣ).—ಮಾನ್ಯ ಅಧ್ಯಕ್ಷರೆ, ಲೋಕೋಪಯೋಗಿ ಇಲಾಖೆಯ ಬೇಡಿಕೆಯ ಮೇಲೆ ಕೆಲವು ಮಾತುಗಳನ್ನಾಡಲು ನನಗೆ ಅವಕಾಶ ಕೊಟ್ಟಿರುವುದಕ್ಕಾಗಿ ತಮಗೆ ನನ್ನ ವಂದನೆಗಳನ್ನರ್ಪಿಸುತ್ತೇನೆ. ಈ ಲೋಕೋಪಯೋಗಿ ಶಾಖೆಯ ವಿಚಾರದಲ್ಲಿ ನಮ್ಮ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಅನೇಕ ಆಪಾದನೆಗಳನ್ನು ಮಾಡಿದ್ದಾರೆ. ಅವರು ಮಾಡಿದ ಆಪಾದನೆಗಳು ತುಂಬಾ ಉತ್ಪ್ರೇಕ್ಷೆಯಿಂದ ಕೂಡಿವೆಯೆಂದು ನಾನು ಹೇಳುತ್ತೇನೆ. ಈ ಶಾಖೆ ಲಂಚದ ಅಧಿದೇವತೆ, ಸಾರ್ವಜನಿಕ ಹಣವನ್ನು ಪೋಲು ಮಾಡುವ ಸಂಸ್ಥೆ, ಇತ್ಯಾದಿಯಾಗಿ ಹೇಳಿದ್ದಾರೆ. ಆದರೆ ನಾನು ವಿರೋಧ ಪಕ್ಷದವರಲ್ಲಿ ಒಂದು ಪ್ರಾರ್ಥನೆ ಮಾಡುತ್ತೇನೆ. ಅವರು ನಿಜವಾದ ವಿಷಯಗಳನ್ನು ತಿಳಿದುಕೊಂಡು ಸಭೆಯ ಮುಂದಿಟ್ಟರೆ ಬಹುಶಃ ದೇಶಕ್ಕೆ ಹೆಚ್ಚು ಉಪಕಾರ ಮಾಡಿದ ಹಾಗಾಗುತ್ತದೆಂದು ಹೇಳುತ್ತೇನೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಹಾಗಿದ್ದರೆ ನಾವು ಹೇಳಿದುದರಲ್ಲಿ ಸುಳ್ಳು ಯಾವುದೆಂದು ಎರಡು ಉದಾಹರಣೆ ಹೇಳಿ.

ಶ್ರೀ ಬಿ. ಜೆ. ಲಿಂಗೇಗೌಡ.—ಅವರೆಲ್ಲರೂ ಮಾತನಾಡುವಾಗ ನಾವು ಯಾರೂ ಮಧ್ಯೇ ಹೆಚ್ಚು ಮಾತಾಡಿಲ್ಲ. ಆದುದರಿಂದ ನಾನು ಮಾತನಾಡುವಾಗ ಅಡ್ಡಿ ಮಾಡುವುದು ಸರಿಯಲ್ಲವೆಂದು ಹೇಳುತ್ತೇನೆ.

ಲಂಚದ ವಿಷಯದಲ್ಲಿ ಹೇಳುತ್ತಾ ಕೆಲವು ಸದಸ್ಯರು ಈ ಒಂದೇ ಇಲಾಖೆಯಲ್ಲಿ ಲಂಚವಿದೆ ಎನ್ನುವ ಹಾಗೆ ಹೇಳಿದ್ದಾರೆ. ಬೇರೆ ಇಲಾಖೆಗಳಲ್ಲಿ ಅಲ್ಪ ಸ್ವಲ್ಪ ಲಂಚ ಇರುವ ಹಾಗೆಯೇ ಈ ಲೋಕೋಪಯೋಗಿ ಇಲಾಖೆಯಲ್ಲಿಯೂ ಇದೆ. ಇದರಲ್ಲಿ ಅನುಮಾನವೇನೂ ಇಲ್ಲ. ಆದರೆ ಈ ಇಲಾಖೆ ಒಂದರಲ್ಲಿಯೇ ಮಾತ್ರ ಲಂಚವಿದೆಯೆನ್ನುವುದನ್ನು ಪ್ರಧಾನವಾಗಿ ಮಾಡಿ ಹೇಳುವುದನ್ನು ನಾನು ಒಪ್ಪುವುದಿಲ್ಲ. ಈ ಇಲಾಖೆಯಲ್ಲಿ ಕೆಲವು ಲೋಪದೋಷಗಳಿವೆ, ಅವುಗಳನ್ನು ಸರಿಪಡಿಸಿಕೊಳ್ಳುವುದು ಈ ಶಾಖೆಯವರ ಕರ್ತವ್ಯ. ಲೋಕೋಪಯೋಗಿ ಶಾಖೆಯವರು ಮಾಡುತ್ತಿರುವ ಕೆಲಸ ಬಹಳ ವಿಶೇಷತರವಾದುದು ಎಂಬುದನ್ನೊಪ್ಪಬೇಕು. ದೇಶವನ್ನು ಕಟ್ಟುವುದರಲ್ಲಿ ಈ ಇಲಾಖೆ ಪ್ರಾಮುಖ್ಯವಾದ ಪಾತ್ರವನ್ನು ವಹಿಸಿದೆ. ನಮ್ಮ ದೇಶ ಮುಂದುವರಿಯುವುದಕ್ಕೆ ಮತ್ತು ನಮ್ಮ ದೇಶದ ಸಂಪತ್ತನ್ನು ಅಭಿವೃದ್ಧಿಗಳಿಸಿಕೊಳ್ಳಲು ಇಂಜಿನಿಯರುಗಳ ಸೇವೆ ಬಹಳ ಸಹಾಯ ಮಾಡಿದೆ. ಇಂತಹವರ ವಿಷಯದಲ್ಲಿ ಲಘುವಾಗಿ ಮಾತನಾಡುವುದು ಸರಿಯಲ್ಲವೆಂದು ನಾನು ಹೇಳುತ್ತೇನೆ.

ಶ್ರೀ ಎಚ್. ಆರ್. ಕೇಶವಮೂರ್ತಿ (ಗಂಡಸಿ).—ಎಲ್ಲ ಇಂಜಿನಿಯರುಗಳನ್ನೂ ಯಾರೂ ಬಯ್ಯುವುದಿಲ್ಲ, ಲಂಚ ತೆಗೆದುಕೊಳ್ಳುವವರನ್ನು ಮಾತ್ರ ಬಯ್ಯುತ್ತಾರೆ.

ಶ್ರೀ ಬಿ. ಜೆ. ಲಿಂಗೇಗೌಡ.—ಲಂಚ ತೆಗೆದುಕೊಳ್ಳುವವರನ್ನು ನಮ್ಮ ಸರ್ಕಾರದವರು ಹಿಡಿದು ಉಗ್ರ ಶಿಕ್ಷೆ ವಿಧಿಸುತ್ತಾರೆಂಬುದು ನನ್ನ ನಂಬಿಕೆ.

ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಸಿಬ್ಬಂದಿ ಬಹಳ ಜಾಸ್ತಿ ಇವೆ; ಚೀಫ್ ಇಂಜಿನಿಯರುಗಳು, ಸೂಪರಿಂಟೆಂಡಿಂಗ್ ಇಂಜಿನಿಯರುಗಳು, ಎಗ್ಸಿಕ್ಯೂಟಿವ್ ಇಂಜಿನಿಯರುಗಳು, ಅಸಿಸ್ಟೆಂಟ್ ಇಂಜಿನಿಯರುಗಳು ಹೆಚ್ಚಾಗಿದ್ದಾರೆಂದು ಹೇಳಿದರು. ಇದನ್ನು ನಾನು ಒಪ್ಪುವುದಿಲ್ಲ. ಈಗ ದೇಶದಲ್ಲಿ ಅನೇಕ ಅಭಿವೃದ್ಧಿಕಾರ್ಯಗಳು ನಡೆಯುತ್ತಿವೆ, ಈ ಕಾರ್ಯಗಳ ಮೇಲ್ವಿಚಾರಣೆಯನ್ನು ಸರಿಯಾದ ರೀತಿಯಲ್ಲಿ ನೋಡಿಕೊಳ್ಳಬೇಕಾದರೆ ಜವಾಬ್ದಾರಿಯುತ ಉನ್ನತ ಅಧಿಕಾರಿಗಳು ಇರಬೇಕಾದುದು ಅವಶ್ಯಕ. ಆದರೆ ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒಂದು ಸಲಹೆಯನ್ನು ಕೊಡಲ್ಪಿಸುತ್ತೇನೆ. ಪಬ್ಲಿಕ್ ವರ್ಕ್ಸ್ ಇಲಾಖೆಯ ಅಧಿಕಾರಿಗಳು ಮಾಡಬೇಕಾಗಿರುವ ಕೆಲಸಗಳನ್ನು ಬೇರೆ ಬೇರೆ ಇಲಾಖೆಗಳಿಗೇ ವಹಿಸಿದ್ದಾರೆ. ಉದಾಹರಣೆಗಾಗಿ ನ್ಯಾಷನಲ್ ಎಕ್ಸ್‌ಟೆನ್ಷನ್ ಸ್ಕೀಮ್, ಮಿಲ್ಕ್ ಸಪ್ಲೈ ಸ್ಕೀಮ್, ಸಹಕಾರ ಇಲಾಖೆ ಇತ್ಯಾದಿ ಇಲಾಖೆಗಳ ಸಂಬಂಧಪಟ್ಟ P.W.D. ಕೆಲಸಗಳನ್ನು ಆಯಾಯ ಇಲಾಖೆಗಳಿಗೆ ವಹಿಸಿಕೊಟ್ಟು ಇಂಜಿನಿಯರುಗಳ ಸೇವೆಯನ್ನು ಅವರಿಗೆ ಎರವಲಾಗಿ ಕೊಟ್ಟು ಕೆಲಸ ಕಾರ್ಯಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವ ಏರ್ಪಾಡು ಮಾಡಿದ್ದೀರಿ. ಇದು ನನ್ನ ಮನಸ್ಸಿಗೆ ಹಿಡಿಸಲಿಲ್ಲ. ಒಂದೊಂದು ತಾಲ್ಲೂಕಿಗೆ ಒಬ್ಬೊಬ್ಬರು ಅಸಿಸ್ಟೆಂಟ್ ಇಂಜಿನಿಯರುಗಳಿರುವುದರಿಂದ ಬೇರೆ ಬೇರೆ ಇಲಾಖೆಗಳಿಗೆ ಸಂಬಂಧಪಟ್ಟ ಕೆಲಸಕಾರ್ಯಗಳನ್ನೂ ನೋಡಿಕೊಳ್ಳುವುದು ಬಹಳ ಸುಲಭ ಮತ್ತು ವೆಚ್ಚವನ್ನೂ ಸಹ ಉಳಿತಾಯ ಮಾಡಬಹುದು. ಅಸಿಸ್ಟೆಂಟ್ ಇಂಜಿನಿಯರುಗಳಿಗಿಂತ ಕಡಮೆ ದರ್ಜೆಯ ಅಧಿಕಾರಿಗಳನ್ನು ಆ ಇಲಾಖೆಗಳಿಗೆ ಅವಶ್ಯಕತೆ ಇದ್ದರೆ ನೇಮಕ ಮಾಡಿಕೊಳ್ಳಲು ಒಪ್ಪಬಹುದು ; ಆದರೆ ಅಸಿಸ್ಟೆಂಟ್ ಇಂಜಿನಿಯರುಗಳು ಮತ್ತು ಅವರ ಮೇಲ್ಪಟ್ಟ ಅಧಿಕಾರಿಗಳೂ ಬೇರೆ ಇಲಾಖೆಗಳಿಗೆ ಸಂಬಂಧಪಟ್ಟ ಕೆಲಸಗಳನ್ನೂ ಕೂಡ ಮೇಲ್ವಿಚಾರಣೆ ನೋಡಿಕೊಳ್ಳುವುದರಿಂದ ಕೆಲಸದಲ್ಲೂ ಸಹ ಯಾವ ಮೋಸವೂ ಇರುವುದಿಲ್ಲ. ಈ ಸಲಹೆಯನ್ನು ಸರ್ಕಾರದವರು ಪರಿಶೀಲನೆ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇಷ್ಟು ಹೇಳಿದ ಮೇಲೆ ಮೈನರ್ ನೀರಾವರಿ ಯೋಜನೆಯ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಮೈನರ್ ನೀರಾವರಿ ಯೋಜನೆಯ ಕೆಲಸಕಾರ್ಯಗಳನ್ನು ಪರಿಶೀಲಿಸಲು ಸರ್ಕಾರವು ಲೋಕೋಪಯೋಗಿ ಇಲಾಖೆಯಲ್ಲಿಯೇ ಪ್ರತ್ಯೇಕ ಶಾಖೆಯನ್ನು ಏರ್ಪಡಿಸಿದ್ದಾರೆ. ಶಾಖೆಯವರು ಅನೇಕ ಕೆಲಸಗಳನ್ನು ಪರಿಶೀಲನೆಮಾಡಿ, ಅವುಗಳಿಗೆ ಪ್ಲಾನ್ ಮತ್ತು ಅಂದಾಜುಗಳನ್ನು ಮಾಡಿ ಮೇಲ್ಪಟ್ಟ ಅಧಿಕಾರಿಗಳಿಗೆ ಕಳುಹಿಸಿದ್ದಾರೆ. ಆದರೆ ಹಣವಿಲ್ಲವೆಂದು ಅನೇಕ ಕೆಲಸಗಳನ್ನು ವಾಪಸ್ಸು ಮಾಡಿದ್ದಾರೆ. ಇದರಿಂದ ಬಡಜನತೆಗೆ ತುಂಬಾ

ಅನ್ಯಾಯವಾಗಿದೆ. ದೇಶದಲ್ಲ ದೊಡ್ಡ ಪ್ರಮಾಣದ ನೀರಾವರಿ ಕೆಲಸಗಳನ್ನು ಕೈಗೊಳ್ಳಬೇಕಾದುದು ನ್ಯಾಯ ಮತ್ತು ಅವಶ್ಯಕ. ಹಣ ಹೆಚ್ಚು ಹೆಚ್ಚು ಒದಗಿಸಿಕೊಂಡು ದೊಡ್ಡ ಪ್ರಮಾಣದ ಯೋಜನೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಆದರೆ ಮೈನರ್ ನೀರಾವರಿಗೆ ಸಂಬಂಧಪಟ್ಟ ಸಣ್ಣ ಸಣ್ಣ ಕೆಲಸ ಕಾರ್ಯಗಳನ್ನು ತ್ವರಿತವಾಗಿ ಮಾಡಿಸಬೇಕು. ಹೀಗೆ ಮಾಡದಿದ್ದರೆ ಹಳ್ಳಿಯ ಜನರಿಂದ ಸರ್ಕಾರಕ್ಕೆ ಬಹಳ ಆಕ್ಷೇಪಣೆ ಬರುತ್ತದೆ. ಇದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಅಲ್ಲದೆ ಹೇರಳವಾಗಿ ಹಣ ಖರ್ಚು ಮಾಡಿ ಪ್ರತ್ಯೇಕ ಶಾಖೆಯನ್ನೇರ್ಪಡಿಸಿ, ಆ ಸಿಬ್ಬಂದಿ ವರ್ಗದವರಿಂದ ಪ್ಲಾನ್ ಮತ್ತು ಎಸ್ಟಿಮೇಟು ಮಾಡಿಸಿದುದುದೆಲ್ಲವೂ ವ್ಯರ್ಥವಾಗುತ್ತದೆ.

ರಸ್ತೆಗಳ ವಿಚಾರದಲ್ಲಿ ಮಾನ್ಯ ಸದಸ್ಯರುಗಳು ಸೇರಿ ಹೇಳಿದ್ದಾರೆ. Inter-Village Communications ರಸ್ತೆಗಳನ್ನು ಮಾಡಿಸುವುದಕ್ಕೆ ಸುಮಾರು ನಾಲ್ಕು ಕೋಟಿ ರೂಪಾಯಿಗಳಿಂತಲೂ ಹೆಚ್ಚಿಗೆ ಲೋಕೋಪಯೋಗಿ ಇಲಾಖೆಯವರು ಖರ್ಚು ಮಾಡಿದ್ದಾರೆ. ಈಗ ಆ ರಸ್ತೆಗಳನ್ನು ತಾಲ್ಲೂಕು ಬೋರ್ಡಿನವರಿಗೆ ವಹಿಸಿದ್ದೇವೆ. ಅವರು ನೋಡಿಕೊಳ್ಳಲಿ ಎಂದು ಸರ್ಕಾರ ಹೇಳುತ್ತಾರೆ. ಹೀಗೆ ಹೇಳುವಾಗ ತಾಲ್ಲೂಕು ಬೋರ್ಡಿನವರು ಎಷ್ಟು ಮಟ್ಟಿಗೆ ಈ ಕೆಲಸ ಮಾಡಬಹುದು, ಎಷ್ಟು ಹಣ ಅವರಿಗೆ ಒದಗಿಸಿದ್ದಾರೆ ಎಂದು ಸರ್ಕಾರವನ್ನು ನಾನು ಕೇಳುತ್ತೇನೆ. ಅವರಿಗೆ ಸಾಕಷ್ಟು ಹಣವನ್ನು ಕೊಡದೆ ಈ ರಸ್ತೆಗಳ ಮೇಲ್ವಿಚಾರಣೆ ನೋಡಿಕೊಳ್ಳಿ ಎಂದರೆ ಪ್ರಯೋಜನವಿಲ್ಲ. ಸರ್ಕಾರ ಎಂದರೆ, ಪಬ್ಲಿಕ್ ವರ್ಕ್ಸ್ ಇಲಾಖೆ ಬೇರೆ, ತಾಲ್ಲೂಕು ಬೋರ್ಡ್ ಬೇರೆ ಎನ್ನುವ ಭಾವನೆ ನಮ್ಮಲ್ಲಿ ಇರಬಾರದು. ತಾಲ್ಲೂಕು ಬೋರ್ಡಿನಿಂದಲೇ ಕೆಲಸ ಮಾಡಿಸಿದರೂ ನನ್ನ ಅಭ್ಯಂತರವಿಲ್ಲ ; ಆದರೆ ತಾಲ್ಲೂಕು ಬೋರ್ಡ್ ಕೆಲಸ ಮಾಡುವ ರೀತಿ ಅವರಿಗೆ ತಕ್ಕಷ್ಟು ಹಣವನ್ನೊದಗಿಸಬೇಕು. ಹೀಗೆ ಮಾಡದೆ ತಾಲ್ಲೂಕು ಬೋರ್ಡಿನವರೇ ಈ ರಸ್ತೆಗಳನ್ನು ನೋಡಿಕೊಳ್ಳಲಿ ಎಂದರೆ, ನಾಲ್ಕು ಕೋಟಿ ರೂಪಾಯಿ ಖರ್ಚುಮಾಡಿರುವ ಹಣ ವ್ಯರ್ಥವಾಗುತ್ತದೆ. ಇದುವರೆಗೂ ಮಾಡಿರುವ ರಸ್ತೆಗಳಿಗೆ ಜಲ್ಲಿ ಹಾಕಿಸದೇಯಿದ್ದರೆ ಇನ್ನು ಆರು ತಿಂಗಳಲ್ಲಿ ಈ ರಸ್ತೆಗಳನ್ನು ಮಾಡಿದ್ದರೆಂಬುದೇ ಗೊತ್ತಾಗುವುದಿಲ್ಲ. ಈಗಾಗಲೇ ಈ ರಸ್ತೆಗಳಲ್ಲಿ ಕೆಲವು ಎಲ್ಲಿ ಮಾಡಿದ್ದರೆಂಬುದೂ ಗೊತ್ತಾಗುವುದಿಲ್ಲ. ಈ ಎಲ್ಲಾ ವಿಷಯಗಳನ್ನು ಮನದಲ್ಲಿಟ್ಟುಕೊಂಡು P.W.D. ಇಲಾಖೆಯವರು ಮಾಡಿಸಿರುವ ರಸ್ತೆಗಳು ಯೋಗ್ಯವಾಗಿರುವಂತೆ ಏರ್ಪಾಟು ಮಾಡಿಕೊಡಬೇಕೆಂದು ಸರ್ಕಾರವನ್ನು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ನಮ್ಮ ತಾಲ್ಲೂಕಿಗೆ ಸಂಬಂಧಪಟ್ಟ ಒಂದೆರಡು ಪ್ರಾಮುಖ್ಯ ವಿಷಯಗಳನ್ನು ಮಾತ್ರ ಸರ್ಕಾರದ ಗಮನಕ್ಕೆ ತರಬೇಕೆಂದು ಆಶಿಸುತ್ತೇನೆ. ನಮ್ಮ ತಾಲ್ಲೂಕು ಬಹಳ ಜನ ನಿಬಿಡವಾದ ತಾಲ್ಲೂಕು, ಇಡೀ ಮೈಸೂರು ದೇಶದಲ್ಲೇ ಹೆಚ್ಚಿನ ಜನಸಂದ್ರತೆಯಿರುವ ತಾಲ್ಲೂಕು. ಅಲ್ಲಿ ವ್ಯವಸಾಯ ಮಾಡುವ ಜಮೀನು ಬಹಳ ಕಡಮೆಯಿದೆ. ನೀರಾವರಿ ಕೆಲಸಗಳು ಹೆಚ್ಚಾಗಿ ಆಗಬೇಕು. ಹಾಲಿ ಇರುವ ಕಣ್ವಾ ಜಲಾಶಯಕ್ಕೆ ಸಾಕಷ್ಟು ನೀರು ಒದುಗುತ್ತಿಲ್ಲವಾದ ಕಾರಣ ಒಂದು ನೀರು ಸರಬರಾಜು ಯೋಜನೆಯ ಕೆಲಸವನ್ನು ಕೈಗೊಳ್ಳಬೇಕೆಂದು ಸರ್ಕಾರದವರು ಯೋಚಿಸಿದ್ದರು. ಅದು ಮಾರಿಹಳ್ಳದ ಯೋಜನೆ. ಕಣ್ವ ಪ್ರಾಜೆಕ್ಟಿಗೆ ಈ ಮಾರಿ ಹಳ್ಳದಿಂದ ನೀರನ್ನೊದಗಿಸಲು ಅಂದಾಜು ಮತ್ತು ಪ್ಲಾನೂ ಸಹ ತಯಾರಾಗಿದ್ದುವು. ಆದರೆ ಅರ್ಕಾವತಿಯಿಂದ ಬೆಂಗಳೂರಿಗೆ ನೀರನ್ನು ಒದಗಿಸಲು ಸರ್ಕಾರವು ತೀವ್ರವಾಗಿ ಆಲೋಚಿಸುತ್ತಿದ್ದುದರಿಂದ ಈ ಯೋಜನೆಯನ್ನು ಕಾರ್ಯಗತಮಾಡಲು ಸಾಧ್ಯವಾಗಿಲ್ಲದಿದ್ದುದು ನಮಗೆ ಗೊತ್ತಿದೆ. ಇತ್ತೀಚೆಗೆ ಒಂದು ಅವಕಾಶ ದೊರತಿದೆ. ನಮ್ಮ ಸರ್ಕಾರದವರು ಬೆಂಗಳೂರಿಗೆ ನೀರನ್ನೊದಗಿಸಲು ಈಗ ಕಾವೇರಿ ಯೋಜನೆಯನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದಾರೆ. ಇದಕ್ಕೆ ದೇಶದ ಜನರೆಲ್ಲಾ ಒಪ್ಪಿಕೊಂಡಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ನಿಜಲಿಂಗಪ್ಪನವರು ಕಾವೇರಿ ಯೋಜನೆ ಕಾರ್ಯಗತಮಾಡುವುದೆಂದು ಒಳ್ಳೆಯದೆಂದು ಹೇಳಿರುವುದೂ ಅಲ್ಲದೆ ಪಂಡಿತ ಜವಾಹಿರಲಾಲ್ ನೆಹ್ರೂರವರೂ ಸಹ ಬೆಂಬಲ ಕೊಟ್ಟಿದ್ದಾರೆ. ಆದುದರಿಂದ ಈ ಸಂದರ್ಭದಲ್ಲಿ ಮಾರಿ ಹಳ್ಳದ ಯೋಜನೆಯನ್ನು ಕಾರ್ಯಗತಮಾಡಿ ಕಣ್ವ ಜಲಾಶಯಕ್ಕೆ ನೀರನ್ನೊದಗಿಸಿ ಕೊಟ್ಟರೆ ಚನ್ನಪಟ್ಟಣ ತಾಲ್ಲೂಕಿನ ಅನೇಕ ಭಾಗಗಳ ಬಡ ಜನರಿಗೆ ಸಹಾಯ ಮಾಡಿದಂತಾಗುತ್ತದೆ, ಇದಕ್ಕೆ ಹೆಚ್ಚಿಗೆ ಗಮನ ಕೊಡಬೇಕು ಎಂದು ಸರ್ಕಾರವನ್ನು ಕಳಕಳಿಯಿಂದ ಪ್ರಾರ್ಥಿಸುತ್ತೇನೆ. ನಮ್ಮ ತಾಲ್ಲೂಕಿನ ಬಹು ಭಾಗಗಳ ಜನತೆಗೆ ಅನುಕೂಲವಾಗುವ ಇನ್ನೊಂದು ಭಾರೀ ನೀರಾವರಿ ಯೋಜನೆ ಅಂದರೆ ಮದ್ದೂರು ತಾಲ್ಲೂಕಿನಲ್ಲಿ ಹರಿಯುವ ಷಿಂಷಾ ನದಿಯ ಎಡಭಾಗದಲ್ಲಿ ಒಂದು ಪಿಕಪ್ ಕಟ್ಟಿಸಿ ಕೆಸ್ತೂರು-ದುಂಡನಹಳ್ಳಿ-ಗುಡ್ಡೆತಿಮ್ಮಸಂದ್ರ ಮತ್ತು ಗುಡ್ಡೆಹೊಸೂರು ಮಾರ್ಗವಾಗಿ ಕಣ್ವಾ ನಾಲಾಕ್ಕೆ ಹುಲುವಾಡಿ ಬ್ಯಾಡರಹಳ್ಳಿಯ ಮಧ್ಯೇ ಸೇರುವಂತೆಮಾಡಿ ಈ ಕಾಲುವೆಯನ್ನು ಮುದುಗೆರೆ, ಬೆಳಕೆರೆವರೆವಿಗೆ ಮುಂದುವರಿಸಿ ಅಲ್ಲಿ ನಾಲೆಯನ್ನು ಎರಡು ಕಾವಲು ಮಾಡಿ ಮಾರ್ಚನಹಳ್ಳಿ ಮತ್ತು ಕುರಣಗೆರೆ ಬ್ರಾಂಚುಗಳನ್ನಾಗಿಮಾಡಿ ಮಾರ್ಚನಹಳ್ಳಿ ಬ್ರಾಂಚ್ ನಾಲಾವನ್ನು ಮಾರ್ಚನಹಳ್ಳಿ-ಕುಕ್ಕೂರುದೊಡ್ಡಿ-ಅಂಕುಶನಹಳ್ಳಿ-ಕೃಷ್ಣಾಪುರ-ಗರಕಹಳ್ಳಿಯವರೆಗೆ ಮುಂದುವರಿಸುವುದು ಮತ್ತು ಕೂರಣಗೆರೆ ಬ್ರಾಂಚ್ ನಾಲಾವನ್ನು ಗೋವಿಂದಹಳ್ಳಿ, ಬೆಳಕೆರೆ, ಕುರಣಗೆರೆ, ಚಕ್ಕೆರೆ, ಚಕ್ಲೂರು-ತೂಬಿನಕೆರೆ ಅಗ್ರಹಾರವಳಗೆರಹಳ್ಳಿ ಮತ್ತು ಸುಳ್ಳೇರೆಯ ಕೆರೆವರೆಗೆ ಮುಂದುವರಿಸುವುದು. ಈ ಯೋಜನೆಯನ್ನು ಕೂಡಲೇ ಲೋಕೋಪಯೋಗಿ ಇಲಾಖಾ ಇಂಜನಿಯರುಗಳು ಸರ್ವೆಮಾಡಿ ಸರ್ಕಾರದವರ ಮುಂದೆ ಇಡಲು ಆಜ್ಞೆ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಸ್ವಾಮಿ, ನಮ್ಮ ಚೆನ್ನಪಟ್ಟಣ ತಾಲ್ಲೂಕಿಗೆ ಬಡ್ಜೆಟ್ಟಿನಲ್ಲಿ ಹಣವನ್ನು ಎಷ್ಟು ಒದಗಿಸಿದ್ದಾರೆಂದು ನೋಡಿದರೆ "Construction of new tanks" ಎಂಬ ಬಾಬಿನ ಕೆಳಗೆ ನಮ್ಮ ತಾಲ್ಲೂಕಿಗೆ ಸಂಬಂಧಪಟ್ಟ ಹಾಗೆ ಒಂದೇ ಒಂದು ಕೆರೆಗೆ ಹಣ ಒದಗಿಸಿದ್ದಾರೆ. ಅದು ದಶವಾರ ಕೆರೆ ಕೆಲಸ. ಇದಕ್ಕೆ ಬಡ್ಜೆಟ್ಟಿನಲ್ಲಿ ಸುಮಾರು ಹತ್ತು ವರ್ಷಗಳಿಂದ ಒಂದೇ ಸಮನೆ ಹಣ ಒದಗಿಸುತ್ತಿದ್ದರೂ ಕೆಲಸ ಮಾತ್ರ ಇನ್ನೂ ಪ್ರಾರಂಭಿಸಿಲ್ಲ. ಇದು ಒಂದು ಸರ್ಕಾರದ ಲೋಪವೆಂದು ಹೇಳಿದರೆ ತಪ್ಪಾಗಲಾರದು. ಒಬ್ಬಿಬ್ಬರು ಜಮೀನು ಮುಳುಗಡೆಯಾಗುತ್ತದೆಂದು ತಕ್ಕಾರ ಅಭಿಪ್ರಾಯವನ್ನು ಕೂಡ ಸರ್ಕಾರ ಗಮನಿಸದೆ ಬೇರೆ ಸ್ಥಳ ಆರಿಸಲು ಯೋಚಿಸುತ್ತಿರುವುದು ಶೋಚನೀಯವೆಂದು ಹೇಳದೆ ವಿಧಿಯಿಲ್ಲ. ಈ ವಿಷಯದಲ್ಲಿ ನಮ್ಮ ಘನ ಸರ್ಕಾರದವರಿಗೆ ಅನೇಕ ವಿವರಗಳನ್ನು ತಿಳಿಸಿ

(ಶ್ರೀ ಬಿ. ಜೆ. ಲಿಂಗೇಗೌಡ)

ದ್ದೇನೆ. ಈಗಲಾದರೂ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ನ್ಯಾಯ ರೀತಿಯಲ್ಲಿ ಈ ಸಮಸ್ಯೆಯನ್ನು ಬಗೆಹರಿಸುತ್ತಾರೆಂದು ನಂಬಿದ್ದೇನೆ. ಈ ವಿಚಾರ ದಲ್ಲಿ ಶೀಘ್ರ ಕಾರ್ಯಕ್ರಮವನ್ನು ತೆಗೆದುಕೊಳ್ಳ ಬೇಕೆಂದು ಅವರನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ರೆಸ್ಟೋರೇಷನ್ ಆಫ್ ಟ್ಯಾಂಕ್ಸ್ ಬಾಬಿನ ಕೆಳಗೆ ನಮ್ಮ ತಾಲ್ಲೂಕಿಗೆ ಸಂಬಂಧಪಟ್ಟ ಬಡ್ಜೆಟ್ಟಿನಲ್ಲಿ ಕೇವಲ ಎರಡು ಕೆರೆಗಳಿಗೆ ಮಾತ್ರ ಹಣವನ್ನು ಒದಗಿಸಿದ್ದಾರೆ. ಅನೇಕ ಕೆರೆಗಳು ಒಡೆದು ಈ ದಿವಸ ವ್ಯವಸಾಯ ಮಾಡುವುದಕ್ಕೆ ನೀರು ಒದಗಿಸಲು ಸಾಧ್ಯವಾಗುತ್ತಿಲ್ಲ. ಅನೇಕ ಕೆರೆಗಳಿಗೆ ಎಸ್ಟಿಮೇಟ್, ಪ್ಲಾನ್ ಆಗಿದ್ದರೂ ಕೂಡ ಬಡ್ಜೆಟ್ಟಿನಲ್ಲಿ ಹಣ ಒದಗಿಸಿಲ್ಲ. ಈ ಬಾಬಿಗೆ ಹಣ ಒದಗಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಸ್ವಾಮಿ, ಕಾಲಾವಕಾಶವಿಲ್ಲದಿರುವದರಿಂದ, ಇಲ್ಲಿಗೆ ನನ್ನ ಮಾತುಗಳನ್ನು ಮುಕ್ತಾಯಮಾಡಿ ಸರ್ಕಾರದವರು ಸಭೆಯ ಮುಂದೆ ಮಂಡಿಸಿರುವ ಬೇಡಿಕೆಗಳಿಗೆ ನನ್ನ ಪೂರ್ಣ ಬೆಂಬಲವನ್ನು ನೀಡುತ್ತೇನೆ.

†ಶ್ರೀ ಅಂದಾನಯ್ಯ (ಕುಣಿಗಲ್).—ಮಾನ್ಯ ಸಭಾಧ್ಯಕ್ಷರೇ, ಈಗಾಗಲೆ ನನ್ನ ಸ್ನೇಹಿತರನೇಕರು ಈ ಲೋಕೋಪಯೋಗಿ ಶಾಖೆಯ ಹಣದ ಬೇಡಿಕೆಯ ಮೇಲೆ ಮಾತನಾಡಿ ಅತಿ ಅಮೂಲ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆ. ನಾನೂ ಸಹ ನನಗೆ ತಿಳಿದಂಥ ಒಂದೆರಡು ತಿಳಿವಳಿಕೆಗಳನ್ನು ಕೊಡಲು ಬಯಸುತ್ತೇನೆ. ತಮ್ಮೆಲ್ಲರಿಗೂ ತಿಳಿದ ಹಾಗೆ ನಮ್ಮ ದೇಶ ರೈತರ ದೇಶ. ನೂರಕ್ಕೆ 70–80 ಜನ ವ್ಯವಸಾಯವನ್ನವಲಂಬಿಸಿ ಜೀವನ ಮಾಡುತ್ತಿರುವ ಈ ದೇಶದಲ್ಲಿ ಆಹಾರದ ಕೊರತೆಯನ್ನು ನೀಗಿಸಲು ಬಹಳ ಕಷ್ಟವಾಗಿದೆ. ಆಹಾರದ ಕೊರತೆ ನಮ್ಮ ದೇಶದಲ್ಲಿ ಇನ್ನೂ ಇದೆ. ಈ ಕೊರತೆಯನ್ನು ಹೋಗಲಾಡಿಸಲು ಸಾಧ್ಯವಾದ ಮಟ್ಟಿಗೂ ನಾವು ರೈತಾಪಿ ಜನರಿಗೆ ನೀರಿನ ಸೌಲಭ್ಯ ಕಲ್ಪಿಸಿಕೊಡಬೇಕು. ಹೆಚ್ಚು ಹೆಚ್ಚಾಗಿ ಸಣ್ಣ ಸಣ್ಣ ಕೆರೆ ಕಟ್ಟೆ ಕಟ್ಟಿಸುವುದು ಮತ್ತು ಹೂಳಿನಿಂದ ತುಂಬಿರುವ ಕೆರೆಗಳಲ್ಲಿ ಹೂಳನ್ನು ತೆಗೆಸುವುದು, ಉತಾವಣಿ ಮಾಡುವುದು ಮುಂತಾದ ಕೆಲಸಗಳಿಗೆ ಹೆಚ್ಚು ಹಣ ಖರ್ಚು ಮಾಡಬೇಕೆಂದು ಮನವಿ ಮಾಡುತ್ತೇನೆ.

ಇನ್ನು ಸಂಚಾರ ಮಾರ್ಗ. ಇವುಗಳಲ್ಲಿ ಅನೇಕ ತರಹ ಇದೆ. ಸರ್ಕಾರದವರು ಬೇಕಾದಷ್ಟು ಹಣ ಇದಕ್ಕೆ ಖರ್ಚು ಮಾಡಿದ್ದಾರೆ. ಆದರೆ ರಸ್ತೆಗಳಲ್ಲಿ ಆವಶ್ಯಕವಾಗಿ ಬೇಕಾದ ಕಾಸ್‌ವೇ, ಕಲ್‌ವರ್ಟ್ ಮುಂತಾದುವನ್ನು ನಿರ್ಮಿಸದಿರುವುದರಿಂದ ಮಾಡಿರುವ ರಸ್ತೆಗಳು ಸಂಚಾರಕ್ಕೆ ಯೋಗ್ಯವಾಗಿಲ್ಲ. ಆದುದರಿಂದ ಸರ್ಕಾರ ಹಣ ಖರ್ಚುಮಾಡುವಾಗ ವಿಶಾಲ ದೃಷ್ಟಿಯಿಂದ, ದೇಶದ ಹಿತದೃಷ್ಟಿಯಿಂದ ಹಳ್ಳಿಗಾಡಿನ ಜನರಿಗೆ ಅನುಕೂಲವಾಗುವಂತೆ, ಅದರ ಫಲ ದೊರೆಯಬೇಕೆಂಬ ಘನೋದ್ದೇಶದಿಂದ ಕೊಡಬೇಕೆಂದು ಒತ್ತಾಯಮಾಡಿ ಹೇಳುತ್ತೇನೆ. ಈಗ ನಿರ್ಮಿಸಿರುವ ಸಂಚಾರ ಮಾರ್ಗಗಳು 8-9 ವರ್ಷಗಳಿಂದ ಯಾವ ಕೆಲಸಕ್ಕೂ ಬಾರದಂತಾಗಿವೆ. ಸಾಧ್ಯವಾದಷ್ಟು ಬೇಗ ಸರ್ಕಾರ ಸಂಚಾರ ಮಾರ್ಗಕ್ಕೆ ಬೇಕಾದ ಕಾಸ್‌ವೇ, ಕಲ್‌ವರ್ಟ್ ಕಟ್ಟಿಸಿ ರೈತರಿಗೆ ಹೆಚ್ಚು ಅನುಕೂಲವಾಗುವ ಹಾಗೆ ಮಾಡಬೇಕೆಂದು ಬೇಡುತ್ತೇನೆ.

ಸಾಕಾದಷ್ಟು ಬೆಳೆ ಬೆಳೆಯಬೇಕೆಂದು ಸರ್ಕಾರದವರು ಹೇಳುವಾಗ ಕೋಳಿ ಸಾಕುವುದಕ್ಕೆ, ತರಕಾರಿ ಮತ್ತು ಹಣ್ಣನ್ನು ಬೆಳೆಯುವುದಕ್ಕೆ ಅವಕಾಶವಾಗುವಂತೆ ರೈತರ ಹಣ ಕಾಸಿನ ಪರಿಸ್ಥಿತಿಯನ್ನು ಉತ್ತಮಪಡಿಸಬೇಕು ಎಂದು ಹೇಳುವಾಗ ಬೆಳೆದ ಪದಾರ್ಥಗಳನ್ನು ಸಾಗಿಸಲು ಸಂಚಾರ ಮಾರ್ಗವನ್ನೊದಗಿಸುವುದು ಸರ್ಕಾರದ ಜವಾಬ್ದಾರಿ. ಈಗಲಾದರೂ ಹಳ್ಳಿಗಾಡಿನ ಜನರು ಕಣ್ಣು ತೆರೆಯುವಂತೆ ಸಾಧ್ಯವಾದಷ್ಟು ಬೇಗ ಸಂಚಾರ ಮಾರ್ಗಕ್ಕೆ ಹೆಚ್ಚು ಹಣ ಖರ್ಚುಮಾಡಿ ಸೌಲಭ್ಯ ಒದಗಿಸಬೇಕೆಂದು ಮತ್ತೊಮ್ಮೆ ಪ್ರಾರ್ಥಿಸುತ್ತೇನೆ.

ಕುಟುಂಬ ಯೋಜನೆಯನ್ನು ರೈತ ವರ್ಗದಲ್ಲಿ ಜಾರಿಗೆ ತರಲು ನಾನು ಒಪ್ಪುವುದಿಲ್ಲ. ಏಕೆಂದರೆ ರೈತರಿಗೆ ಬೇಕಾದಷ್ಟು ಕೆಲಸವಿದೆ. ದನ ಕಾಯುವುದಕ್ಕೆ, ಕುರಿ ಮೇಯಿಸುವುದಕ್ಕೆ, ಬೆಳೆಗೆ ಸಹಾಯ ಮಾಡುವುದಕ್ಕೆ ಜನಬೇಕು. ಇದಕ್ಕೆಲ್ಲಾ ಹೆಚ್ಚಿನ ಜನರ ಸೌಲಭ್ಯ ಬೇಕಾಗಿದೆ. ಹೀಗಿರುವಾಗ ಸರ್ಕಾರ ರೈತರ ಹಣಕಾಸಿನ ಪರಿಸ್ಥಿತಿಯನ್ನು ಒಂದು ಮಟ್ಟಕ್ಕೆ ತಂದು ಆಮೇಲೆ ಕುಟುಂಬ ಯೋಜನೆಯನ್ನು ರೈತವರ್ಗದಲ್ಲಿ ಜಾರಿಗೆ ತರಬೇಕೆಂದು ಸಲಹೆ ಮಾಡುತ್ತೇನೆ.

ಎರಡನೆಯದಾಗಿ ಲೋಕೋಪಯೋಗಿ ಇಲಾಖೆಯ ವಿಚಾರದಲ್ಲಿ ಒಂದೆರಡು ಮಾತನ್ನು ಹೇಳುತ್ತೇನೆ.

5-00 P.M.

ದಿವಂಗತ ಶ್ರೀಮಾನ್ ಎಂ. ವಿಶ್ವೇಶ್ವರಯ್ಯನವರು ನಮ್ಮ ದೇಶದಲ್ಲಿ ಜನಿಸಿ ಇಡೀ ಪ್ರಪಂಚದಲ್ಲೇ ಹೆಸರು ಗಳಿಸಿದ್ದಾರೆ. ಇಂಥ ದೇಶದಲ್ಲಿ ಜನಿಸಿರುವ ಇಂಜಿನಿಯರುಗಳು—ಅವರ ಸಂಖ್ಯೆಗೇನೂ ಕಡಮೆಯಿಲ್ಲ—ಒಳ್ಳೆಯ ಬುದ್ಧಿವಂತರೆಂದರೆ ಅತಿಶಯವಲ್ಲ. ಆದರೆ ಈ ಇಂಜಿನಿಯರುಗಳಲ್ಲಿ ಕೆಲವರಲ್ಲಿ ಪ್ರಾಮಾಣಿಕತೆ ಕಡಮೆಯಾಗಿದೆ. ಒಟ್ಟಿನಲ್ಲಿ ಲೋಕೋಪಯೋಗಿ ಶಾಖೆಯಲ್ಲೇ ಪ್ರಾಮಾಣಿಕತೆ ಕಡಮೆಯಾಗಿದೆಯೆನ್ನಬಹುದು. ಬಡ ಬೋರೇಗೌಡನ ಹಣವನ್ನು ಖರ್ಚು ಮಾಡುವಾಗ, ಅವನ ಋಣವನ್ನು ನಾವು ತೀರಿಸುತ್ತಿದ್ದೇವೆಂಬುದನ್ನು ನೆನಪಿಡಬೇಕು. ನಿಷ್ಠೆಯಿಂದ ಸ್ವಾರ್ಥತೆಯಿಂದ ನಮ್ಮ ಅಧಿಕಾರಿಗಳು ಕೆಲಸ, ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇಡೀ ಇಂಡಿಯಾ ದೇಶದ ಭವಿಷ್ಯವೇ ನಮ್ಮ ಇಂಜಿನಿಯರುಗಳ ಕೈಯಲ್ಲಿದೆ. ಸರ್ಕಾರದ ಆದಾಯದಲ್ಲಿ ಹೆಚ್ಚು ಹಣ ನಮ್ಮ ಇಂಜಿನಿಯರುಗಳೇ ಖರ್ಚು ಮಾಡಬೇಕಾಗಿದೆ. ಹೀಗಿರುವಾಗ ಈ ಅಧಿಕಾರಿಗಳು ಸರ್ಕಾರದ ಕೆಲಸ ಮಾಡುವಾಗ ನಿಷ್ಠೆಯಿಂದ, ನಿಸ್ವಾರ್ಥತೆಯಿಂದ, ದೇಶದ ಹಿತದೃಷ್ಟಿಯಿಂದ ಕೆಲಸ ಮಾಡಲೆಂಬುದೇ ನನ್ನ ಕೋರಿಕೆ.

ಇಂಜಿನಿಯರುಗಳು ಎಷ್ಟೋ ವೇಳೆ ಟೆಕ್ನಿಕಲ್ ಅಭಿಪ್ರಾಯ ಕೊಡಬೇಕಾದ ಸಂದರ್ಭಗಳಿರುತ್ತವೆ. ಅಂಥ ಸಂದರ್ಭಗಳು ಬಂದಾಗ ಯಾವ ರಾಜಕೀಯದ ಗೊಂದಲಕ್ಕೂ ಒಳಗಾಗದೆ ಎಲ್ಲರಿಗೂ ಅನುಕೂಲವಾಗುವ ರೀತಿಯಲ್ಲಿ ತಮ್ಮ ಅಭಿಪ್ರಾಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಾನೇಕೆ ಹೇಳುತ್ತಿದ್ದೇನೆಂದರೆ, ಈಗ ಎಷ್ಟೋ ಜನ ಟೆಕ್ನಿಕಲ್ ಅಭಿಪ್ರಾಯ ಕೊಡುವಾಗ ಎಷ್ಟೋ ಅನ್ಯಾಯಗಳಾಗಿವೆ. ಒಮ್ಮೆ ಜನರು ತಿಳಿದಿದ್ದರು, ಇಂಜಿನಿಯರುಗಳು ದೊಡ್ಡ ದೊಡ್ಡ ಮನುಷ್ಯರುಗಳಾಗಿರುತ್ತಾರೆ, ಅವರು ಹೇಳತಕ್ಕ ಮಾತಿನಲ್ಲಿ ಸತ್ಯವಿದೆ ಎಂದು. ಈಚೀಚೆಗೆ ಇಂಜಿನಿಯರುಗಳಿಗೆ ಕೊಡುವ Technical

opinion ನಲ್ಲಿ ಜನರಿಗೆ ನಂಬಿಕೆ ಕಡಮೆಯಾಗುತ್ತಿದೆ. ಇದಕ್ಕೆ ಕಾರಣ, ಇಂಜಿನಿಯರುಗಳು ರಾಜಕೀಯದ ಪ್ರಭಾವಕ್ಕೆ ಒಳಗಾಗುತ್ತಿರುವುದು. ಇನ್ನು ಮುಂದಾದರೂ, ಯಾವ ರಾಜಕೀಯದ ಒತ್ತಾಯ, ಪ್ರಭಾವಗಳಿಗೂ ಬಳಗಾಗದೆ ಧೈರ್ಯದಿಂದ; ದೇಶದ ಹಿತದೃಷ್ಟಿಯಿಂದ ತಮ್ಮ ಕರ್ತವ್ಯವನ್ನು ನಿರ್ವಹಿಸಬೇಕೆಂದು ಹೇಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಕೆಲವು ಕಾಮಗಾರಿಗಳು ರಾಜಕೀಯ ಗುಂಪುಗಳ ಒತ್ತಾಯಕ್ಕೆ ಸಿಕ್ಕಿಕೊಂಡು ಅಲ್ಲಿನ ರೈತಾಪಿ ಜನರಿಗೆ ತೊಂದರೆಯುಂಟಾಗಿರುವುದನ್ನು ತಮ್ಮ ಗಮನಕ್ಕೆ ನಾನು ತರಬಯಸುತ್ತೇನೆ. ಮಾನ್ಯ ಮಂತ್ರಿಗಳು ಸ್ಥಳಕ್ಕೆ ಬಂದು, ಅಲ್ಲಿನ ಇಂಜಿನಿಯರುಗಳನ್ನು ಕರೆಸಿಕೊಂಡು ತಕ್ಕ ಪರಿಶೀಲನೆ ನಡೆಸಿ ಸೂಕ್ತ ರೀತಿಯಲ್ಲಿ ಆರ್ಡರ್ ಮಾಡಲೆಂದು ನಾನು ಕೇಳಿಕೊಳ್ಳುತ್ತೇನೆ.

ಸರ್ಕಾರ ಇಂದು ಅನೇಕ ಯೋಜನೆಗಳನ್ನು ಕೈಗೊಳ್ಳುತ್ತಿದೆ. ಆದರೆ ಈ ಯೋಜನೆಗಳ ಫಲ ಅಷ್ಟಾಗಿ ಹಳ್ಳಿಗಾಡಿನ ಜನರಿಗೆ ಸಿಕ್ಕುತ್ತಿಲ್ಲ. ನಾವೆಲ್ಲರೂ ಚುನಾವಣಾಕಾಲದಲ್ಲಿ ನಮಗೆ ಓಟು ಕೊಡಿಯೆಂದು ಬೇಡುವಾಗ ಜನರಿಗೆ ನಾನಾ ರೀತಿಯಲ್ಲಿ ಸೌಲಭ್ಯಗಳನ್ನು ಮಾಡಿಸಿಕೊಡುತ್ತೇವೆಂದು ಭಾಷಣಗಳನ್ನು ಮಾಡಿ ಜನರಿಂದ ಓಟುಗಳನ್ನು ಗಳಿಸಿ ಬಂದಿದ್ದೇವೆ. ಅಂಥವರು ಇಲ್ಲಿ ಬಂದು ಸಾಯಂಕಾಲವಾಯಿತೆಂದರೆ $1\frac{1}{2}$ ಅಡಿ ದಪ್ಪದ ಹಾಸಿಗೆಯಲ್ಲಿ ಮಲಗಿ, ಬೆಡ್ ಕಾಫಿ ಕುಡಿದು ಹೋಗುತ್ತಿರುತ್ತೇವೆ. ಸರ್ಕಾರ ಯಾವ ಯೋಜನೆ ಮಾಡಲಿ ಅದರ ಫಲ ರೈತರಿಗೆ ಆಗುತ್ತಿದೆಯೇ ಎಂಬುದನ್ನು ವಿಚಾರಿಸುತ್ತಿಲ್ಲ. ಆದ್ದರಿಂದ ಸಾಮಾನ್ಯ ರೈತನಿಗೆ ಅವನಿಗೆ ಅವಶ್ಯಕವಾದ ಸೌಲಭ್ಯಗಳೆಲ್ಲಾ ಒದಗಿಸಿಕೊಡಬೇಕೆಂದು ಸರ್ಕಾರದವರನ್ನು ಕೇಳಿಕೊಳ್ಳುತ್ತ ನನಗೆ ಈ ಒಂದೆರಡು ಮಾತುಗಳನ್ನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎನ್. ರಾಚಯ್ಯ (ನಂಜನಗೂಡು).—ಸಭಾಪತಿಗಳೇ, ಕಪಿಲಾ ನದಿಗೆ ನಂಜನಗೂಡಿನ ಬಳಿ ಬೆಂಗಳೂರು—ನೀಲಗಿರಿಗೆ ಹೋಗುವ ರಸ್ತೆಗೆ ಇರುವ ಸೇತುವೆ ಸುಮಾರು ನೂರು ವರ್ಷಗಳ ಮೇಲಾಗಿದೆ. ರೈಲು, ಗಾಡಿ, ಬಸ್ಸು, ಜನ ಜಾನುವಾರುಗಳು ತಿರುಗಾಡುತ್ತವೆ. ಇದು ಬಹಳ ಇಕ್ಕಟ್ಟಾಗಿರುತ್ತದೆ. ಇದಕ್ಕೆ 1924 ರಲ್ಲಿ ದೊಡ್ಡ ಪ್ರವಾಹ ಬಂದು ಸೇತುವೆಯ ಮೇಲೆ ನೀರು ಬಿದ್ದು ಅಂದಿನಿಂದ ಇದಕ್ಕೆ ಬೇರೆ ಕಡೆ ಸೇತುವೆ ಕಟ್ಟಿ ಅಂದಾಜಾಗಿ ಈಗ ಮಂಜೂರಾಗಿರುತ್ತದೆ. ಅದನ್ನು ಆದಷ್ಟು ಬೇಗನೆ ಶುರು ಮಾಡಬೇಕೆಂದು ಹೇಳುತ್ತೇನೆ.

ಹಾಗೆಯೇ, ಹುಲ್ಲಹಳ್ಳಿ, ರಾಮಪುರ, ಮಧ್ಯೇ ಸೇತುವೆಗೆ ಅಂದಾಜಾಗಿ ಮಂಜೂರಾಗಿರುತ್ತದೆ. ಅದು ಹೆಗ್ಗಡದೇವನಕೋಟೆ ಹಾಗೂ ಗುಂಡ್ಲುಪೇಟೆ ತಾಲ್ಲೂಕಿನ ಜನ ಮೈಸೂರಿಗೆ ಹೋಗಲು ಬಹಳ ಹತ್ತಿರದ ರಸ್ತೆಯಾಗುತ್ತದೆ. ಆದ್ದರಿಂದ ಅದನ್ನು ಆದಷ್ಟು ಬೇಗ ಪ್ರಾರಂಭಿಸಬೇಕು.

ಅದೇ ರೀತಿ, ಕಪ್ಪಸೋಗೆ ಚಂದ್ರವಾಡಿಯ ಬಳಿ ಒಂದು ಸೇತುವೆ ನುಗು ನದಿಗೆ ಅಂದಾಜಾಗಿ ಮಂಜೂರಾಗಿರುತ್ತದೆ. ಆದರೆ ಈ ಸಾಲಿನಲ್ಲಿ ಹಣ ಒದಗಿಸಿರುವುದಿಲ್ಲ. ಅದನ್ನು ಒದಗಿಸಿ ಕೆಲಸ ಪ್ರಾರಂಭಿಸಬೇಕೆಂದು ಹೇಳುತ್ತೇನೆ.

ಹೆಡೆಯಾಲದ ಬಳಿ ಹರಿಯುತ್ತಿರುವ ಹಳ್ಳಕ್ಕೆ ಅಣೆಕಟ್ಟು ಹಾಕುವುದರಿಂದ ಸುಮಾರು 600 ಎಕರೆ ತರೀ ಪ್ರದೇಶವಿರುತ್ತದೆ. ಇದರಿಂದ ಮಡುವಿನಹಳ್ಳಿ, ಹೊಸವೀಡು, ಹೆಡೆಯಾಲ ಈ ಗ್ರಾಮಗಳಿಗೆ ತರೀ ವ್ಯವಸಾಯಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಈ ಕೆಲಸವನ್ನು ಪ್ರಾರಂಭಿಸಬೇಕು.

ಚಿನ್ನದಗುಡಿ ಹುಡಿ ಬಳಿ ಕೆಲಸ ಪ್ರಾರಂಭಿಸಿ ನುಗು ಹೈಲೆವಲ್ ಛಾನಲ್ ಕೆಲಸವನ್ನು ತ್ವರಿತಗೊಳಿಸಬೇಕು ಮತ್ತು ಸದರಿ ನಾಲಾವನ್ನು ಹಿಂದೆ ಸರ್ವೆ ಮಾಡಿರುವರೀತಿ ಪೂರ್ವಕ್ಕೆ ಒಂದು ಬ್ರಾಂಚ್ ನಾಲಾ ತೆಗೆಯುವುದರಿಂದ ಇನ್ನು ಸಾವಿರ ಎಕರೆ ತರೀಯಾಗುವ ಸಂಭವ ಕಂಡುಬಂದಿರುವುದರಿಂದ ಅದನ್ನು ಸಹ ತೆಗೆದುಕೊಳ್ಳಬೇಕು.

ನುಗು ಜಲಾಶಯದಕಾಲುವೆಯು ಮುಳೂರು, ಆರೂರು, ದುಗ್ಗಹಳ್ಳಿ ಬಳಿ ಬಹಳ ಕಡಿದಾಗಿ ಎಂದರೆ 65 ಅಡಿ ಆಳವಾಗಿರುತ್ತದೆ. ಕಳೆದವರ್ಷ ಲಾರಿ ಅಪಘಾತದಲ್ಲಿ 34 ಜನ ಕೂಲಿಗಾರರು ಆ ಸ್ಥಳದಲ್ಲಿ ಮಡಿದರು. ಅವರಿಗೆ ಇದುವರೆಗೆ ಪರಿಹಾರ ಸಹ ಕೊಟ್ಟಿಲ್ಲ. ಸದರಿ ಪ್ರದೇಶದಲ್ಲಿ ಕಾಲುವೆಯ ಕಡೆ ಕೈಪಿಡಿ ಗೋಡೆ ಅಥವಾ ಗಾರ್ಡ್‌ಸ್ಟೋನ್ ಹಾಕಬೇಕಾಗಿ ವಿನಂತಿ.

ನಂಜನಗೂಡು ಗುಂಡ್ಲುನದಿಗೆ ಉಪ್ಪಿನಹಳ್ಳಿ ಹೊಸೂರು ಬಳಿ ಒಂದು ಕಾಜ್‌ವೆಯನ್ನು ಕಟ್ಟಿಸಬೇಕಾಗಿವಿನಂತಿ.

Sri B. BASAVAIYA (Kollegal).—Point of order, Sir. ಮಾನ್ಯ ಸದಸ್ಯರು ಭಾಷಣ ಮಾಡುವುದಕ್ಕೆ ಬದಲಾಗಿ ಓದುವುದಕ್ಕೆ ಅವಕಾಶ ಇದೆಯೇ?

Sri K. S. SURYANARAYANA RAO (Mysore City).—He is referring to notes.

ಉಪಾಧ್ಯಕ್ಷರು.—ನೀವು ಓದಕೂಡದು. ನೋಟ್ಸನ್ನು ಬೇಕಾದರೆ ಆಗಾಗ್ಗೆ ನೋಡಿಕೊಳ್ಳಬಹುದು; ಆದ್ದರಿಂದ ಓದದೆ ಮಾತನಾಡಿ.

ಶ್ರೀ ಎನ್. ರಾಚಯ್ಯ.—ನಂಜನಗೂಡು ಬಳಿ ಇರುವ ನುಗು ಚಾನಲ್‌ನಲ್ಲಿ ಕೂಡ ಕನ್ನಂಬಾಡಿ ಕಟ್ಟೆಯಂತೆ ಒಂದು ಅಣೆಕಟ್ಟನ್ನು ಬೀರ್‌ಬಾಳುವಿನ ಬಳಿ ಮಾಡಿ ಅಲ್ಲಿನ ರೈತರಿಗೆ ರಾಗಿ, ಜೋಳ ವಗೈರೆ ಖುಷ್ಕಿ ಫಸಲನ್ನು ಬೆಳೆಯಲು ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ. ಇಲ್ಲಿನ ಜನರು ಕಾಂಟ್ರಿಬ್ಯೂಷನ್ ರೇಟನ್ನು ಕೊಡುವುದಕ್ಕೆ ತಯಾರಾಗಿರುತ್ತಾರೆ. ಇದರಿಂದ ಹೆಚ್ಚು ಆಹಾರ ಬೆಳೆಯಲು ಅನುಕೂಲವಾಗುತ್ತದೆ. ಇದನ್ನು ಈ ಸಾಲಿನಲ್ಲೇ ಪ್ರಾರಂಭಿಸಬೇಕಾಗಿ ವಿನಂತಿ. ಮತ್ತೆ ನುಗು ಚಾನಲ್‌ಗೆ ಜಮೀನು ಸೇರಿಕೊಂಡಿರುವವರಿಗೆ ಇನ್ನೂ ಪರಿಹಾರವನ್ನು ಕೊಟ್ಟಿಲ್ಲ. ಸುಮಾರು ಇಪ್ಪತ್ತೆರಡು ಸಾವಿರ ಎಕರೆಗಳಷ್ಟು ಆಗಿದೆ. ನೂರಾರು ಎಕರೆಗಳವರಿಗೂ ಇನ್ನೂ ಪರಿಹಾರ ಕೊಟ್ಟಿಲ್ಲ. ಇವರಿಗೆ ಕೆಲಸಗಳನ್ನು ಕೊಡಲು ಗ್ರಾಂಟನ್ನು ಕೊಡಬೇಕಾಗುತ್ತದೆ. ಈ ವಿಚಾರವನ್ನು ಸರಕಾರದ ಮುಂದಿಟ್ಟಿದ್ದೇನೆ. ಸರಕಾರದವರು ದೇಶದ ಜನತೆಗೆ ಕಲ್ಯಾಣವಾಗುವಂತೆ ಮಾಡುತ್ತಾರೆಂದು ನಂಬುತ್ತೇನೆ. ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಮಾನ್ಯ ಅಧ್ಯಕ್ಷರೇ, ಈಗಾಗಲೇ ಅನೇಕ ಸದಸ್ಯರುಗಳು ಲೋಕೋಪಯೋಗಿ ಬೇಡಿಕೆಗಳ ಬಗ್ಗೆ ಅನೇಕ ವಿಚಾರಗಳಲ್ಲಿ ಟೀಕೆ ಮಾಡಿದ್ದಾರೆ ಈ ಸಾಮಾನ್ಯವಾಗಿ ಇವೊತ್ತಿನ ದಿವಸ ಹೇಳಿರುವಂತೆ ಇಲ್ಲಿ ಸುಮಾರು ಎಪ್ಪತ್ತು ಕೋಟಿಯಷ್ಟು ಬೇಡಿಕೆಗೆ ಈ ಸಭೆಯವರು ಅನುಮತಿ ಕೊಡಬೇಕೆಂದು ನಮ್ಮ ಮುಂದೆ

(ಶ್ರೀ ಕೆ. ಲಕ್ಕಪ್ಪ)

ಸರಕಾರದವರು ಬೇಡಿಕೆಗಳನ್ನಿಟ್ಟಿದ್ದಾರೆ. ಈಗಾಗಲೇ ಅನೇಕ ಸದಸ್ಯರುಗಳು ಲೋಕೋಪಯೋಗಿ ಖಾತೆ ಯಾವ ರೀತಿ ಕೆಲಸ ಮಾಡುತ್ತಿದೆ ಎನ್ನತಕ್ಕ ವಿಚಾರವನ್ನು ಪ್ರಸ್ತಾಪಿಸಿ ಅದರಲ್ಲೂ ಕೂಡ ಬಹಳ ರಚನಾತ್ಮಕವಾಗಿ ಟೀಕೆಗಳನ್ನು ಮಾಡಿದ್ದಾರೆ. ಅದರಲ್ಲೂ ಕೂಡ ನಮ್ಮ ಕಾಂಗ್ರೆಸ್ಸಿನ ಸದಸ್ಯರುಗಳು ಒಳ್ಳೆಯ ಟೀಕೆಗಳನ್ನು ಮಾಡುತ್ತಾ ಲೋಕೋಪಯೋಗಿ ಖಾತೆಗೆ ಹಾಕತಕ್ಕ ಹಣದಿಂದ ಸರಿಯಾಗಿ ನಮ್ಮ ದೇಶದ ಅಭಿವೃದ್ಧಿಯನ್ನು ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ಇವೊತ್ತಿನ ದಿವಸ ಎಲ್ಲಿ ಹಣ ಹೋಗುತ್ತದೆ ಎಂದು ಕೇಳಿದರೆ, ಅದು ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಲೋಕೋಪಯೋಗಿ ಖಾತೆಯಲ್ಲಿ ಹೋಗುತ್ತದೆ. ಇಲ್ಲಿ ಹಣ ಎಲ್ಲಿಂದ ಬರುತ್ತದೆ, ಎಲ್ಲಿಗೆ ಹೋಗುತ್ತದೆ ಎನ್ನುವುದನ್ನು ಯಾರಿಂದಲೂ ಕಂಡುಹಿಡಿಯುವುದಕ್ಕೆ ಸಾಧ್ಯವಿಲ್ಲ.

ಲಂಚಗಳಿಂದಲೇ ನಡೆಯುತ್ತಿರುವ ಲೋಕೋಪಯೋಗಿ ಶಾಖೆಯ ಕೆಲಸಗಳು, ಆಡಳಿತದಲ್ಲಿ ದಕ್ಷತೆ ಇಲ್ಲದೆ ನಡೆಯುತ್ತಿವೆ. ಅನೇಕ ಸದಸ್ಯರು ಹೇಳಿದಂತೆ ಕೋಟ್ಯಂತರ ರೂಪಾಯಿಗಳಷ್ಟು ಹಣವನ್ನು ದೊಡ್ಡ ಯೋಜನೆಗಳಿಗೆ ಹಾಕಿ ಅದು ಕಾರ್ಯರೂಪಕ್ಕೆ ಬರದೇ ತಡವಾಗಿರುವ ನಿದರ್ಶನಗಳನ್ನು ಈ ಸಭೆಯ ಮುಂದೆ ಅನೇಕ ಮಹನೀಯರು ಬಹಳವಾಗಿ ಹೇಳಿದ್ದಾರೆ. ಇವೊತ್ತಿನ ದಿವಸ ಲೋಕೋಪಯೋಗಿ ಶಾಖೆ ಸಣ್ಣ ಸಣ್ಣ ನೀರಾವರಿ ಕೆಲಸಗಳ ಕಡೆಗೂ ಗಮನ ಕೊಡದೇ ಇದೆ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಇದನ್ನು ಏತಕ್ಕೆ ಹೇಳುತ್ತೇನೆ ಎಂದರೆ ನಮ್ಮ ಮೈಸೂರು ದೇಶದಲ್ಲಿ ಹೆಚ್ಚಿನ ನೀರಾವರಿ ಕೆಲಸಗಳಾಗದೆ ನಮ್ಮ ದೇಶ ಬಹಳ ಹಿಂದೆ ಉಳಿದಿದೆ. ನಮ್ಮ ಇತರ ರಾಜ್ಯಗಳೊಡನೆ ಹೋಲಿಸಿದರೆ, ಮೈಸೂರು ದೇಶ ಎರಡನೇ ಹಿಂದುಳಿದ ದೇಶವಾಗಿದೆ ಎನ್ನುವುದು ಅಂಕಿ ಅಂಶಗಳಿಂದ ಗೊತ್ತಾಗುತ್ತದೆ. ನಮ್ಮ ಮೈಸೂರು ದೇಶದಲ್ಲಿ ಮೈನರ್ ಇರಿಗೇಷನ್ನಿನ ಕೆಲಸಗಳು ಮೈಸೂರು ಡಿಸ್ಟ್ರಿಕ್ಟಿನಲ್ಲಿ ಸಣ್ಣ ನೀರಾವರಿ ಕೆಲಸಗಳು ಪ್ರಾರಂಭ ಮಾಡಬೇಕೆಂದಿದ್ದರೂ ಇವೊತ್ತಿನವರೆಗೂ ಸರಕಾರ ಯಾವ ಕೆಲಸವನ್ನೂ ಮಾಡಿಲ್ಲ ಎಂದು ವಿಷಾದದಿಂದ ನಾನು ಹೇಳಬೇಕಾಗಿದೆ.

ಸಣ್ಣ ನೀರಾವರಿ ಕೆಲಸಗಳನ್ನು ಸರಿಯಾಗಿ ಮತ್ತು ಸಮರ್ಪಕವಾಗಿ ಮಾಡದೇ ಇರುವುದರಿಂದ ಅನೇಕ ಡಿಸ್ಟ್ರಿಕ್ಟುಗಳಿಗೆ ಬಹಳ ತೊಂದರೆಯಾಗುತ್ತಿದೆ. ತಾವು ಮಾಡಿರತಕ್ಕ ನೀತಿನಿಯಮಗಳಿಂದಾಗಿ ಒಂದು ಸಣ್ಣ ಕೆರೆ ಕೆಲಸವೂ ಆಗುತ್ತಿಲ್ಲ. ದೇಶದಲ್ಲಿನ ಕೆಲಸಕಾರ್ಯಗಳು ಸರಿಯಾಗಿ ನಡೆಯುತ್ತಿಲ್ಲ. ಅಪ್ಲಿಕೇಷನ್ನು ಕೊಟ್ಟರೆ ವರ್ಷಗಟ್ಟಲೆಯಾದರೂ ಅವುಗಳ ಎಸ್ಟಿಮೇಟುಗಳನ್ನು ತಯಾರು ಮಾಡುವುದಿಲ್ಲ. ಅಳತೆ ಮಾಡುವ ಅನೇಕ ಇಂಜನೀಯರುಗಳು ಒಬ್ಬೊಬ್ಬರು ಒಂದೊಂದು ಒಪಿನಿಯನ್ನನ್ನು ಕಳುಹಿಸುತ್ತಾರೆ. ಯಾವ ಯಾವ ಕೆರೆಗಳ ಕೆಲಸಗಳನ್ನು ಬಡ್ಜೆಟ್ಟಿನಲ್ಲಿ ಸೇರಿಸಿದ್ದಾರೆ ಎಂದು ಹೇಳುವ ಒಂದು ನೀರಾವರಿ ಕೈಪಿಡಿಯನ್ನು ತಯಾರು ಮಾಡಿ ಕಳುಹಿಸಿರುತ್ತಾರೆ. ಅದರಲ್ಲೂ ಕೂಡ ಅನೇಕ ಹೆಸರುಗಳಿರುವುದಿಲ್ಲ. ಹೆಸರುಗಳಿದ್ದರೂ ಅದಕ್ಕೆ ಬಡ್ಜೆಟ್ಟಿಲ್ಲ. ಹೀಗೆ ಕೋಟ್ಯಾಂತರ ರೂಪಾಯಿಗಳಷ್ಟು ಹಣವನ್ನು ಹಾಳುಮಾಡುತ್ತಿದ್ದಾರೆ. ಇದರಿಂದ ದೇಶಕ್ಕೇನು ಸಾಧನೆ ಮಾಡಿದಂತಾಗುತ್ತದೆ? ಸಣ್ಣ ನೀರಾವರಿ ಯೋಜನೆಯನ್ನು ಯಾವ ಡಿಸ್ಟ್ರಿಕ್ಟಿನಲ್ಲಿ ಮಾಡಿದ್ದಾರೆ, ಯಾವ ಯಾವ ಡಿಸ್ಟ್ರಿಕ್ಟುಗಳಲ್ಲಿ ಸಣ್ಣ ಸಣ್ಣ ಕೆರೆಗಳು ಜಾಸ್ತಿ ಇವೆ, ಸಣ್ಣ ಕೆರೆಗಳು ಒಡೆದುಹೋಗಿವೆ, ಎಷ್ಟು ಸಣ್ಣ ಸಣ್ಣ ಕೆರೆಗಳಲ್ಲಿ ಹೂಳನ್ನು ತೆಗೆಯಲಾಗಿದೆ, ಎನ್ನುವಂತಹ ಒಂದು ಪಟ್ಟಿಯನ್ನು ಕಳಿಸಿಕೊಡುವ ಕೆಲಸವನ್ನೂ ಸರ್ಕಾರ ಮಾಡಿಲ್ಲ. ಆ ತರಹದ ಅಂಕಿ ಅಂಶಗಳನ್ನು ಸರಿಯಾದ ರೀತಿಯಲ್ಲಿ ಒದಗಿಸಿಲ್ಲ. ಸಮರ್ಪಕವಾದ ಕೆಲಸವನ್ನು ಸರಕಾರ ಮಾಡುತ್ತಿಲ್ಲ. ಸರಕಾರದವರು ಸಣ್ಣ ನೀರಾವರಿ ಯೋಜನೆಗಳನ್ನು ದೊಡ್ಡ ದೊಡ್ಡದಾಗಿ ಹಾಕಿಕೊಂಡು, ತುಮಕೂರು, ಚಿತ್ರದುರ್ಗ, ಬಳ್ಳಾರಿ, ಇಂತಹ ಡಿಸ್ಟ್ರಿಕ್ಟುಗಳಲ್ಲಿ ಬಹಳ ತ್ವರಿತವಾಗಿ ಕಾರ್ಯಗತ ಮಾಡಬೇಕೆಂದು ಸರಕಾರವನ್ನು ಬೇಡಿಕೊಳ್ಳುತ್ತೇನೆ. ಮತ್ತು ಇವೊತ್ತಿನ ದಿವಸ ಈಗಾಗಲೇ ಅನೇಕ ಸದಸ್ಯರು ಹೇಳಿದ ಹಾಗೆ, ಸಣ್ಣ ಸಣ್ಣ ಕಂಟ್ರಾಕ್ಟರುಗಳು ಇಪ್ಪತ್ತು ನಯಾ ಪೈಸಾಗಳಷ್ಟನ್ನು ರಾಯಲ್ಟಿ ಕೊಡುವ ವಿಚಾರದಲ್ಲಿ ನಿರಾಸೆ ಹೊಂದಿದ್ದಾರೆ. ಸಣ್ಣ ಕಂಟ್ರಾಕ್ಟರುಗಳು ಇಪ್ಪತ್ತು ನಯಾ ಪೈಸಾದಷ್ಟನ್ನು ಕೊಡಬೇಕೆಂದಿರುವುದು ಬಹಳ ಅನ್ಯಾಯ. ಇದನ್ನು ಸರಕಾರ ಶೀಘ್ರವಾಗಿ ಪರಿಶೀಲನೆ ಮಾಡಬೇಕು ಎಂದು ಮತ್ತೊಮ್ಮೆ ಸರಕಾರದಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಕೆಲವು ಕೆರೆಗಳಿಗೆ ಎಸ್ಟೀಮೇಟನ್ನು ಮಾಡುತ್ತಾರೆ. ಕೆಲವು ಕೆರೆಗಳನ್ನು ಪೀಸ್‌ವರ್ಕಿನ ಮೇಲೆ ಕೊಡಬೇಕೆಂದು ಆರ್ಡರು ಮಾಡುತ್ತಾರೆ. ಅದೂ ಕೂಡ ತ್ವರಿತವಾಗಿ ಆಗುತ್ತಿಲ್ಲ. ಲ್ಯಾಂಡು ಅಕ್ವಿಷನ್ನಿನಿಂದಾಗಿ ನಿಧಾನವಾಗುತ್ತಿದೆ. ಆದ್ದರಿಂದ Emergency Section 17ರಲ್ಲಿರುವ ಕ್ಲಾಸನ್ನು ಬದಲಾಯಿಸುವುದೊಳ್ಳೆಯದು. ಈ ವಿಚಾರ ಸರಕಾರದ ಗಮನಕ್ಕೆ ಬಾರದೇ ಇರುವುದು ವಿಷಾದಕರ. ನೂರಾರು ವರ್ಷಗಳಿಂದಲೂ ಕೆರೆಯಾಗಬೇಕು, ಕಟ್ಟೆಗಳನ್ನು ಕಟ್ಟಬೇಕು, ನೀರಾವರಿಯಾಗಬೇಕು ಎಂದು ಹೇಳುತ್ತಲೇ ಇದ್ದಾರೆ. ಆದರೂ ಸರಕಾರದ ಆಡಳಿತದಲ್ಲಿರುವ ಅಧಿಕಾರಿಗಳಿಂದಾಗಿ ಸರಿಯಾಗಿ ಕೆಲಸಗಳಾಗುತ್ತಿಲ್ಲ. ನಮ್ಮ ತುಮಕೂರು ಜಿಲ್ಲೆಯಲ್ಲೂ ಅನೇಕ ಕೆರೆಕಟ್ಟೆಗಳ ಕೆಲಸಗಳು ಲೋಕೋಪಯೋಗಿ ಶಾಖೆಯ ಅಧಿಕಾರಿಗಳು ತ್ವರಿತವಾಗಿ ಗಮನ ಕೊಡದೇ ಇರುವುದರಿಂದ ಹಾಗೇ ನಿಂತಿವೆ. ಹೀಗೆ ನಿಂತಿರುವ ಕೆಲಸಕಾರ್ಯಗಳನ್ನೆಲ್ಲಾ ಪೂರ್ತಿ ಮಾಡಬೇಕೆಂದು ನಾನು ಮತ್ತೊಮ್ಮೆ ಮನವಿಮಾಡಿಕೊಳ್ಳುತ್ತೇನೆ.

ಆಮೇಲೆ ಕಂಟ್ರಾಕ್ಟನ್ನು ಕೊಡುವ ವಿಚಾರದಲ್ಲಿ ಯಾವುದಾದರೂ ನೀತಿ, ನಿಯಮವನ್ನು ಇವೊತ್ತಿನ ದಿನ ಇಟ್ಟುಕೊಂಡಿಲ್ಲ. ಕೋಟ್ಯಂತರ ರೂಪಾಯಿಗಳಷ್ಟು ವೆಚ್ಚದಲ್ಲಿ ಭಾರಿ ಕೆಲಸಗಳನ್ನು ಮಾಡಬೇಕೆಂದು ಕಂಟ್ರಾಕ್ಟರುಗಳಿಗೆ ಕೊಟ್ಟು, ಸರಿಯಾದ ವ್ಯವಸ್ಥೆ ಇಲ್ಲದೆ ಮಾಡಿರತಕ್ಕ ಕೆಲಸಗಳು ಎಷ್ಟೋ ಇವೆ. ಸರಕಾರಿ ಅಧಿಕಾರಿಗಳು ಇವೊತ್ತಿನ ದಿವಸ ಹಣವನ್ನು ದುರುಪಯೋಗಪಡಿಸಿರತಕ್ಕ ನಿದರ್ಶನಗಳನ್ನು ಅನೇಕ ಸಾರಿ ಈ ಸಭೆಯಲ್ಲಿ ತಿಳಿಸಿದ್ದಾರೆ. ಇಂತಹ ಸಂದರ್ಭಗಳ ಕಡೆಗೆ ಸರಕಾರ ತೀವ್ರವಾಗಿ ಗಮನಿಸಬೇಕೆಂದೂ ಹೇಳುತ್ತೇನೆ.

ಇನ್ನು ಪಿಕಪ್ಪುಗಳನ್ನು ಸಣ್ಣ ಸಣ್ಣ ನೀರಾವರಿ ಯೋಜನೆಗಳನ್ನು ಮಾಡಿದ್ದೇವೆ ಎಂದು ಅನೇಕ ಸಾರಿ ನೀರಾವರಿ ಸಪ್ತಾಹ ಎಂದು ಚುನಾವಣೆಯ

ಪ್ರಚಾರಕ್ಕಾಗಿ ಮಾಡಿದರೆಂದು ಕಾಣುತ್ತದೆ. ಈ ರೀತಿ ನೀರಾವರಿ ಸಪ್ತಾಹಗಳನ್ನು ಮಾಡಿದರೆ ಬರೀ ದುಡ್ಡು ಹಾಳಾಗುತ್ತದೆಯೇ ವಿನಾ ದೇಶದ ಜನಕ್ಕೆ ಅನುಕೂಲವಾಗುವುದಿಲ್ಲ. ನೀರಾವರಿ ಯೋಜನೆಯು ಸಪ್ತಾಹ ಮಾಡಬೇಕಾಗಿದ್ದರೆ, ಬಹಳ ಚೆನ್ನಾಗಿ ದೇಶದಲ್ಲಿ ಎಲ್ಲಿ ನೀರಾವರಿ ಕೆಲಸ ಸಮರ್ಪಕವಾಗಿ ಆಗಿದೆಯೋ ಅಂತಹ ಕೆಲಸವನ್ನು ಮಾಡಿ ಜನತೆಗೆ ತೋರಿಸುವುದಕ್ಕಾಗಿ ಮಾಡಬೇಕು. ಈಗ ಮಾಡುವಂತೆ ಎಲೆಕ್ಷನ್ನು ಪ್ರಚಾರಕ್ಕಾಗಿ ಎಂದು ಮಾಡಿದರೆ ನೀರಾವರಿ ಕೆಲಸವಾಗುವುದಿಲ್ಲ. ಆಯಾ ಊರುಗಳಲ್ಲಿರುವ ಕಂಟ್ರಾಕ್ಟರುಗಳು ಇಂಜಿನಿಯರನ್ನು ಸೇರಿಸಿಕೊಂಡು ನೀರಾವರಿ ಸಪ್ತಾಹ ಎಂದು ಹೇಳಿಕೊಂಡು ಹಣವನ್ನು ಖರ್ಚು ಮಾಡಬೇಡಿ. ಇದಕ್ಕೆ ಬದಲು ಯಾವ ಯಾವ ತಾಲ್ಲೂಕುಗಳಲ್ಲಿ, ಯಾವ ಡಿಸ್ಟ್ರಿಕ್ಟುಗಳಲ್ಲಿ ಎಷ್ಟು ಕೆಲಸಗಳು ನಿಂತಿವೆ ಎನ್ನುವ ವಿವರಗಳನ್ನೆಲ್ಲಾ ಒದಗಿಸಿಕೊಂಡು ಅದಕ್ಕೆ ಸೂಕ್ತವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳುವ ಕಡೆಗೆ ಗಮನ ಕೊಡುವುದು ಅಗತ್ಯ. ಈಗ ಹತ್ತು ಎಕರೆ ಯಷ್ಟು ಕೂಡ work-out ಆಗಿಲ್ಲ ಎಂದು ಹೇಳುತ್ತಾರಿವೈಸ್ಡು ಎಸ್ಟಿಮೇಟನ್ನು ಮಾಡಬೇಕೆಂದು ಇಂಜಿನಿಯರುಗಳು Technical opinion ಕೊಡುವುದನ್ನು ನಿಲ್ಲಿಸಬೇಕು. ಈ ರೀತಿ ಮಾಡಿ ಸಣ್ಣ ಕೆರೆಗಳನ್ನು ಮಾಡುತ್ತೇವೆಂದು ಹೇಳಿದರೆ ಯಾವ ರೈತರೂ ಉದ್ಧಾರವಾಗುವುದಿಲ್ಲ. ಇದರಿಂದ ಲೋಕೋಪಯೋಗಿ ಶಾಖೆಯು ಅಭಿವೃದ್ಧಿಯಾಗುವುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ.

ಇನ್ನು ಕೆಲವು ಕಡೆ ಪಿಕಪ್‌ಗಳನ್ನು ಕಟ್ಟುತ್ತಿದ್ದಾರೆ. ಈ ವಿಚಾರದಲ್ಲೂ ಸಹ ಒಂದು ನೀತಿನಿಯಮಗಳಾಗಲಿ ಅಥವಾ ಒಂದು ಪಾಲಿಸಿಯಾಗಲಿ ಇರುವುದಿಲ್ಲ. ಯಾರೋ ಒಬ್ಬ ವ್ಯಕ್ತಿಯ ದಾಕ್ಷಿಣ್ಯಕ್ಕಾಗಿ ಎರಡು ಎಕರೆ ಜಮೀನಿಗೆ ಎರಡು ಕಡೆ ಪಿಕಪ್‌ಗಳನ್ನು ಕಟ್ಟಿಸಿದ್ದಾರೆ. ಆದರೆ ಅವುಗಳಿಂದ ಒಂದು ಕಾಸಿನ ಪ್ರಯೋಜನ ಕೂಡ ಆಗುತ್ತಿಲ್ಲ. ಹೀಗೆ ನೀರು ಸರಬರಾಯಿ ಆಗುತ್ತದೆಯೇ-ಇಲ್ಲವೇ ಎಂಬುದೊಂದನ್ನೂ ಪರಿಶೀಲಿಸದೆ ಕೆಲಸ ಮಾಡುತ್ತಿದ್ದಾರೆ. ಈ ರೀತಿಯಲ್ಲಿ ಜನರಿಂದ ವಸೂಲ್ಮಾಡಿದ ಹಣವನ್ನು ಪೋಲು ಮಾಡಿದಂತಾಗುತ್ತದೆಯೇ ಹೊರತು ಇಂಥ ಖರ್ಚಿನಿಂದ ದೇಶದ ಪ್ರಗತಿಯನ್ನು ಸಾಧಿಸಿದಂತಾಗುವುದಿಲ್ಲ ಮತ್ತು ಸರ್ಕಾರಕ್ಕೂ ಕೂಡ ಕೀರ್ತಿ ಬರುವುದಿಲ್ಲವೆಂದು ನಾನು ತಮ್ಮಲ್ಲೀಗ ಮನವಿಮಾಡಿಕೊಳ್ಳುತ್ತಿದ್ದೇನೆ.

ಇನ್ನು ಟಾರ್ ರೋಡುಗಳ ವಿಚಾರ: ನಾವು ಯಾವ ರೋಡಿಗೇ ಹೋಗಿ ನೋಡಲಿ—ಅಲ್ಲಿ ಟಾರ್, ಜಲ್ಲಿ—ಮರಳು ಇತ್ಯಾದಿ ಮೆಟೀರಿಯಲ್ಸ್‌ಗಳೆಲ್ಲಾ ಚೆಲ್ಲಾಡಿರುತ್ತವೆ. ಕಂಟ್ರಾಕ್ಟರುಗಳಾರೂ ಸರಿಯಾಗಿ ನ್ಯಾಯವಾಗಿ ಕೆಲಸ ಮಾಡುತ್ತಿಲ್ಲ. ಈ ಕಾರ್ಯಗಳ ಬಗ್ಗೆ ಯಾರೂ ಸರಿಯಾಗಿ ಸೂಪರ್‌ವೈಜ್ ಮಾಡುತ್ತಿಲ್ಲ. ಟಾರ್ ಡಬ್ಬಗಳಿಂದ ಟಾರು ರಸ್ತೆಯಲ್ಲೆಲ್ಲಾ ಚೆಲ್ಲಾಡಿ ಹೋಗಿರುತ್ತದೆ. ಇದನ್ನೆಲ್ಲಾ ಕೇಳತಕ್ಕ ದಾತರೇ ಇಲ್ಲವೇನೋ ಎಂದೆನಿಸುತ್ತದೆ. ಮೇಲಾಗಿ ಕಂಟ್ರಾಕ್ಟರುಗಳು ಕಾಂಟ್ರಾಕ್ ಕೆಲಸಗಳಲ್ಲಿ ಇಷ್ಟು ಸಿಮೆಂಟಿಗೆ-ಇಷ್ಟೆ ಜಲ್ಲಿ-ಇಷ್ಟೇ ಮರಳು ಮಿಕ್ಸ್ ಮಾಡಬೇಕೆಂಬ ಪ್ರಮಾಣವೇನಿದೆ.ಅದಕ್ಕೆ ಅನುಸಾರವಾಗಿ ಯಾರೂ ಕೆಲಸ ಮಾಡುತ್ತಿಲ್ಲ. ಹೀಗಾಗಿ ಅವರು ಕಟ್ಟಿಸತಕ್ಕ ಸೇತುವೆ, ಕಟ್ಟಡಗಳು ವರ್ಷಾರು ತಿಂಗಳಲ್ಲೇ ಕ್ರ್ಯಾಕ್ ಬಿಡುತ್ತವೆ. ಕೇವಲ ಬಣ್ಣ ಹಾಕಿ ಕಟ್ಟಿರತಕ್ಕ ಸೇತುವೆ ಮತ್ತು ಕಟ್ಟಡಗಳ ನಿದರ್ಶನಗಳು ಎಷ್ಟು ಬೇಕಾದರೂ ಇವೆ. ಇಂಥ ಕಳಪೆ ಕೆಲಸಗಳು ನಡೆಯುತ್ತಿರುವುದರಿಂದಲೇ ಈ ವರ್ಷ ಕಟ್ಟತಕ್ಕ ಕಟ್ಟಡಗಳನ್ನು ಮುಂದಿನ ವರ್ಷ ಕತ್ತು ಹಾಕಿ ಮತ್ತೆ ಹೊಸದಾಗಿ ಕಟ್ಟ ಬೇಕಾಗಿರುತ್ತದೆ. ಈ ವಿಚಾರಗಳ ಬಗ್ಗೆ ಸರ್ಕಾರದವರು ಶೀಘ್ರವಾಗಿ ಮನಸ್ಸಿಟ್ಟು ಏನಾದರೂ ಒಂದು ವ್ಯವಸ್ಥೆಯನ್ನು ಮಾಡಲೇಬೇಕು. ಇಂಥ ಅಭದ್ರವಾದ ಕೆಲಸಗಳನ್ನು ಯಾವ ಕಂಟ್ರಾಕ್ಟರು ಮಾಡಿರುತ್ತಾರೋ ಅಂಥವರಿಗೆ ಮತ್ತೆ ಈ ಕಂಟ್ರಾಕ್ಟ್ ಕೆಲಸ ಮಾಡದಂತೆ ಅವರ ಲೈಸೆನ್ಸುಗಳನ್ನು ವಜಾಮಾಡಬೇಕು. ಸರ್ಕಾರದವರು ಈ ಎಲ್ಲ ವಿಚಾರಗಳಲ್ಲೂ ಒಂದು ಸಮಗ್ರ ಯೋಜನೆಯನ್ನು ಹಾಕಿಕೊಳ್ಳದೆ ಹೋದರೆ ಇಂಥ ಅಕ್ರಮಗಳಿಂದ ಕೋಟ್ಯಂತರ ರೂಪಾಯಿಗಳು ಹಾಳಾಗುತ್ತವೆ.

ನಮ್ಮ ತುಮಕೂರು ಜಿಲ್ಲೆಯಲ್ಲಿ ವರ್ಷಕ್ಕೆ 20 ಇಂಚ್ ಮಳೆ ಸಹ ಆಗುತ್ತಿಲ್ಲ. ಅಲ್ಲಿ ಮಿಸ್ಸಿಂಗ್ ಲಿಂಕುಗಳಿಗೆ ಹಣ ಕೇಳಿದರೆ ದುಡ್ಡಿಲ್ಲ ಎಂದು ಹೇಳುತ್ತಾರೆ. ಈಗ ಒಂದೊಂದು ಜಿಲ್ಲೆಗೆ ಒದಗಿಸಿರತಕ್ಕ ಮೊಬಲಗಿನಲ್ಲಿ 50 ಮೈಲಿ ರಸ್ತೆ ಕೂಡ ಆಗುವುದಿಲ್ಲ. ಅಲ್ಲಿ ಒಂದು ಹಳ್ಳಿಯಿಂದ, ಇನ್ನೊಂದು ಹಳ್ಳಿಗೆ ಹೋಗಬೇಕೆಂದರೆ ರಸ್ತೆಯೇ ಇರುವುದಿಲ್ಲ. ಊರಿಂದೂರಿಗೆ ಈ ಸಂಚಾರ ಮಾರ್ಗಗಳನ್ನು ಸರ್ಕಾರದವರು ಏರ್ಪಡಿಸಬೇಕಾದ್ದು ಅವರ ಕರ್ತವ್ಯ. ಆದರೆ ಸರ್ಕಾರದವರು ಈ ದಿವಸ ಈ ಕಾರ್ಯವನ್ನು ಗ್ರಾಮಪಂಚಾಯಿತಿಗಳಿಗೂ ಮತ್ತು ತಾಲ್ಲೂಕ್‌ಬೋರ್ಡ್‌ಗಳಿಗೂ ವಹಿಸಿದ್ದೇವೆಂದು ಹೇಳಬಹುದು. ಆದರೆ ಈ ಕಾರ್ಯವನ್ನು ಇಲ್ಲಿಯತನಕ ಆ P.W.D. ಗೆ ಮಾಡಲು ಸಾಧ್ಯವಾಗಿಲ್ಲ. ಅಂಥಾದ್ದಕ್ಕೆ ಈಗ 50 ರೂಪಾಯಿಗಳನ್ನು ಕೊಟ್ಟು ಆ ಮಿಸ್ಸಿಂಗ್ ಲಿಂಕ್‌ಗಳನ್ನು ಮಾಡಬೇಕೆಂದು ಹೇಳುತ್ತಿದ್ದಾರೆ. ಆ ಹಣ ಏತಕ್ಕೂ ಸಾಲದು. ಒಂದು ಕಡೆ ಸರ್ಕಾರದವರು ದೇಶದಾದ್ಯಂತವೂ ರಸ್ತೆ ಸೌಕರ್ಯ ಮಾಡುತ್ತೇವೆಂದು ಹೇಳುತ್ತಾರೆ. ಮತ್ತೊಂದು ಕಡೆ 50 ಮೈಲಿಗಿಂತ ಜಾಸ್ತಿ ಮಾಡುವುದಕ್ಕಾಗುತ್ತಿಲ್ಲ ಎಂದು ಹೇಳುತ್ತಾರೆ. ಇದು ಎಂಥ ಸರ್ಕಾರದವರ ನೀತಿಯೋ ನಾನು ಬೇರೆ ಕಾಣೆ. ಮೈಸೂರು ರಾಜ್ಯದಲ್ಲಿ ಈ ರಸ್ತೆ ಪ್ರಗತಿಯನ್ನು ಸಾಧಿಸಬೇಕೆಂಬ ಆಸೆ ಸರ್ಕಾರದವರಿಗಿದ್ದರೆ ಅವರು ಕೂಡಲೇ ಈ 50 ಮೈಲಿಗಳ ನಿಯಮವನ್ನು ಬದಲಾಯಿಸಿ ನೂರು ಮೈಲಿಗಳಿಗೆ ಅದನ್ನು ಹೆಚ್ಚಿಸಬೇಕೆಂದು ಹೇಳುತ್ತೇನೆ. ಇಷ್ಟು ಮಾತನಾಡಲು ನನಗೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಟಿ. ಕೆ. ಕಂಬಳಿ (ಕುಂದಗೋಳ್).—ಅಧ್ಯಕ್ಷರೇ, ಈ ದಿವಸ ಸಭೆಯ ಮುಂದಿರತಕ್ಕ ಎಲ್ಲ ಬೇಡಿಕೆಗಳಿಗೂ ಬೆಂಬಲ ನೀಡುತ್ತ ಸರ್ಕಾರಕ್ಕೆ ನಾನು ಒಂದೆರಡು ಸೂಚನೆಗಳನ್ನು ಕೊಡಬಯಸುತ್ತೇನೆ. ಈ ದಿವಸ ಈ ಬೇಡಿಕೆಗಳು ಸಮಂಜಸವಾಗಿಲ್ಲ–ಇವು ನಿರುಪಯೋಗ ಎಂತೆ ಏನು ಕೆಲವು ಮಾನ್ಯ ಸದಸ್ಯರು ಟೀಕಾ ಮಾಡುತ್ತಿದ್ದಾರೋ ಅಂಥವರ ಪೈಕಿ ನಾನೂ ಒಬ್ಬ. ಆದರೆ ನಾವು ಮಾಡತಕ್ಕ ಟೀಕೆಗಳೇನಿವೆ ಅವು ಕೆಲಸ ನಡೆಸಲಿಕ್ಕೆ ಸುಲಲಿತವಾಗಿರಬೇಕು, ಆದರೆ ಕೆಲಸಗಳು ಕೆಡುವ ಹಾಗೆ ಇರಬಾರದು. ನಾವು ಹೀಗೆ ವಿಧಾಯಕವಾದ ಟೀಕೆಗಳನ್ನು ಮಾಡಬೇಕೇ ಹೊರತು ವಿಘಾತಕವಾದ ಟೀಕೆಗಳನ್ನು ಮಾತ್ರ ಮಾಡಬಾರದು ಎಂದು ನಾನು ಅವರಿಗೆ ಹೇಳಬಯಸುತ್ತೇನೆ.

(ಶ್ರೀ ಟಿ. ಕೆ. ಕಂಬಳಿ)

ನೀರಾವರಿ ಯೋಜನೆಗಳ ಬಗ್ಗೆ ಹೇಳುವುದಾದರೆ ನಮ್ಮ ಭಾಗದಲ್ಲಿ ಇವು ಬಹಳ ಕಡಮೆಯಾಗಿವೆ. ಘಟಪ್ರಭಾ-ಮಲಪ್ರಭಾ ಯೋಜನೆಗಳು ಬಹಳ ಮಹತ್ವದ್ದಾಗಿವೆ. ಅವು ಕಾರ್ಯ ರೂಪಕ್ಕೆ ಬಂದರೆ ಇಡೀ ಮೈಸೂರು ರಾಜ್ಯದ ಅರ್ಧ ಪ್ರಾಂತ್ಯಕ್ಕೆ ಅನ್ನ ಪೂರೈಸುತ್ತವೆ ಎಂದು ಹೇಳುತ್ತೇನೆ. ಆದ್ದರಿಂದ ಇವು ಅತಿ ಮಹತ್ವದ್ದಾಗಿವೆ. ಹೀಗೇ ಹಿಡಕಲ್ ಮತ್ತು ನವಿಲುತೀರ್ಥ ಪ್ರಾಜೆಕ್ಟ್‌ಗಳೂ ಕೂಡ ಜರೂರಾಗಿ ಆಗಲೇಬೇಕೆಂದು ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ಕಡೆ ಈ ನೀರು ಕೆರೆಗೆ ಬಹಳ ಜಾಸ್ತಿ ಬೀಳುತ್ತಿದೆ. ಈ ಕಡೆಗೆ ಬಹಳ ಕಡಮೆ ಇದೆ ಎಂದು ಹೇಳುತ್ತೇನೆ. ಇಲ್ಲಿ ಇದು ಒಂದು ಪರ್ತಿಯಿದ್ದರೆ ನಮ್ಮ ಕಡೆ ಐದು ಪರ್ತಿ ಇರುತ್ತದೆ. ಆದ್ದರಿಂದ ಎಲ್ಲಾ ಕಡೆಯಲ್ಲೂ ಒಂದು ಏಕರೂಪ ತೆರಿಗೆ ಇರುವಂತೆ ಆಗಬೇಕೆಂದು ಹೇಳುತ್ತೇನೆ. ಇನ್ನು ನಮ್ಮಲ್ಲಿ ಈ ಸಣ್ಣ ನೀರಾವರಿ ಯೋಜನೆಗಳಿರುವುದೇ ಬಹಳ ಕಡಮೆ. ನನ್ನ ಕ್ಷೇತ್ರದಲ್ಲಿ ಕೆರೆಗಳಿರುವುದೇ ಎರಡು ; ಒಂದು ತೀರಾ ದುರ್ದೆಶೆಯಲ್ಲಿದೆ ; ಇನ್ನೊಂದು ದುರಸ್ತಿ ಆಗಬೇಕಾಗಿದೆ. ಇರಿಗೇಷನ್ ವಿಚಾರ ಇಷ್ಟಾಯಿತು.

ಇನ್ನು ನಮ್ಮ ಭಾಗದಲ್ಲಿ ಬಹಳ ಹುಷಾರಿಯಿಂದ ಹೇಳಬೇಕೆಂದರೆ, ರಸ್ತೆಗಳಿರುವುದೇ ಬಹಳ ಕಡಮೆ. ರಸ್ತೆಗಳೇ ಇಲ್ಲ ಎಂದು ಹೇಳಿದರೂ ಹೇಳಬಹುದು. ನಮಗೆ ಈ ರಸ್ತೆಗಳ ಅಗತ್ಯ ಬಹಳವಾಗಿದೆ ಎಂದು ಸ್ಥಳೀಯ P. W. D. ಅವರಿಗೆ ಹೇಳಿದರೆ ಅವರು 25 ಮೈಲಿಗಿಂತ ಜಾಸ್ತಿ ಇದ್ದರೆ ಅದನ್ನು ಮಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ಆದರೆ ಈಗ ಅವರು ಅಲ್ಲಲ್ಲೇ ಮಾಡಿರತಕ್ಕ ರಸ್ತೆಗಳೇನಿವೆ-ಅವುಗಳಿಂದ ಏನೂ ಪ್ರಯೋಜನವಿಲ್ಲ. ಮಳೆಗಾಲದಲ್ಲಿ ಕಾಲ್ಲೂಕ್ ಹೆಡ್‌ಕ್ವಾರ್ಟರ್ಸಿಗೂ ಮತ್ತು ಇತರ ಭಾಗಗಳಿಗೂ ಸಂಪರ್ಕವೇ ಇರುವುದಿಲ್ಲ. ಮೂರುನಾಲ್ಕು ದಿನಗಳು ನೀರು ಮುಚ್ಚಿ ರಸ್ತೆಗಳು ಸಂಚಾರಕ್ಕೆ ಉಪಯೋಗವಿರುವುದಿಲ್ಲ. ಅವೇನಿದ್ದರೂ ಕೇವಲ ಬೇಸಿಗೆ ಕಾಲದ ರಸ್ತೆಗಳೆಂತ ಕರೆಯಬಹುದು. ಹೀಗಾಗಿ ಈಗ ಅಲ್ಲಿ ಈ ರಸ್ತೆಗಳಿಗೆ ಬಹಳ ಆತುರತೆ ಇದೆ. ಈ ಹಿಂದೆ ಒಮ್ಮೆ ನಾವು ಸರ್ಕಾರದವರಿಗೆ ನಮ್ಮಲ್ಲಿ ರಸ್ತೆ ಮಾಡಿಕೊಡಬೇಕೆಂದು ಕೇಳಿಕೊಂಡೆವು. ಆಗ ಅವರು ನಮಗೆ 75 ಮೈಲು ರಸ್ತೆಗೆ 72 ಸಾವಿರ ರೂಪಾಯಿ ಕೊಡಬೇಕು ಮತ್ತು ಅದಕ್ಕೆ ಬೇಕಾದ ಜಮೀನು ಇಷ್ಟನ್ನು ಕೊಟ್ಟರೆ ರಸ್ತೆ ಮಾಡಿಕೊಡುತ್ತೇವೆಂದು ಹೇಳಿ ನಮಗೆ ಒಂದು ತಿಂಗಳ ವಾಯಿದೆ ಕೊಟ್ಟು 72 ಸಾವಿರ ರೂಪಾಯಿ ಗಳನ್ನು ತುಂಬ ಬೇಕೆಂದು ಹೇಳಿದರು. ನಾವು ಕೇವಲ 28 ದಿನಗಳಲ್ಲೇ ಆ ಹಣವನ್ನು ಕೊಟ್ಟೆವು. ಅಷ್ಟೊಂದು ದೊಡ್ಡ ಮೊಬಲಗನ್ನು ನಾವು ಎತ್ತಿ ಕೊಟ್ಟಿದ್ದಾಗೂ ನಮ್ಮಲ್ಲಿ 50 ಮೈಲಿ ರಸ್ತೆ ಕೆಲಸ ಕೈಗೊಳ್ಳುತ್ತೇವೆಂತ ಹೇಳಿದ್ದರೂ ಇದುವರೆಗೆ ಕುಂದಗೋಳಿನ ರಸ್ತೆ ಇನ್ನೂ ಆಗಿಲ್ಲ. ಈ ದಿವಸ ಅಲ್ಲಿರತಕ್ಕ ರಸ್ತೆಗಳು ಬಹಳ ಕೆಟ್ಟಿವೆ. ಅದನ್ನು ಡಿ. ಬಿ. ಎಲ್. ನವರು ದುರಸ್ತಿ ಮಾಡಬೇಕಾಗಿದೆ. ಆದರೆ ಬಾಕಿ ಕಡೆಗಳಲ್ಲೆಲ್ಲಾ 100-200 ಮೈಲಿ ರಸ್ತೆ ಮಾಡಿದ್ದಾರೆ. ನಮ್ಮಲ್ಲಿ 50-60 ಮೈಲಿ ರಸ್ತೆ ಕೂಡ ಆಗಿರುವುದಿಲ್ಲ. ಆದುದರಿಂದ ನಮ್ಮಲ್ಲಿ ಈಗ ಮಾಡಬೇಕೆಂದಿರುವ ಆ 50 ಮೈಲಿ ರಸ್ತೆಯನ್ನಾದರೂ ಜರೂರಾಗಿ ಪೂರ್ಣ ಮಾಡಬೇಕೆಂದು ನಾನು ಹೇಳಬಯಸುತ್ತೇನೆ.

5-30 P.M.

ಇಲ್ಲಿ ಒಂದು ರಸ್ತೆಯಾಗಬೇಕಾದುದು ಅಗತ್ಯ. 25 ಮೈಲಿ ಅಂತರದಲ್ಲಿ ಒಂಬತ್ತು ಊರುಗಳಿವೆ. ಊರುಗಳ ಹತ್ತಿರ ಟಾರ್‌ರಸ್ತೆ ಮಾಡಿಸಬೇಕು. ಈ ರಸ್ತೆಯಲ್ಲಿರುವ ನಾಲಾಗಳಿಗೆ ಸೇತುವೆ ಕಟ್ಟಿಸಿದರೆ ಕುಂದಗೋಳ್, ಹುಬ್ಬಳ್ಳಿ ಮಾರ್ಗ ಪೂರ್ತಿಯಾಗುತ್ತದೆ. ಈ ರಸ್ತೆಯನ್ನು ಆದಷ್ಟು ತೀವ್ರವಾಗಿ ಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈ 25 ಮೈಲು ರಸ್ತೆಯಲ್ಲಿ ನಾಲ್ಕು ಸೇತುವೆಗಳನ್ನಾದರೂ ಮಾಡಬೇಕು.

ನನ್ನ ಚುನಾವಣಾ ಕ್ಷೇತ್ರದಲ್ಲಿ ಒಂದಾದರೂ ಪ್ರವಾಸಿ ಮಂದಿರವಿಲ್ಲ ; ಕೆಲವೊಂದು ಊರುಗಳಲ್ಲಿ ಇರುವದಕ್ಕೆ ಏನೂ ಅನುಕೂಲವಿಲ್ಲ. ಕನಿಷ್ಠ ಐದು ಸಾವಿರ ಜನಸಂಖ್ಯೆಯಿರುವ ಊರಿಗೆ ಒಂದು ಪ್ರವಾಸಿ ಮಂದಿರವಾಗಬೇಕು. ಈಗ ಇರುವ ಪ್ರವಾಸಿ ಮಂದಿರಗಳಲ್ಲಿ ಏನೂ ಅನುಕೂಲತೆಗಳಿಲ್ಲ. ಟೇಬಲ್ ಕುರ್ಚಿ ಮುಂತಾದ ಫರ್ನಿಚರ್ ಇಲ್ಲ. ಇರತಕ್ಕ ಕಟ್ಟಡ ಕೂಡ ದುರಸ್ತಿಯಾಗಬೇಕಾಗಿದೆ. ಏಕೆಂದರೆ ವಾಸಕ್ಕೆ ಅನುಕೂಲವಾಗಿಲ್ಲ. ಆದ್ದರಿಂದ ಪ್ರವಾಸಿ ಮಂದಿರಗಳ ಕಡೆಗೆ ಗಮನಕೊಟ್ಟು ಇನ್ನು ಕೆಲವೇ ದಿವಸಗಳಲ್ಲಿ ಏರ್ಪಾಡು ಮಾಡುತ್ತೀರೆಂದು ನಂಬಿದ್ದೇನೆ. ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರನ್ನು ವಂದಿಸಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಟಿ. ಎನ್. ಮಾದಪ್ಪಗೌಡ (ನಾಗಮಂಗಲ).—ಸ್ವಾಮಿ, ಅನೇಕ ಜನ ಮಾನ್ಯ ಮಿತ್ರರು ಮಾತನಾಡಿ ಈ ಡಿಮ್ಯಾಂಡ ವಿಚಾರದಲ್ಲಿ ಬಹಳ ಉಪಯುಕ್ತ ಸಲಹೆ ಕೊಟ್ಟಿದ್ದಾರೆ. ಈ ಬಾಬಿಗಾಗಿ ನಾವು 70 ಕೋಟಿ ರೂಪಾಯಿ ಖರ್ಚು ಮಾಡತಕ್ಕಂಥವರಾಗಿದ್ದೇವೆ. ಈ ಸಮಯದಲ್ಲಿ ಖರ್ಚು ಮಾಡತಕ್ಕಂಥ ಹಣವನ್ನು ಸರಿಯಾದ ರೀತಿಯಲ್ಲಿ ವಿನಿಯೋಗವಾಗುತ್ತಿದೆಯೋ ? ಆ ರೀತಿ ಆಗದೇ ಇದ್ದರೆ ಅದಕ್ಕೆ ಏನು ಕಾರಣ ಎನ್ನುವದನ್ನು ಸ್ವಲ್ಪ ಮಟ್ಟಿಗೆ ವಿವೇಚಿಸಬೇಕಾಗಿದೆ. ಈ ಕೆಲಸಗಳನ್ನು ಪ್ರಾರಂಭ ಮಾಡಿದಂದಿನಿಂದ ಮುಗಿಸುವವರೆಗೆ ಅಧಿಕಾರದಲ್ಲಿರತಕ್ಕಂಥವರ ಅಲಕ್ಷ್ಯತೆಯಿಂದ ಕೆಲಸಗಳು ನಿಧಾನವಾಗುತ್ತಿವೆ. ಇದಕ್ಕೆ ಒಂದೆರಡು ನಿದರ್ಶನಗಳನ್ನು ಕೊಡಬಹುದು. ಅನೇಕ ಕೆಲಸಗಳಿಗೆ ಸಿಮೆಂಟು ಮತ್ತು ಕಬ್ಬಿಣಗಳನ್ನು ಡಿಪಾರ್ಟ್‌ಮೆಂಟಿನವರು ಸಪ್ಲೈ ಮಾಡತಕ್ಕಂಥ ಏರ್ಪಾಡು ಮಾಡಿಕೊಂಡಿದ್ದಾರೆ. ಆದರೆ ಸರಿಯಾಗಿ ಸಪ್ಲೈ ಮಾಡುವುದಿಲ್ಲ. ಸಿಮೆಂಟು ಇಲ್ಲವೆಂದು ಕೆಲಸ ನಿಲ್ಲಿಸುತ್ತಾರೆ. ಆದರೆ ಬ್ಲಾಕ್ ಮಾರ್ಕೆಟ್ಟಿನಲ್ಲಿ ಒಂದು ಮೂಟೆಗೆ 15 ರೂಪಾಯಿ ಕೊಟ್ಟರೆ ಬೇಕಾದಷ್ಟು ಸೀಮೆಂಟ್ ದೊರೆಯುತ್ತದೆ. ಸರಕಾರದ ಹತ್ತಿರ ಸೀಮೆಂಟ್ ಇಲ್ಲ ಅಂದರೆ ಅದಕ್ಕೆ ಕಾರಣವೇನು ಎನ್ನುವುದನ್ನು ಹುಡುಕಬೇಕಾಗಿದೆ. ಯಾವ ಯಾವ ಡಿವಿಜನ್ನಿನಲ್ಲಿ ಎಂಥ ಕೆಲಸ ತೆಗೆದುಕೊಳ್ಳುತ್ತಾರೆಯೋ ಅದಕ್ಕೆ ಯಾವ ಯಾವ ಸಾಮಾನುಗಳು ಬೇಕೋ ಅಂಥ ಎಲ್ಲ ಸಾಮಾನುಗಳನ್ನು ಡಿವಿಜನಲ್ ಆಫೀಸಿನಲ್ಲಿಟ್ಟುಕೊಂಡು ಸಬ್‌ಡಿವಿಜನ್ ಆಫೀಸಿಗೆ ಶೀಘ್ರವಾಗಿ ಸಪ್ಲೈ ಮಾಡುವ ಹಾಗೆ ವ್ಯವಸ್ಥೆ ಮಾಡಬೇಕು. ಅಂದರೆ ಈ ಕೆಲಸಗಳು ಬೇಗ ಆಗುವುದಕ್ಕೆ ಅನುಕೂಲವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಸಿಮೆಂಟ್ ಅಭಾವ ದೇಶದಲ್ಲಿ ತುಂಬಾ ಇವೆಯೆಂದು ಕೈಗಾರಿಕಾ ಮಂತ್ರಿಗಳು ಹೇಳಿದರು. ಅಭಾವ ಎಷ್ಟೇ ಇರಲಿ ಸೀಮೆಂಟು ಬ್ಲ್ಯಾಕ್ ಮಾರ್ಕೆಟ್‌ಗೆ ಹೋಗುವುದನ್ನು

ತಪ್ಪಿಸಬೇಕು ಮತ್ತು ಡಿಪಾರ್ಟ್‌ಮೆಂಟಿನ ಸ್ಟೋರ್ಸ್‌ನಲ್ಲಿ ಇಟ್ಟುಕೊಳ್ಳಬೇಕು. ಮುಖ್ಯವಾಗಿ ದೊಡ್ಡ ದೊಡ್ಡ ಅನೇಕ ಕಾಮಗಾರಿಗಳನ್ನು ಮಾಡುತ್ತಿರುವಾಗ್ಗೆ ಅದಕ್ಕೆ ಬೇಕಾಗುವ ಸಾಮಾನುಗಳ ಸಪ್ಲೈ ಮಾಡಿಕೊಡಬೇಕೆಂದು ಹೇಳುತ್ತೇನೆ.

ನಮ್ಮ ಸ್ಥಳದಲ್ಲಿ ಭೂಗುಣ ಯಾವ ರೀತಿ ಇದೆಯೆಂದರೆ ಬರೀ ಕಲ್ಲು ಇರುತ್ತದೆ. ಕಲ್ಲು ಒಡೆಯುವದಕ್ಕೆ ಬರುವ ಖರ್ಚು ಎಷ್ಟು ಎನ್ನುವುದು ಭಗವಂತನಿಗೇ ಗೊತ್ತು. ಹತ್ತು ಪೌಂಡು ಬ್ಲಾಸ್ಟಿಂಗ್ ಮೆಟೀರಿಯಲ್ ತರುವುದಕ್ಕೆ ಲಾರಿ ತೆಗೆದುಕೊಂಡು ಅರವತ್ತು ಮೈಲಿ ಹೋಗಬೇಕಾಗುತ್ತದೆ. ಪರ್ಮಿಟ್ ಇದ್ದರೂ ಕೂಡ ಹತ್ತು ಪೌಂಡಿನ ಬದಲು 5 ಪೌಂಡು ಕೊಡುತ್ತಾರೆ. ಒಂದೊಂದು ಸಾರಿ 60-80 ಮೈಲಿ ದೂರ ಲಾರೀ ತೆಗೆದುಕೊಂಡು ಹೋದರೂ ಕೂಡ, ಪರ್ಮಿಟ್ ಕೊಟ್ಟರೆ ಕೊಟ್ಟಾಗು ಇಲ್ಲದಿದ್ದರೆ ಇಲ್ಲ. ಕಂಟ್ರಾಕ್ಟ ತೆಗೆದುಕೊಂಡವರಿಗೆ ಈ ರೀತಿ ಅನನುಕೂಲವಾದರೆ ಕೆಲಸ ಮುಂದುವರಿಸಲು ಹೇಗೆ ಸಾಧ್ಯವಾಗುತ್ತದೆಎಂಬುದನ್ನು ಆಲೋಚನೆ ಮಾಡಿ ನೋಡಬೇಕು. ಜೊತೆಗೆ ಕಂಟ್ರಾಕ್ಟ್ ಕೊಡುವಾಗ್ಗೆ ಕೆಲಸ ಪೂರ್ತಿಗೊಳಿಸಲು ಕಾಲ ಮಿತಿ ಗೊತ್ತುಮಾಡಿರುತ್ತಾರೆ. ಇಂಥ ಕಾಲಾವಧಿಯನ್ನು ಕಟ್ಟುನಿಟ್ಟಾಗಿ ಅನುಸರಿಸುತ್ತಾರೆಯೇ ? ದಾಕ್ಷಿಣ್ಯಕ್ಕೊಳಗಾಗಿ ವರ್ಷಾನುಗಟ್ಟಲೆ ಕಾಲಾವಧಿಯನ್ನು ಮುಂದುವರಿಸಿಕೊಂಡು ಹೋಗುತ್ತಿರುವ ನಿದರ್ಶನಗಳು ಬೇಕಾದಷ್ಟಿವೆ. ನಮ್ಮ ತಾಲ್ಲೂಕಿನಲ್ಲಿ ಹತ್ತು ವರ್ಷಗಳಿಂದ ಒಂದು ಕೆಲಸ ನಡೆಯುತ್ತಿದೆ. ಇನ್ನೂ ಕೆಲಸ ಪೂರ್ತಿಮಾಡಿಲ್ಲ. ವರ್ಷಾನುಗಟ್ಟಲೆ ಮುಂದುವರಿಸಿಕೊಂಡು ಬರುತ್ತಿದ್ದಾರೆ. ಈ ಕೆರೆಯ ಯೋಜನೆಯ ಕೆಲಸ ಪೂರ್ತಿಯಾದರೆ ನೂರಾರು ಎಕರೆ ಭೂಮಿಗೆ ನೀರು ದೊರೆಯುತ್ತದೆ. ನೀರು ಕೊಡದೆ ಅನ್ಯಾಯವಾಗಿ ಕಂದಾಯ ಮಾತ್ರ ವಸೂಲು ಮಾಡುತ್ತಿದ್ದಾರೆ. ಇಂಥ ಪರಿಸ್ಥಿತಿ ಬೇಗನೆ ಹೋಗಬೇಕು. ಯಾವ ಕೆಲಸ ಸರಿಯಾಗಿ ನಡೆಯುವದಿಲ್ಲವೋ ಅದರ ಬಗ್ಗೆ ನಿರ್ದಾಕ್ಷಿಣ್ಯದಿಂದ ಕ್ರಮ ತೆಗೆದುಕೊಳ್ಳಬೇಕು ಎಂದು ಈ ಸಮಯದಲ್ಲಿ ಹೇಳಲು ಇಷ್ಟಪಡುತ್ತೇನೆ.

[MR. CHAIRMAN (SRI V. MASIYAPPA) in the Chair]

ಇನ್ನು ರೇಟ್ಸ್ ವಿಚಾರದಲ್ಲಿ ಅನೇಕ ಸ್ನೇಹಿತರು ಈಗಾಗಲೇ ಸಲಹೆ ಕೊಟ್ಟಿದ್ದಾರೆ. ದಿನೇ ದಿನೇ ಕೂಲಿ ಜಾಸ್ತಿಯಾಗುತ್ತಿದೆ. ಒಂದೊಂದು ಕಡೆ ಒಂದೊಂದು ರೀತಿಯಾಗಿದೆ. ಅದನ್ನು ಒಂದೇ ರೀತಿಯಾಗಿ ಇರುವ ಹಾಗೆ ಮಾಡುವುದು ಅಗತ್ಯ. ನಮ್ಮ ಸಂಸ್ಥಾನಕ್ಕೆಲ್ಲಾ ಒಂದೇ ರೀತಿಯಾಗಿ ಯಾವ ಯಾವ ಬಾಬಿಗೆ ಯಾವ ರೀತಿಯಾಗಿರಬೇಕೆಂದು ರೇಟ್ಸ್ ಗೊತ್ತು ಮಾಡಿ ಅದನ್ನು ಸಂಬಂಧಪಟ್ಟ ಪ್ರತಿಯೊಂದು ಆಫೀಸಿಗೆ ತಿಳಿಸಿ ಕೆಲಸ ಮಾಡಿಕೊಂಡು ಹೋದರೆ ಸರಿಯಾಗಿ ಆಗುತ್ತದೆ. ರೇಟ್ಸ್ ರಿವೈಜ್ ಮಾಡಲು ಅವಕಾಶವಿರಕೂಡದು. ಮತ್ತು ಕೆಲಸಗಳನ್ನು ಮುಂದುವರಿಸಿಕೊಂಡು ಬರಬೇಕು ಎಂದು ಅನ್ನಿಸುತ್ತದೆ.

ಇನ್ನು ಬಜೆಟ್ಟಿನಲ್ಲಿ ಒಂದು ಕೆಲಸಕ್ಕಾಗಿ ಪ್ರಾರಂಭದಲ್ಲಿ ಒದಗಿಸಿರುವ ಹಣ, ಮತ್ತು ಕೆಲಸ ಮಾಡಿದ ಮೇಲೆ ಒಟ್ಟು ಖರ್ಚಾದ ಹಣ ಎಷ್ಟು ಎಂದು ನೋಡಿದರೆ ಅದರಲ್ಲಿ ಅಜಗಜಾಂತರ ಅಂತರ ಕಂಡು ಬರುತ್ತದೆ. ಒಂದೊಂದು ಕೆಲಸದಲ್ಲಿ ಬಹುಮಟ್ಟಿಗೆ ಹಣ ಪೋಲು ಆಗುವುದಕ್ಕೆ ಅವಕಾಶವಿದೆ. ಪ್ರಾಮುಖ್ಯವಾದಂಥ ದೇಶಾಭಿವೃದ್ಧಿ ಕೆಲಸಗಳಿಗಾಗಿ ಸರಿಯಾದ ರೀತಿಯಲ್ಲಿ ಖರ್ಚು ಮಾಡುವುದಾದರೆ 20 ಕೋಟಿ ಏಕೆ 200 ಕೋಟಿ ಖರ್ಚು ಮಾಡಲಿ. ನಾವು ಸಂತೋಷಪಡುತ್ತೇವೆ. ಗ್ರಾಂಟ್ ಮಾಡಿದ್ದನ್ನು ಸಕಾಲದಲ್ಲಿ communicate ಮಾಡದೇ ಇರುವುದರಿಂದ ಕೆಲಸ ಕಾರ್ಯಗಳು ನಿಧಾನವಾಗಿ ವರ್ಷದ ಕೊನೆಗೆ ಅವಸರ ಅವಸರವಾಗಿ ಕೆಲಸಗಳನ್ನು ನಡೆಸಿ ಲಕ್ಷಾಂತರ ರೂಪಾಯಿ ಖರ್ಚು ಮಾಡಲ್ಪಡುತ್ತದೆ. ಇದರಿಂದ ಕೆಲಸಗಳು ಸರಿಯಾಗಿ ನಡೆಯುವುದಿಲ್ಲ. ಕಣ್ಣಿಗೆ ಮಣ್ಣು ಎರಚಿದಂತೆ ರಸ್ತೆಗಳಿಗೆ ಧೂಳು ಹಾಕುವುದಕ್ಕೆ ಲಕ್ಷಗಟ್ಟಲೆ ಖರ್ಚಾಗುತ್ತದೆ. ಆದರೆ ನಮ್ಮ ತಾಲ್ಲೂಕಿಗೆ ಒಂದು ಸ್ಕೂಲು ಕೊಡಿ, ಕಮ್ಯುನಿಟಿ ಸೆಂಟರ ಕೊಡಿ, ರಸ್ತೆ ಮಾಡಿಸಿ ಕೊಡಿ ಎಂದು ಕೇಳಿದರೆ ದುಡ್ಡು ಇಲ್ಲವೆಂದು ಹೇಳುತ್ತಾರೆ. ಲೋಕೋಪಯೋಗಿ ಇಲಾಖೆಯಲ್ಲಿ ಈ ರೀತಿ ನಡೆಯುತ್ತಿದೆಂದು ನನ್ನ ಸ್ವಂತ ಅನುಭವಕ್ಕೆ ಬಂದಿದೆ. ಈ ಇಲಾಖೆಯಲ್ಲಿ ವರ್ಷದ ಕೊನೆಗೆ ಮಾರ್ಚಿ ತಿಂಗಳಿನಲ್ಲಿ ಹದಿನೈದು ತಾರೀಖಿಗೆ ಹಣ ಒದಗಿಸಿ ಕೊಡುತ್ತಾರೆ. ಕಂಟ್ರಾಕ್ಟರುಗಳಿಗೇ ಮೊದಲೇ 15 ಪರ್ಸೆಂಟ್ ಕೊಟ್ಟಿರುತ್ತಾರೆ.

ಶ್ರೀಮಾನ್ ಎ. ಕೃಷ್ಣಶೆಟ್ಟರು ಮಾತನಾಡುವಾಗ 55 ಪರ್ಸೆಂಟ್‌ವರೆಗೂ ಹೋಗುತ್ತದೆಂದು ಹೇಳಿದರು. ಅದು ಉತ್ಪ್ರೇಕ್ಷೆ ಎಂದು ತಿಳಿದುಕೊಂಡರೂ, ಸೇಕಡ 35-40ಕ್ಕೆ ಕಡಮೆ ಇಲ್ಲದೆ ಖರ್ಚಾಗುತ್ತದೆ. ನನ್ನ ಸ್ವಂತ ಅನುಭವದಿಂದ ಈ ಮಾತನ್ನು ಹೇಳುತ್ತಿದ್ದೇನೆ. ಈ ಸಭೆಯ ಸದಸ್ಯರಾಗಿ ನಾವು ಮಾತನಾಡಬೇಕಾದರೆ ಸತ್ಯವಾದುದನ್ನೇ ಹೇಳಬೇಕಾದ ಸಂಪ್ರದಾಯವಿದೆ. ನಾನು ಹೇಳುವುದರಲ್ಲಿ ಉತ್ಪ್ರೇಕ್ಷೆ ಎಂಬುದು ಎಳ್ಳಷ್ಟೂ ಇಲ್ಲ. ಸರ್ಕಾರ ಮನಸ್ಸುಮಾಡಿದರೆ, ಈಗ ಒಂದು ವರ್ಷಕ್ಕೆ ಯೋಜನೆಗಾಗಿ ಎಂಟು ಕೋಟಿ ರೂಪಾಯಿಗಳಷ್ಟು ಹೊಸ ತೆರಿಗೆಗಳನ್ನೂ ಹಾಕಬೇಕೆಂದಿರುವುದನ್ನು ತಪ್ಪಿಸಿ, ಆ ದುಡ್ಡನ್ನೆಲ್ಲ ಈ ಲೋಕೋಪಯೋಗಿ ಇಲಾಖೆಯಲ್ಲಿ ಉಳಿಸಬಹುದೆಂದು ನಾನಾದರೂ ಖಂಡಿತವಾಗಿ ನಂಬಿದ್ದೇನೆ.

ಅಧಿಕಾರಿಗಳ ಬದಲಾವಣೆಯ ವಿಚಾರ. ಅವರು ಇವೊತ್ತು ಬರುತ್ತಾರೆ. ಚಾರ್ಜ್ ತೆಗೆದುಕೊಂಡು ಕೆಲಸ ಏನು ಎಂದು ಒಂದು ಸಲ ಓಡಾಡಿಕೊಂಡು ಬಂದು ಕೆಲಸ ಪ್ರಾರಂಭ ಮಾಡುವುದರಲ್ಲಿ ಅವರನ್ನು ಅಲ್ಲಿಂದ ವರ್ಗ ಮಾಡುತ್ತಾರೆ. ಆ ಸ್ಥಾನಕ್ಕೆ ಮತ್ತೊಬ್ಬರು ಬರುವವರು ಎಂಥ ಬೃಹಸ್ಪತಿಗಳೋ ನಮಗೆ ಗೊತ್ತಿರುವುದಿಲ್ಲ. ಬಂದ ಮೇಲೆ ಅನುಭವಿಸಬೇಕಾದವರು ನಾವು, ಪ್ರಜೆಗಳು. ಒಬ್ಬ ಅಧಿಕಾರಿಗೆ ಎರಡು ಮೂರು ಪ್ರಾಜೆಕ್ಟ್‌ಗಳ ಕೆಲಸವನ್ನು ವಹಿಸಿರುತ್ತೀರಿ. ಕೊನೆಯ ಪಕ್ಷ ಒಂದು ಕೆಲಸ ಪೂರ್ತಿಯಾಗುವವರೆಗಾದರೂ ಆ ಸ್ಥಳದಲ್ಲಿರಲಿ. ಏನಾದರೂ ವ್ಯತ್ಯಾಸವಾದರೆ ಜವಾಬ್ದಾರಿಯನ್ನು ಅವರ ಮೇಲೆ ಹಾಕಬಹುದು. ಗೊಲ್ಲರಹಳ್ಳಿ ಕೆಲಸ ಪ್ರಾರಂಭವಾಗಿ ಹನ್ನೆರಡು ವರ್ಷವಾಯಿತು. ಎಸ್ಟಿಮೇಟ್ ಹಣವೆಲ್ಲ ಪೂರ್ತಿ ಖರ್ಚಾಗಿದೆ. ಕೆಲಸ ಎಷ್ಟು ಆಗಿದೆ ಎಂದರೆ ಎರಡಾಣೆ ಭಾಗ ಮಾತ್ರ. ಇವೊತ್ತು ಚೀಫ್ ಇಂಜಿನಿಯರ್ ಮೊದಲ್ಗೊಂಡು ಆ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಹಿಂಜರಿಯುತ್ತಾರೆ. ರೈತರು ಇದಕ್ಕೆ ಕಂಟ್ರಿಬ್ಯೂಷನ್ ಕೊಡುತ್ತೇವೆಂದು ಹೇಳಿದ್ದಾರೆ. ಈ ರೀತಿ ಆದರೆ ಸರಕಾರದ ವಿಚಾರದಲ್ಲಿ ಜನಗಳಿಗೆ ಲಘುವಾದ ಭಾವನೆ ಬಂದು ಬಿಗಿ ಇರುವುದಿಲ್ಲ. ಇದನ್ನು ಏತಕ್ಕಾಗಿ ಸಂಬಂಧಪಟ್ಟ ಅಧಿಕಾರಿಗಳು ಗಮನಿಸುವುದಿಲ್ಲವೋ ಅರ್ಥವಾಗುವುದಿಲ್ಲ. ದಯವಿಟ್ಟು ಇಂಥ ಕೆಲಸಗಳನ್ನು ಆದಷ್ಟು ಬೇಗ ಪೂರ್ತಿ ಮಾಡುವುದಕ್ಕೆ

(ಶ್ರೀ ಟಿ. ಎಸ್. ಮಾದಪ್ಪಗೌಡ)

ಏರ್ಪಾಡು ಮಾಡಬೇಕು. ಇನ್ನು ಮುಂದೆ ಆಗಬೇಕಾದ ಕೆಲಸಕ್ಕಾದರೂ ಜವಾಬ್ದಾರಿಯನ್ನು ಗೊತ್ತುಮಾಡಿ, ಈ ಕೆಲಸಗಳು ಬೇಗ ಆಗುವ ರೀತಿಯಲ್ಲಿ ಏರ್ಪಾಡು ಮಾಡಿಕೊಡಬೇಕೆಂದು ಸರ್ಕಾರವನ್ನು ಕೇಳಿಕೊಳ್ಳಬೇಕಾಗಿದೆ.

ನೀರಾವರಿ ಸೌಲಭ್ಯ ಕಡಮೆ ಇರುವ ಪ್ರದೇಶದಲ್ಲಿ Minor Tanks restoration ಕೆಲಸಮಾಡಿ, ಇದರಲ್ಲಿ ಇಷ್ಟೇ ವರಮಾನ ಬರಬೇಕು ಎನ್ನುವುದನ್ನು ನಿಗದಿ ಮಾಡಬೇಡಿ. ಏನೂ ಪ್ರತಿ ಫಲ ಬಾರದೆ ಹೋದರೂ, ಸೇಕಡ ಒಂದರಷ್ಟು ಆದಾಯ ಬಂದರೂ ಕೂಡ ಜನಗಳ ಮೇಲಿನ ಮಮತೆಯಿಂದ ಅಂಥ ಕಡೆ Restorations works ಮಾಡಿ. ಅಣೆಗಳನ್ನೂ ಕಟ್ಟುವುದರಲ್ಲಿ ಎಲ್ಲಿ ಹೆಚ್ಚಿಗೆ ನೀರಿನ ಅನುಕೂಲವಿರುತ್ತದೆಯೋ ಅಲ್ಲಿ ಕಟ್ಟಿದರೆ ಸಾಧ್ಯವೇ ವಿನಾ ಬಾಕಿ ಕಡೆ ಕಟ್ಟಿದರೆ ಒಂದೆರಡು ವರ್ಷದಲ್ಲಿ ಅದು ಹೂತು, ಕೆಳಗೆ ಇರುವ ಜಮೀನುಗಳಿಗೆ ಎಳ್ಳಷ್ಟೂ ಪ್ರಯೋಜನವಾಗುವುದಿಲ್ಲ. ಹೂಳು ತೆಗೆಯುವುದಕ್ಕೆ ನಮ್ಮಲ್ಲಿ ಯಾವ ವ್ಯವಸ್ಥೆಯೂ ಇಲ್ಲ. ಹೀಗಿರುವುದರಿಂದ ಇಂಥ ಸ್ಥಳಗಳಲ್ಲಿ ನಮಗೆ ಮಳೆ ಇಲ್ಲದೆ ಹೋದರೂ ಬೇಕಾದಷ್ಟು ನೀರನ್ನು ಭೂಮಿಯ ಒಳಗೆ ಭಗವಂತ ಕೊಟ್ಟಿದ್ದಾನೆ. ಇದಕ್ಕೆ ನಿದರ್ಶನವಾಗಿ ನಾಗಮಂಗಲ ತಾಲ್ಲೂಕು, ಕೋಲಾರ ಜಿಲ್ಲೆ ಮತ್ತು ತುಮಕೂರಿನ ಕೆಲವು ಭಾಗಗಳಲ್ಲಿ ಬಹಳ ಬಾವಿಗಳಿವೆ. ಚೆನ್ನಾಗಿ ನೀರು ಬಂದಿದೆ. ಶ್ರೀಮಾನ್ ಕೃಷ್ಣಪ್ಪನವರು ಕೇಂದ್ರದಲ್ಲಿ ಉಪಮಂತ್ರಿಗಳಾಗಿ ಇದ್ದಾಗ ಬಹಳ ಮುತುವರ್ಜಿ ವಹಿಸಿ ನಮಗೆ ಕೋಟ್ಯಂತರ ರೂಪಾಯಿಗಳನ್ನು ಬಾವಿಗಳಿಗಾಗಿ ಕೊಟ್ಟರು. ಈ ಯೋಜನೆಯನ್ನು ಅಲ್ಲಿಗೇ ಕೈಬಿಡಬಾರದು. ಅವರು ಈಗ ಇಲ್ಲಿ ಇದ್ದರೂ ಕೂಡ ಡೆಲ್ಲಿಯ ಸಂಪರ್ಕ ಹೆಚ್ಚಾಗಿರುವುದರಿಂದ ಈ ಯೋಜನೆ ಮುಂದುವರಿಯುವುದಕ್ಕೆ ಅನುಕೂಲಮಾಡಿ ಕೊಡಬೇಕು. ಈಗ ನಾವು ಕಣ್ಣಾರೆ ನೋಡಿರತಕ್ಕ ಲೋಪದೋಷಗಳು ನಿರ್ಮೂಲವಾಗಬೇಕಾದರೆ ಬಾವಿಗಳನ್ನು ಲೋಕೋಪಯೋಗಿ ಇಲಾಖೆಯವರು ತಮ್ಮ ವಶಕ್ಕೆ ತೆಗೆದುಕೊಂಡು ಮಾಡಬೇಕು. ಕೆರೆ ಕಟ್ಟೆ ಕೆಲಸ ನಡೆಯುವಾಗ ರೈತರಿಂದ ಕಂಟ್ರಿಬ್ಯೂಷನ್ ವಗೈರೆ ತೆಗೆದುಕೊಳ್ಳುವಂತೆ ಈ ಸಂದರ್ಭದಲ್ಲಿಯೂ ತೆಗೆದುಕೊಂಡು ಬಾವಿ ಕೆಲಸಗಳನ್ನು ಮಾಡಿಕೊಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ವಿದ್ಯುಚ್ಛಕ್ತಿಯ ವಿಷಯ. River valley ಎಲ್ಲೆಲ್ಲಿದೆ ಅಲ್ಲೆಲ್ಲ ಬಾವಿಗಳನ್ನು ತೆಗೆಯುವುದು ನಿಧಾನವಾದರೂ power line ಎಳೆದು ಕೊಡಬೇಕು. ಶರಾವತಿ ಯೋಜನೆಯ ಕೆಲಸ ಮುಗಿದ ಮೇಲೆ ಆದರೂ power line ಎಳೆಯುತ್ತೇನೆ ಎನ್ನುವ ಭರವಸೆಯನ್ನು ಸರ್ಕಾರದವರು ಈಗಲಾದರೂ ಕೊಟ್ಟರೆ ಆಯಾ ಭಾಗದಲ್ಲಿರುವ ರೈತರು ಬಾವಿಗಳನ್ನು ತೆಗೆಸುವುದಕ್ಕೆ ಹುರುಪು ಬರುತ್ತದೆ. ಶರಾವತಿ ಕೆಲಸ ಮುಗಿಯುವುದರೊಳಗಾಗಿ ವಿದ್ಯುತ್ತನ್ನು ಉಪಯೋಗಿಸುವುದಕ್ಕೆ ಸಾಧ್ಯವಾಗುವಂತೆ ಬಾವಿಗಳನ್ನು ತೆಗೆಯುತ್ತಾರೆಂದು ಹೇಳಲು ನಾನು ಆಶಿಸುತ್ತೇನೆ. ಇಷ್ಟು ಮಾತನ್ನು ಹೇಳಿ ನಾನು ಕುಳಿತುಕೊಳ್ಳುತ್ತೇನೆ.

ಶ್ರೀ ಕೆ. ಎಲ್. ಶಿವಲಿಂಗೇಗೌಡ (ವಿರೂಪಾಕ್ಷಿಪುರ).—ಸಭಾಪತಿಗಳೇ, ಈಗ ನಮ್ಮ ಮುಂದೆ ಇರುವ ಬೇಡಿಕೆಗಳನ್ನು ಸ್ವಾಗತಿಸುತ್ತ ಕನಕಪುರ ಮತ್ತು ಚನ್ನಪಟ್ಟಣ ತಾಲ್ಲೂಕುಗಳಿಗೆ ಸಂಬಂಧಪಟ್ಟಹಾಗೆ ಒಂದೆರಡು ಸಲಹೆಗಳನ್ನು ಕೊಡಬೇಕೆಂದು ನಾನು ಇಷ್ಟಪಡುತ್ತೇನೆ. ಬೆಂಗಳೂರು ಜಿಲ್ಲೆ ಇಡೀ ಮೈಸೂರು ದೇಶದಲ್ಲಿ ರಾಗಿ ಬೆಳೆಯುವುದರಲ್ಲಿ ಪ್ರಥಮಸ್ಥಾನ ಪಡೆದಿತ್ತು. ಅದರಲ್ಲಿ ನಮ್ಮ ಕನಕಪುರ ತಾಲ್ಲೂಕು ಮೈಸೂರಿನ ರಾಗಿಯ ಕಣಜ ಎಂದು ಹೆಸರು ಪಡೆದಿತ್ತು. ನಮ್ಮ ದುರದೃಷ್ಟದಿಂದ ಸುಮಾರು ಕಳೆದ ಹತ್ತು ವರ್ಷಗಳಿಂದ ನಮಗೆ ಸಕಾಲದಲ್ಲಿ ಮಳೆಯಾಗದೆ ಸರಿಯಾಗಿ ಬೆಳೆಯಾಗದೆ ಈ ದಿವಸ ನಾವು ಬಹಳ ಕಷ್ಟ ದೆಸೆಯಲ್ಲಿದ್ದೇವೆ. ಹಿಂದೆ ನನಗೆ ತಿಳಿದಮಟ್ಟಿಗೆ ಕೃಷ್ಣರಾಜಸಾಗರಕೆರೆ ಕಟ್ಟುವುದಕ್ಕೆ ಮುಂಚಿತವಾಗಿ ಮಂಡ್ಯ ಜಿಲ್ಲೆಯ ನಮ್ಮ ಬಂಧುಗಳು ಕನಕಪುರ ತಾಲ್ಲೂಕಿಗೆ, ರಾಗಿ ಬೆಳೆ ಕೊಯ್ಯುವುದಕ್ಕೆ ಬರುತ್ತಿದ್ದರು. ಅವರು ಬಹಳ ಹಿಂದುಳಿದಿದ್ದರು ಎಂದು ಕೇಳಿದ್ದೇನೆ. ಈ ದಿವಸ ಮಂಡ್ಯದ ನಮ್ಮ ಸ್ನೇಹಿತರು ಮತ್ತು ಬಂಧುಗಳು ನಮಗೆ ಜೀವನಕ್ಕೆ ಮಾರ್ಗದರ್ಶಕರಾಗಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ, ಕನಕಪುರ ಮತ್ತು ಚನ್ನಪಟ್ಟಣ, ಈ ಎರಡು ತಾಲ್ಲೂಕುಗಳಲ್ಲಿ ಆಗಬೇಕಾಗಿರುವ ಕೆಲವು ಸಣ್ಣ ಪುಟ್ಟ ಕೆರೆಗಳು ಅಥವಾ pickups ಇಂಥವುಗಳನ್ನು ಆದಷ್ಟು ಜಾಗ್ರತೆಮಾಡಿ ಕೊಡುವುದಾದರೆ ಅವರಿಂದ ನಮ್ಮ ಜೀವನಕ್ಕೆ ಅವಕಾಶವಾಗುತ್ತದೆನ್ನುವ ಆಶಯವನ್ನು ನಾವು ಇಟ್ಟುಕೊಂಡಿದ್ದೇವೆ.

ಈಗಾಗಲೇ ಕೆಲಸ ನಡೆಯುತ್ತಿದ್ದು ಮಧ್ಯೇ ನಿಂತು ಹೋಗಿರುವ ಎರಡು ಕೆರೆಗಳ ವಿಷಯವಾಗಿ ನಾನು ಸಲಹೆ ಮಾಡುತ್ತೇನೆ. ಚನ್ನಪಟ್ಟಣ ತಾಲ್ಲೂಕು ನೆರಲೂರು ಕೆರೆ ಕೆಲಸ ಮಂಜೂರಾಗಿ, ಸುಮಾರು ಒಂದು ಲಕ್ಷ ರೂಪಾಯಿಗಳು ಖರ್ಚಾಗಿದ್ದು ಅದನ್ನು ಈಗ ಅಷ್ಟಕ್ಕೇ ನಿಲ್ಲಿಸಿದ್ದಾರೆ. ಅದಕ್ಕೆ ಕಾರಣವಾದರೂ ಇಷ್ಟೇ; ಕೆರೆ ಮಂಜೂರು ಮಾಡಿದರು. ರೆವೆನ್ಯೂ ಇಲಾಖೆಯಿಂದ ಜಮೀನನ್ನೂ ಅಕ್ವೈರ್ ಮಾಡಿಕೊಳ್ಳದೆ, ಮುಳುಗಡೆಯಾದ ಜಮೀನ್ದಾರರಿಗೆ ಪರಿಹಾರ ದೊರೆಯದೆ ಹೋದುದರಿಂದ ಆ ಜಮೀನ್ದಾರರು ಇದಕ್ಕೆ ಅಡ್ಡಿ ಬಂದಿರುವುದರಿಂದ ಈ ಕೆರೆಯ ಕೆಲಸ ನಿಂತಿದೆ. ಆದ್ದರಿಂದ ಈ ಸಂಬಂಧವಾಗಿ ಆದಷ್ಟು ಜಾಗ್ರತೆ ಆ ಜಮೀನನ್ನು ಅಕ್ವೈಯರ್ ಮಾಡಿಸಿಕೊಂಡು ಮುಳುಗಡೆಯಾದವರಿಗೆ ಸಾಕಷ್ಟು ಪರಿಹಾರ ಒದಗಿಸಿಕೊಟ್ಟು ಮತ್ತೆ ಈ ಕೆಲಸ ಮುಂದುವರಿಸಬೇಕು.

ಹಾಗೇನೇ ಇನ್ನೊಂದು ಇದೆ. ಭೀಮ ಪ್ರಾಜೆಕ್ಟಿನಲ್ಲಿ ಎರಡು ತಾಲ್ಲೂಕಿನ ಜಮೀನುಗಳು ಮುಳುಗಡೆಯಾಗುತ್ತವೆ, ಅವು ಯಾವುವೆಂದರೆ ಮಳವಳ್ಳಿ ಮತ್ತು ಕನಕಪುರ. ಮಳವಳ್ಳಿ ತಾಲ್ಲೂಕಿನಲ್ಲಿ ಮುಳುಗಡೆಯಾಗುವ ಜಮೀನುದಾರರಿಗೆ, ಜಮೀನು ಅಕ್ವೈಯರ್ ಮಾಡಿಕೊಟ್ಟಿದೆ; ಪರಿಹಾರವು ದೊರೆತಿದೆ. ಕನಕಪುರದಲ್ಲಿ ಜಮೀನು ಮುಳುಗಡೆಯಾಗುವಂಥವರಿಗೆ, ಜಮೀನು ಅಕ್ವೈಯರ್ ಮಾಡಿಕೊಟ್ಟಿಲ್ಲ, ಅವರಿಗೆ ಪರಿಹಾರವೂ ದೊರೆತಿಲ್ಲ. ಆದ್ದರಿಂದ ಆದಷ್ಟು ಜಾಗ್ರತೆ ಕನಕಪುರ ತಾಲ್ಲೂಕಿನಲ್ಲಿಯ ಜಮೀನು ಅಕ್ವೈಯರ್ ಮಾಡಿಸಿಕೊಡಬೇಕೆಂದು ತಮ್ಮ ಮೂಲಕ ಸಲಹೆ ಮಾಡುತ್ತಿದ್ದೇನೆ.

ಕನಕಪುರದ ತಾಲ್ಲೂಕು ಭೀಮನ ಹಳ್ಳಿ ಹೋಬಳಿಯಲ್ಲಿರುವ ಅರ್ಕಾವತಿನದಿಗೆ ಪ್ರಾಜೆಕ್ಟ್ ಸರ್ವೆ ಆಗಿದೆಯೆಂದು ಕೇಳಿದ್ದೇನೆ. ಆದ್ದರಿಂದ ಸುಮಾರು ನಾಲ್ಕು ಸಾವಿರ ಎಕರೆ ಅಚ್ಚುಕಟ್ಟು ಆಗುತ್ತದೆಂದು ಕೇಳಿದ್ದೇನೆ. ಇದರಲ್ಲಿ ಎರಡು ಸಾವಿರ ಎಕರೆ ರೈತರ ಜಮೀನು ಇದ್ದು, ಇನ್ನುಳಿದ ಎರಡು ಸಾವಿರ ಎಕರೆ ಫಾರೆಸ್ಟ್ ಏರಿಯಾದಲ್ಲಿದ್ದು ಜಮೀನು ಅಚ್ಚುಕಟ್ಟು ಆಗುತ್ತದೆ. ಅದರಿಂದ ಜಮೀನಿಲ್ಲದ ಸುಮಾರು ಒಂದು ಸಾವಿರ ಜನ ರೈತರಿಗೆ ಅನುಕೂಲವಾಗಬಹುದು ಎನ್ನುವುದು ನಮ್ಮ ಅಭಿಪ್ರಾಯವಾಗಿದೆ.

ಅದೇ ಬಿಯಂಬಳ್ಳಿ ಹೊಬಳಿ ಮೆಚ್ಚೆಕುಲ್ಲ್ ಪ್ರಾಜೆಕ್ಟಿಗೆ ಒಂದು ಸರ್ವೆ ಆಗಿದೆ. ಅದಕ್ಕೆ ಸುಮಾರು ನಾಲ್ಕು ಲಕ್ಷರೂಪಾಯಿ ಎಸ್ಟಿಮೇಟ್ ಆಗಿದೆ. ಅದನ್ನು ಸಹ ಕೈಬಿಡುವಹಾಗೆ ಕಾಣುತ್ತಿದೆ. ಈ ಬಜೆಟ್ಟಿನಲ್ಲಿಯೇ ಅದಕ್ಕೆ ಅವಕಾಶ ಮಾಡಿಕೊಟ್ಟು, ಮುಗಿಸಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಶಿಂಷಾ ನದಿಗೂ ಇಗೂರು ಹತ್ತಿರ ಹೋಬಳಿಯಲ್ಲಿ ಪಿಕ್-ಅಪ್ ಹಾಕಲು ಸರ್ವೆ ಮಾಡಿದ್ದಾರೆಂದು ಕೇಳಿದ್ದೇನೆ. ಆದ್ದರಿಂದ ಬಹುಶಃ ಮಳವಳ್ಳಿಯ ಒಂದು ಹೋಬಳಿ, ಕನಕಪುರದ ಸಾತನೂರು ಹೋಬಳಿಗೆ ನೀರು ಒದಗಬಹುದೆಂದು ನಮ್ಮ ಆಸೆ ಇದೆ. ಅದಕ್ಕೆ ಪಿ.ಡಬ್ಲ್ಯು.ಡಿ. ಇಲಾಖೆಯವರು ಅವಕಾಶ ಕಲ್ಪಿಸಿ ಕೊಡಬೇಕು.

ಚನ್ನಪಟ್ಟಣ ತಾಲ್ಲೂಕು ಮಳೂರು ಕೆರೆಯ ಫೀಡರ್ ಚಾನಲ್ ಬಗ್ಗೆ ಸರ್ವೆ ಆಗಿ ೧,೮೦,೦೦೦. ರೂಪಾಯಿಗಳಿಗೆ ಎಸ್ಟಿಮೇಟು ಮಂಜೂರಾಗಿದೆ. ಆದರೆ ಅದಕ್ಕೆ ಈ ಸಾರಿ ಬಜೆಟ್ಟಿನಲ್ಲಿ ಅವಕಾಶ ಮಾಡಿ ಕೊಟ್ಟಿಲ್ಲ; ಅವಕಾಶಮಾಡಿ ಕೊಡಬೇಕು.

[MR. DEPUTY SPEAKER in the Chair]

ಹೀಗೆಯೇ ಹುಣಸನ ಹಳ್ಳ ಹತ್ತಿರ ಕಣ್ವಾನದಿಗೆ ಒಂದು ಪಿಕ್-ಅಪ್ ಆಗಬೇಕೆಂದು ಸರ್ವೆ ಮಾಡಿ, ೮೦೦ ಎಕರೆ ಅಚ್ಚುಕಟ್ಟು ಆಗಬಹುದು ಎಂದು ಪಿ.ಡಬ್ಲ್ಯು.ಡಿ. ಯವರು ಅಂದಾಜುಮಾಡಿದ್ದಾರೆ. ಅದನ್ನು ಈ ಸಾರಿ ಬಜೆಟ್ಟಿನಲ್ಲಿ ಸೇರಿಸಬೇಕೆಂದು ನಾನು ಪ್ರಾರ್ಥಿಸುತ್ತೇನೆ.

ಇನ್ನು ರಸ್ತೆಯ ವಿಚಾರ. ಕೊಳ್ಳೆಗಾಲದಿಂದ ಎಂಟು ಮೈಲಿ ಡಿಸ್ಟ್ರಿಕ್ಟ್ ಬೋರ್ಡ್ ರಸ್ತೆ ಉಳಿದಿದೆ. ಸಾತನೂರಿನಿಂದ ಕಾವೇರಿ ನದಿಯ ತನಕ ಹನ್ನೊಂದು ಮೈಲಿ ಆಗುತ್ತದೆ. ಇದನ್ನು ಪಿ.ಡಬ್ಲ್ಯು.ಡಿ. ಯವರು ವಹಿಸಿಕೊಂಡು ರಸ್ತೆ ಮಾಡಿಕೊಡುವುದಾದರೆ ಕೊಳ್ಳೇಗಾಲ ತಾಲ್ಲೂಕು ಹಾಗೂ ಕನಕಪುರ ತಾಲ್ಲೂಕಿನ ಸಂಪರ್ಕ ಹೆಚ್ಚಾಗುತ್ತದೆ. ವ್ಯಾಪಾರಕ್ಕೆ ಅನುಕೂಲವಾಗುತ್ತದೆ. ಅದರಿಂದ ಈ ಸಾರಿಯೇ ಆ ರಸ್ತೆಯನ್ನು ಪಿ.ಡಬ್ಲ್ಯು.ಡಿ. ಯವರು ಸೇರಿಸಿಕೊಂಡು ಮಾಡಿಸಿಕೊಡಬೇಕೆಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಬೆಂಗಳೂರು ರೋಡಿಗೆ ಅರ್ಕಾವತಿ ನದಿಗೆ ಒಂದು ಸೇತುವೆ ಹಾಕಿಕೊಡಬೇಕೆಂದು ಹಿಂದೆ ಪಿ.ಡಬ್ಲ್ಯು.ಡಿ. ಮಂತ್ರಿಗಳಾಗಿದ್ದ ಶ್ರೀ ಚೆನ್ನಬಸಪ್ಪನವರನ್ನು ನಾವು ಪ್ರಾರ್ಥನೆ ಮಾಡಿಕೊಂಡಿದ್ದೆವು; ಮಾಡಿಕೊಡುತ್ತೇವೆಂದು ಭರವಸೆ ಕೊಟ್ಟಿದ್ದರು. ಆ ಭರವಸೆಯ ಪ್ರಕಾರ ಇದುವರೆಗೆ ಮಾಡಿಕೊಟ್ಟಿಲ್ಲ. ಈಗಿನ ಮಾನ್ಯ ಪಿ.ಡಬ್ಲ್ಯು.ಡಿ. ಮಂತ್ರಿಗಳು ಇದಕ್ಕೆ ಈ ಸಾರಿ ಅವಕಾಶ ಕಲ್ಪಿಸಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ವಿದ್ಯುಚ್ಛಕ್ತಿಯ ವಿಚಾರವನ್ನು ಸ್ವಲ್ಪ ಹೇಳಬೇಕಾಗಿದೆ. ನಮ್ಮ ಕನಕಪುರ ತಾಲ್ಲೂಕಿಗೆ ಶಿಂಶ ಮತ್ತು ಬ್ಲಫ್ ಬಹಳ ಹತ್ತಿರದಲ್ಲಿಯೇ ಇದೆ. ಸಮುದ್ರರಾಜನ ಸಂಬಂಧ ಉಪ್ಪಿಗೆ ಬಡತನ ಎಂಬ ಗಾದೆಯನ್ನು ನಾನು ಈಸಂದರ್ಭದಲ್ಲಿ ಹೇಳಬೇಕಾಗಿದೆ. ಎಲೆಕ್ಟ್ರಿಸಿಟಿ ಉತ್ಪತ್ತಿಯಾಗುವ ಶಿಂಶ ನಮ್ಮ ತಾಲ್ಲೂಕಿನ ಪಕ್ಕದಲ್ಲಿಯೇ ಇದ್ದರೂ, ನಮ್ಮ ತಾಲ್ಲೂಕಿನ ಬಹು ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಇಲ್ಲ. ನೀರಾವರಿ ಅನುಕೂಲತೆ ಇಲ್ಲದೆ ಇದ್ದರೂ ಬಾವಿಗಳ ಮುಖಾಂತರ ಅದನ್ನು ನಿವಾರಣೆ ಮಾಡಿ ಕೊಳ್ಳೋಣವೆಂದರೆ ವಿದ್ಯುಚ್ಛಕ್ತಿ ಕೊರತೆ. ಆ ತೊಂದರೆ ಇರುವುದರಿಂದ ನಾವು ತುಂಬ ತೊಂದರೆ ಅನುಭವಿಸುತ್ತಾ ಇದ್ದೇವೆ. ಆದ್ದರಿಂದ ಇಡೀ ಕನಕಪುರ ಮತ್ತು ಚನ್ನಪಟ್ಟಣ ತಾಲ್ಲೂಕುಗಳಲ್ಲಿ ಯಾವ ಯಾವ ಹಳ್ಳಿಯಲ್ಲಿ ವಿದ್ಯುಚ್ಛಕ್ತಿ ಒದಗಿಸಿಲ್ಲವೋ, ಆಹಳ್ಳಿಗಳಲ್ಲಿ ಸರ್ವೆ ನಡೆಸಿ, ಆದಷ್ಟು ಜಾಗ್ರತೆ ಆತಾಲ್ಲೂಕುಗಳಿಗೆ ವಿದ್ಯುಚ್ಛಕ್ತಿ ಒದಗಿಸಿ, ನಮ್ಮ ಜನಗಳ ಜೀವನಕ್ಕೆ ಅವಕಾಶ ಕಲ್ಪಿಸಿ ಕೊಡಬೇಕು ಎಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಇಷ್ಟು ಮಾತನಾಡಲು ಅವಕಾಶ ಕೊಟ್ಟ ಸಭಾಧ್ಯಕ್ಷರಿಗೆ ವಂದನೆಗಳನ್ನರ್ಪಿಸಿ, ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

Sri SANJEEVANATHA AIKALA (Suratkal).—Sir, on a previous occasion, I described this Department as the "Plundering Wealth Department," (P.W.D) a department to plunder the wealth of the Government. So many speakers who have preceded me have amply justified and fully agreed with me that it is so. I am referring to only one or two points, because, I have to convey my points within two minutes. Without going into all the details as to how that wealth is being plundered, I will only put before you salient features of the topography of our district, where a good number of public works could be undertaken. Our district of South Kanara consists of very good valleys and it is very easy to construct big or small dams within those valleys. We can conserve a large volume of water which ultimately would be a very good source of irrigation. So the Government may conduct certain investigations in this direction and see that a large amount of water is impounded by constructing dams across the two valleys and diverting that water through certain channels to various places for irrigating lands. It would prevent floods during the rainy season too. This is one of the suggestions which we have been placing before the Government from a long time. But we feel that no definite action has been taken in this direction. Another thing to which I want to draw the attention of the Government is at the width of the West Coast Highways. Perhaps the Minister may say that is a part of the Central Government subject. But I was told that it was not so. Because, in Kerala the width of the road was found to be 80 feet only whereas in our district, it is 1 0 feet width, thereby destroying a good portion of the coastal

(SRI SANJEEVANATHA AIKALA)

area where in a large area of agricultural land.

Another thing to which I wish to draw the attention of the Government and about which I had put a question and unfortunately, it was not much discussed—is the in land water canal from Coondapur to Mangalore. It is one of the foolish schemes of the Government, to have a canal from Mangalore to Coondapur, at the cost of nearly four crores of rupees. In the reply of the Hon. Minister I have been given to understand that it is only two crores. But I say that it comes to 4½ crores, and it is an utter waste; since we have no very wide roads to carry goods from Coondapur to Mangalore......

Sri M. V. KRISHNAPPA.—Which Government is doing ?

Sri SANJEEVANATH AIKALA.—Your Government is doing.

Sri M. V. KRISHNAPPA.—Is it the Central Government ?

Sri SANJEEVANATH AIKALA.—The scheme has been initiated by the State Government.....

Sri VEERENDRA PATIL.—I have definitely told you that this is a proposal. The Government of India have not yet decided and the Planning Commission has not included it in the core of the Plan as well. Then, why are you discussing it ?

Sri SANJEEVANATH AIKALA.—You have sanctioned nearly Rs. 59,000 for preliminary survey. The survey is still going on in spite of a lot of representation. There are certain influential members belonging to your Party and they are still pressing the Central Government for this project. So I would request you to prevail upon the Central Government not to proceed with this because it is utterly useless in the present circumstances.

About the width of another coastal road, the Government propose to have a road for tourists near the coastal sea-belt. Of course, we want that road, but what is the width of the road ? Again that is 80 ft. width. That means the whole of the west coast area has been taken for the highway road as well as the tourist road. If this road is so important, let the width of the road be only 25 ft. to 30 ft.

With these remarks, though I had much to say, I thank you for giving me an opportunity. I would request Government to take note of these things and see that no unnecessary waste is committed through this Department.

Mr. DEPUTY SPEAKER.—The House will now rise and meet to-morrow at 10 A.M.

The House adjourned at Five Minutes past Six of the Clock to meet again at Ten of the Clock on Wednesday, the 25th July 1962.